## ಅಭಿನಂದನೆಗಳು

ಭಾರತೀಯ ಜ್ಞಾನಪೀಠ ಪ್ರಶಸ್ತಿಗೆ ಪಾತ್ರರಾದ

**ಶ್ರೀ ಗಿರೀಶ್ ಕಾರ್ನಾಡ್**

ಪದ್ಮ ಭೂಷಣ ಪ್ರಶಸ್ತಿ ಪಡೆದ

**ಪಂಡಿತ್ ಭೀಮಸೇನ ಜೋಶಿ**

ಅತ್ತಿಮಬ್ಬೆ ಪ್ರಶಸ್ತಿ ಪುರಸ್ಕೃತೆ

**ಶ್ರೀಮತಿ ವೈದೇಹಿ**

ಗುಬ್ಬಿ ವೀರಣ್ಣ ಪ್ರಶಸ್ತಿ ಪಡೆದ

**ಶ್ರೀ ಹೆಚ್.ಕೆ.ಯೋಗಾನರಸಿಂಹ**

ವೆಂಕಟಪ್ಪ ಪ್ರಶಸ್ತಿ ಪಡೆದ

**ಶ್ರೀ ಹಡಪದ್**

ಪಂಪ ಪ್ರಶಸ್ತಿ ಭಾಜನರಾದ

**ಶ್ರೀ ಜಿ.ಎಸ್. ಶಿವರುದ್ರಪ್ಪ**

**ಶ್ರೀ ದೇ. ಜವರೇಗೌಡ**

ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ಪಡೆದ

**ಶ್ರೀ ಗಿರೀಶ್ ಕಾಸರವಳ್ಳಿ**

ಇವರಿಗೆ ನೀನಾಸಮ್ ಅಭಿನಂದನೆಗಳು

ಇತ್ತೀಚೆಗೆ ನಮ್ಮನ್ನಗಲಿದ ಮೈಸೂರಿನ ರಂಗಕರ್ಮಿ

**ಶ್ರೀ ಬಾಲಗೋಪಾಲ ವರ್ಮ**

ಕರಾವಳಿಯ ರಂಗಕರ್ಮಿ,ನಮ್ಮ ರಂಗಶಿಕ್ಷಣ ಕೇಂದ್ರದ ಹಳೆಯ ವಿದ್ಯಾರ್ಥಿ

**ಶ್ರೀ ಸುರೇಶ್ ಸೆಟ್ಟಿಗಾರ, ಹಂದಾಡಿ**

ಹಲವು ವರ್ಷ ನೀನಾಸಮ್ ತಿರುಗಾಟದ ವಾಹನಚಾಲಕರಾಗಿದ್ದ

**ಶ್ರೀ ಅಬ್ದುಲ್ ರೆಹಮಾನ್ ಸಾಬ್**

ಇವರಿಗೆ ನೀನಾಸಮ್‌ನ ಶ್ರದ್ಧಾಂಜಲಿ.

## ನೀನಾಸಮ್ ರಂಗಶಿಕ್ಷಣ ಕೇಂದ್ರ

ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭

**ಡಿಪ್ಲೋಮಾ ಇನ್ ಥಿಯೇಟರ್ ಆರ್ಟ್ಸ್**

**ಪ್ರಕಟಣೆ**

ಕರ್ನಾಟಕ ರಾಜ್ಯ ಸರ್ಕಾರದ ಮಾನ್ಯತೆ ಪಡೆದಿರುವ ನೀನಾಸಮ್ ರಂಗಶಿಕ್ಷಣ ಕೇಂದ್ರ ೧೯೯೯-೨೦೦೦ನೇ ಸಾಲಿನ ಪ್ರಶಿಕ್ಷಣಕ್ಕೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತದೆ. ಪ್ರವೇಶಕ್ಕೆ ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. ಇರಬೇಕು. ಪದವೀಧರರಿಗೆ ಆದ್ಯತೆ ಇರುತ್ತದೆ. ರಂಗಭೂಮಿಯಲ್ಲಿ ಆಸಕ್ತಿಯಿದ್ದು, ಸ್ವಲ್ಪಮಟ್ಟಿನ ಅನುಭವ ಇರಬೇಕಾದ್ದು ಅಗತ್ಯ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಊಟ, ವಸತಿ ವ್ಯವಸ್ಥೆಯಿದೆ. ಎಲ್ಲರಿಗೂ ವಿದ್ಯಾರ್ಥಿವೇತನ ದೊರೆಯುತ್ತದೆ.

ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ರಂಗಕಲ್ಪನೆ, ರಂಗಇತಿಹಾಸ, ನಾಟಕಇತಿಹಾಸ, ರಂಗನಟನೆ, ರಂಗಸಿದ್ಧತೆ, ರಂಗವ್ಯವಸ್ಥೆ ಮುಂತಾಗಿ ವಿಸ್ತಾರವಾದ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಶಿಕ್ಷಣ ನೀಡಲಾಗುತ್ತದೆ. ಕೇಂದ್ರದ ನುರಿತ ಅಧ್ಯಾಪಕರುಗಳಲ್ಲದೆ ಹೊರಗಿನ ತಜ್ಞರನ್ನು ಕರೆಸಿ ಸಾಕಷ್ಟು ಪ್ರಬುದ್ಧ ಶಿಕ್ಷಣ ಕೊಡಲಾಗುತ್ತದೆ. ಒಳ್ಳೆಯ ಗ್ರಂಥಭಂಡಾರ ಹಾಗೂ ದೃಶ್ಯಶ್ರವ್ಯ ಪರಿಕರಗಳ ಅನುಕೂಲತೆಯಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರು ಪ್ರತಿದಿನ ಸುಮಾರು ೧೨ ಗಂಟೆಗಳಷ್ಟು ಅಭ್ಯಾಸದಲ್ಲಿ ತೊಡಗಿರಬೇಕಾಗುತ್ತದೆ.

ಪ್ರಾಸ್ಪೆಕ್ಟಸ್ ಮತ್ತು ಪ್ರವೇಶಪತ್ರಕ್ಕೆ ರೂ. ೨೦-೦೦ ಕಳಿಸಿ ಬರೆದುಕೊಳ್ಳಬಹುದು. ಪ್ರವೇಶ ಪತ್ರವನ್ನು ಭರ್ತಿಮಾಡಿ ೨೬-೬-೯೯ ಶನಿವಾರದೊಳಗೆ ನೀನಾಸಮ್ ರಂಗಶಿಕ್ಷಣ ಕೇಂದ್ರ, ಹೆಗ್ಗೋಡು, ಸಾಗರ, ಶಿವಮೊಗ್ಗ ೫೭೭ ೪೧೭ ಈ ವಿಳಾಸಕ್ಕೆ ತಲುಪುವಂತೆ ಕಳಿಸಬೇಕು. ೪-೭-೯೯ ಭಾನುವಾರ ಬೆಳಿಗ್ಗೆ ೯ ಗಂಟೆಗೆ ಅಭ್ಯರ್ಥಿಗಳು ತಮ್ಮ ವೆಚ್ಚದಲ್ಲೇ ಆಯ್ಕೆಯ ಸಂದರ್ಶನಕ್ಕಾಗಿ ಹೆಗ್ಗೋಡಿಗೆ ಬಂದು ಹಾಜರಾಗಬೇಕು. ಸಂದರ್ಶನಕ್ಕೆ ಪ್ರತ್ಯೇಕ ಕರೆಯೋಲೆ ಕಳಿಸುವುದಿಲ್ಲ.

ಹೆಗ್ಗೋಡು
೧೫-೩-೯೯

ಪ್ರಾಂಶುಪಾಲರು
ನೀನಾಸಮ್ ರಂಗಶಿಕ್ಷಣ ಕೇಂದ್ರ

# ಆತಂಕಿತ ಹಿಂದೂ ಮತ್ತು ಕುಪಿತ ರೈತ

## ಜಾಗತೀಕರಣದ ಪ್ರಕ್ರಿಯೆಗೆ ಭಾರತದ ಪ್ರತಿಸ್ಪಂದನೆಯ ಎರಡು ರೂಪಗಳು

ಡಿ.ಆರ್. ನಾಗರಾಜ

### ಭಾಗ ೧

ಸಂಕಷ್ಟದ ಸನ್ನಿವೇಶಗಳಿಗೆ ಹಾಗೂ ಐತಿಹಾಸಿಕ ವಿದ್ಯಮಾನಗಳಿಗೆ ಪ್ರತಿಕ್ರಿಯಿಸುವಲ್ಲಿ ಪ್ರತಿಯೊಂದು ರಾಜಕೀಯ ಸಮುದಾಯದ ಪ್ರತಿಭಾಪ್ರಜ್ಞೆಯೂ ತನ್ನ ಭೂತಕಾಲವನ್ನು ಆಧರಿಸಿರುತ್ತದೆ; ಆ ಭೂತಕಾಲದ ಹಲವಾರು ರೂಪಗಳನ್ನು ಬಳಸಿಕೊಂಡು ವರ್ತಮಾನದ ತನ್ನ ಪ್ರತಿಸ್ಪಂದನೆಯ ಆಕೃತಿಗಳನ್ನು ಪುನರ್‌ರೂಪಿಸಿಕೊಳ್ಳುತ್ತಿರುತ್ತದೆ. ಕಾವ್ಯಮೀಮಾಂಸೆಯ ಮುಖ್ಯವಾದೊಂದು ಪರಿಕಲ್ಪನೆಯಾದ 'ಸಂಮ್ಮಿಶ್ರಣ' ರಾಜಕೀಯ ಚಟುವಟಿಕೆಗಳಲ್ಲಿ ಪುನರವತಾರ ತಾಳುವುದು ಈ ರೀತಿಯಲ್ಲಿ. ಬೌದ್ಧಿಕ ಚರ್ಚೆಯ ಸೂಕ್ಷ್ಮತೆಗಳು ಸಂಕ್ಲಿಷ್ಟತೆಗಳು ಏನೆ ಇರಲಿ, ಜಾಗತೀಕರಣವು ರಾಜಕೀಯ ಕ್ಷೇತ್ರದಲ್ಲಿ ಮಾತ್ರ ನಿರ್ದಯ ಆರ್ಥಿಕ ಉದಾರೀಕರಣದ ರೂಪದಲ್ಲಿಯೆ ಪ್ರಕಟಗೊಳ್ಳುತ್ತದೆ. ರಾಜಕೀಯ ಸಮುದಾಯಗಳಿಗೆ ಇದೇನೂ ಹೊಸತಲ್ಲ; ಅವು ಈ ಮೊದಲೆ ಇಂಥ ಹತ್ತುಹಲವು ಸವಾಲುಗಳನ್ನು ಎದುರಿಸಿಯಾಗಿದೆ. ಜಾಗತೀಕರಣದ ವಿರೋಧಿಗಳಿಗೆ ಅದು ಒಂದು ಸಾಂಸ್ಕೃತಿಕ ಆಕ್ರಮಣವಾಗಿಯೂ ಹಾಗೂ ಸ್ಥಳೀಯ ಸಂಪನ್ಮೂಲಗಳ ಮೇಲಣ ಒಂದು ಲೂಟಿಕೋರ ದಾಳಿಯಾಗಿಯೂ ಆಗಿ ಕಂಡುಬರುತ್ತದೆ. ಇಂಥದೊಂದು ಅನುಭವವನ್ನು ಅರ್ಥೈಸಿಕೊಳ್ಳುವಲ್ಲಿ ರಾಜಕೀಯ ಸಮುದಾಯಗಳಿಗೆ ಸಹಾಯಕವಾಗುವ ಸೈದ್ಧಾಂತಿಕ ಹಾಗೂ ಕ್ರಿಯಾತ್ಮಕ ಮಾದರಿಗಳೆರಡೂ ಗಾಂಧಿಯಂಥವರಲ್ಲಿ ಮಾತ್ರ ಅತ್ಯಂತ ಸ್ಫುಟವಾಗಿ ಕಾಣುತ್ತವೆ. ಈ ನಿಟ್ಟಿನಲ್ಲಿ ಗಾಂಧಿಯ ಪ್ರಭಾವ ಎಷ್ಟು ಗಾಢವಾದುದು ಹಾಗೂ ಸಾರ್ವಕಾಲಿಕವಾದುದು ಎಂದರೆ ಹಳೆಯ ಜಾಗತೀಕರಣದ ಯೋಜನೆಗಿಂತ ಹಲವು ಭಿನ್ನ ರೀತಿಗಳಲ್ಲಿ ಕೆಲಸ ಮಾಡುವ ಹೊಸ ಜಾಗತೀಕರಣದ ಯೋಜನೆಯನ್ನು ವ್ಯಾಖ್ಯಾನಿಸುವಲ್ಲಿಯೂ ಗಾಂಧೀಯ ಮಾದರಿಯೆ ಅತ್ಯಂತ ಉಪಯುಕ್ತವೂ ಶಕ್ತವೂ ಆಗಿ ಕಂಡು ಅದುವೆ ಇಂದು ಹೆಚ್ಚು ಬಳಕೆಯಾಗುತ್ತಿದೆ. ತನ್ಮೂಲಕ, ಜಾಗತೀಕರಣದ ಬಗ್ಗೆ ಪ್ರಸ್ತುತ ಭಾರತೀಯ



ಪ್ರತಿಸ್ಪಂದನೆಗಳು 'ಕಲಬೆರಕೆ' ಯ ರೂಪವನ್ನು ಪಡೆದುಕೊಂಡಿವೆ. ಮೂಲದಲ್ಲಿ, 'ಪಾಸ್ಟೀಷ್' ಎನ್ನುವ ಪಾಶ್ಚಿಮಾತ್ಯ ಸಾಹಿತ್ಯದ ಪರಿಕಲ್ಪನೆ ಕಲಬೆರಕೆಯ ಪ್ರತಿಸ್ಪಂದನೆಗಳನ್ನು ಶೋಧಿಸುವಂಥದ್ದು. ಅದು ಕೇವಲ ಇನ್ನೊಂದರ ಅಣಕವಾಗದೆ ತನ್ನನ್ನೂ ತಾನೇ ಅಣಕಿಸಿಕೊಳ್ಳುತ್ತ ಆತ್ಮಪರೀಕ್ಷೆಯಲ್ಲಿ ತೊಡಗುವಂಥದ್ದು. ಸಮುದಾಯಗಳು ಇಂಥ 'ಸಂಮಿಶ್ರಣ' ದ ಮಾರ್ಗಗಳನ್ನು ಪ್ರಯತ್ನಪೂರ್ವಕವಾಗಿಯೆ ಹಾಗೂ ಉದ್ದೇಶಪೂರ್ವಕವಾಗಿಯೆ ಸೃಷ್ಟಿಸಿಕೊಳ್ಳುತ್ತವೆ. ಸಮಕಾಲೀನ ಭಾರತಕ್ಕೆ ಮರಳಿ ಬಂದರೆ, ಇಲ್ಲಿ ಸದ್ಯದ ರಾಜಕೀಯ ಸಮುದಾಯಗಳು ಇಂಥದೊಂದು ಮಾರ್ಗದ ಮುಖಾಂತರ ತಮ್ಮ ತತ್ವ ಹಾಗೂ ಕ್ರಿಯೆಗಳಲ್ಲಿ ಗಾಂಧಿಯನ್ನು ಮರಳಿ ಕಂಡುಕೊಳ್ಳುವ ಹಾಗೂ ಕಾಣಿಸುವ ಪ್ರಯತ್ನದಲ್ಲಿ ನಿರತವಾಗಿವೆ. ಈ ರಾಜಕೀಯಾತ್ಮಕ 'ಕಲಬೆರಕೆ' ಯ ಮಾದರಿಯು, ಜಾಗತೀಕರಣದ ಆಧುನಿಕ/ ಬಂಡವಾಳಶಾಹಿ ಆಯಾಮಗಳ ಮೂಲಭೂತ ತಂತ್ರಗಳ ಬಗೆಗಿನ ಗಾಂಧಿಯ ಮೂಲ ಪ್ರತಿಸ್ಪಂದನೆಯನ್ನು ಅರ್ಥಮಾಡಿಕೊಳ್ಳಲೂ ಯತ್ನಿಸುತ್ತಿದೆ. ಗಾಂಧಿ ಇಂದೇನಾದರೂ ಬದುಕಿದ್ದಲ್ಲಿ, ತನ್ನ ಬಳುವಳಿಯನ್ನು ಸಮುದಾಯಗಳು ಬಳಸಿಕೊಳ್ಳುತ್ತಿರುವ ರೀತಿಯನ್ನು ಕಂಡು ಆತ ಖಂಡಿತ ಕೊಂಚ ಹುಸಿನಗುತ್ತಿದ್ದ, ಕೊಂಚ ಕಿರಿಕಿರಿಗೊಳ್ಳುತ್ತಿದ್ದ ಹಾಗೂ ಕೊಂಚ ಕ್ರೋಧಗೊಳ್ಳುತ್ತಿದ್ದ. ಹೀಗೆ ಗಾಂಧಿಯನ್ನು ಹಿನ್ನೆಲೆಯಲ್ಲಿಟ್ಟುಕೊಂಡು ಜಾಗತೀಕರಣವನ್ನು ಎದುರಿಸಲು ಹೆಣಗುತ್ತಿರುವ ಭಾರತೀಯ ಸಮಾಜ, ಹಾಗೂ ಆ ಪ್ರಯತ್ನದಲ್ಲಿ ಅದು ರೂಪಿಸಿಕೊಂಡಿರುವ 'ಕಲಬೆರಕೆ' ಪ್ರತಿರೋಧದ ಮಾದರಿಗಳು — ಇವೆರಡನ್ನು ಅರ್ಥೈಸಿಕೊಳ್ಳುವ ಹವಣಿಕೆಯಲ್ಲಿ ಈ ಲೇಖನ ಮೂಡಿ ಬಂದಿದೆ.

ಭಾರತೀಯ ರಾಜಕಾರಣದಲ್ಲಿ ಜಾಗತೀಕರಣದ ವಿಷಯದಲ್ಲಿ ಎರಡು ಪ್ರಮುಖ ಪ್ರತಿಸ್ಪಂದನೆಗಳನ್ನು ಗುರುತಿಸಬಹುದು. ಒಂದು, ಸಂಪ್ರದಾಯಸ್ಥ ಹಿಂದೂ ಅಭಿವ್ಯಕ್ತಿ; ಇದು ತಾನು ಸಾಂಸ್ಕೃತಿಕ ದೇಶೀಯವಾದಿಯೆನ್ನುವ ಸೋಗನ್ನು ತೋರುವಂಥದು; ಇದನ್ನು ನಾನು ಸಂಘ-ಸ್ವದೇಶಿ ಪ್ರತಿಸ್ಪಂದನೆಯೆಂದು ಕರೆಯುತ್ತೇನೆ. ಹಿಂದೂವಾದಿ ರಾಜಕೀಯ ಸಂಘಟನೆ ಹಾಗೂ ಚಳುವಳಿಗಳ ಸಮೂಹವಾದ ಬಲಪಂಥೀಯ ಸಂಘ ಪರಿವಾರದ ಅಂಗಸಂಸ್ಥೆಯಾದ ಸ್ವದೇಶಿ ಜಾಗರಣ ಮಂಚ ಇಂಥದೊಂದು ಪ್ರಾತಿನಿಧಿಕ ಮಾದರಿ. ಎರಡನೆಯದು, ಆರ್ಥಿಕ ಉದಾರೀಕರಣದ ನೀತಿಯಿಂದ ನೇರವಾಗಿ ಸಂಕಷ್ಟಕ್ಕೊಳಗಾದ ಸಮುದಾಯಗಳ ರಾಜಕೀಯಾತ್ಮಕ ಹೋರಾಟದ ಅಭಿವ್ಯಕ್ತಿ. ಕರ್ನಾಟಕದ ರೈತಸಂಘ ಈ ಆಂದೋಲನದ ಮುಂಚೂಣಿಯಲ್ಲಿದೆ; ಆದರ ಅತ್ಯುಚ್ಚ ನಿದರ್ಶನವಾಗಿದೆ. ಪ್ರಸ್ತುತ ಲೇಖನ ಈ ಎರಡೂ ಪ್ರತಿಸ್ಪಂದನೆಗಳ ಸಾಂಸ್ಕೃತಿಕ ರಾಜಕಾರಣದ ಆಯಾಮದಲ್ಲಿ ಅಡಗಿ ಕುಳಿತಿರುವ

ಗಾಂಧಿಯ ವಿಸ್ಮಯಕಾರಿ ಪ್ರಭಾವವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತದೆ; ಹಾಗೆಯೆ, ಅವೆರಡೂ ತಮ್ಮ ತಮ್ಮ ಸ್ವಂತಿಕೆಯನ್ನು ಕಟ್ಟಿಕೊಳ್ಳುವ ಕ್ರಮವನ್ನು ಬಿಚ್ಚಿ ನೋಡಲು ಯತ್ನಿಸುತ್ತದೆ. ಇವೆರಡೂ ಮಾದರಿಗಳು ಭಾರತೀಯತೆಯ ಎರಡು ನಿರ್ದಿಷ್ಟ ಪರಿಕಲ್ಪನೆಗಳಲ್ಲಿ ತಮ್ಮ ಹುಟ್ಟನ್ನು ಪಡೆಯುತ್ತವೆ, ಹಾಗೂ ಆಧುನಿಕತೆ ಮತ್ತು ಆಧುನಿಕ ನಾಗರಿಕತೆಗಳೊಡನೆ ಎರಡು ನಿರ್ದಿಷ್ಟ ರೀತಿಯ ಸಂಬಂಧಗಳನ್ನು ಹೊಂದಿವೆ. ಜೊತೆಗೆ, ಅವೆರಡೂ ಸಹ ಆರ್ಥಿಕ ಜಾಗತೀಕರಣದ ವರ್ತಮಾನ ಘಟ್ಟವನ್ನು, ಪಾಶ್ಚಾತ್ಯ ನಾಗರಿಕತೆ ಹದಿನೆಂಟು-ಹತ್ತೊಂಬತ್ತನೆ ಶತಮಾನಗಳಲ್ಲಿ ಪ್ರಾರಂಭಿಸಿದ ವಿಶ್ವ ಬಂಡವಾಳಶಾಹಿ ಯೋಜನೆಯ ತಾರ್ಕಿಕ ವಿಸ್ತರಣೆಯೆಂದೆ ತಿಳಿಯುತ್ತವೆ.

ಈ ಲೇಖನದ ಹಿಂದಿರುವ ಮತ್ತೊಂದು ಪ್ರಮೇಯವನ್ನೂ ನಾನು ಇಲ್ಲಿಯೆ ಪರಿಚಯಿಸಬೇಕು. ಈ ಪ್ರಮೇಯದ ಪ್ರಕಾರ ಜಗತ್ತಿನಾದ್ಯಂತ ಜಾಗತೀಕರಣಕ್ಕೆ ಪ್ರತಿಸ್ಪಂದನೆಯಾಗಿ ಮೂರು ವಿಭಿನ್ನ ರೀತಿಯ ಸ್ವಂತಿಕೆಯ ಕಥನಗಳನ್ನು ಗಮನಿಸಬಹುದು. ಜಾಗತೀಕರಣದ ಅಂತರ್ಗತ ಸರ್ವಾಧಿಕಾರಿ ಧೋರಣೆಯನ್ನು ಎದುರಿಸುವಲ್ಲಿ ವ್ಯಕ್ತಿ-ಸಮುದಾಯಗಳು ತಮ್ಮ ತಮ್ಮ ಸ್ವಂತಿಕೆಯ ಕಥನಗಳನ್ನು (೧) ಆಸೆಯನ್ನಾಧರಿಸಿಕೊಂಡು (೨) ಹಸಿವೆಯನ್ನಾಧರಿಸಿಕೊಂಡು, ಇಲ್ಲ (೩) ಅರ್ಥವನ್ನಾಧರಿಸಿಕೊಂಡು ಸೃಜಿಸಿಕೊಳ್ಳುತ್ತಾರೆ/ತ್ತವೆ. ಈ ಮೂರೂ ಮಾರ್ಗಗಳು ಜಾಗತೀಕರಣವನ್ನು ಸಂಪೂರ್ಣವಾಗಿ ವಿರೋಧಿಸುತ್ತವೆಯೆಂದೇನೂ ಹೇಳಲಾಗದು. ಉದಾಹರಣೆಗೆ, ಆಸೆಯನ್ನು ಆಧರಿಸಿದ ಕಥನವು, ವಿಶೇಷವಾಗಿ, ಹೊರನೋಟಕ್ಕೆ ಜಾಗತೀಕರಣವನ್ನು ಪ್ರಬಲವಾಗಿ ವಿರೋಧಿಸುವಂತೆ ಕಂಡರೂ ಸಹ ಆಳದಲ್ಲಿ ಅದು ಅದೆ ಯೋಜನೆಯಲ್ಲಿ ತನಗೂ ಒಂದು ಸ್ಥಾನ ಹಾಗೂ ಪಾಲನ್ನು ದೊರಕಿಸಿಕೊಳ್ಳುವ ಗುರಿಯನ್ನಷ್ಟೆ ಹೊಂದಿರುತ್ತದೆ. ಇಲ್ಲಿ ಪ್ರತಿರೋಧವೆನ್ನುವುದು ತಾನು ಪ್ರತಿರೋಧಿಸುವ ಶಕ್ತಿಯ ಗಮನವನ್ನು ಸೆಳೆದು ಅದರ ಮಾನ್ಯತೆಯನ್ನು ಗೆಲ್ಲುವ ಒಂದು ತಂತ್ರ ಮಾತ್ರವಾಗಿರುತ್ತದೆ. ಹಾಗೆ ನೋಡಿದರೆ ಜಾಗತೀಕರಣವೆನ್ನುವುದೆ ಆಸೆಯನ್ನಾಧರಿಸಿದ ಅತಿಬೃಹತ್ತಾದ ಒಂದು ಸಂರಚನೆ; ಆ ಒತ್ತಡದಡಿ ಕೆಲ ನಿರ್ದಿಷ್ಟ ಉತ್ಪಾದನೆಯ ಹಾಗೂ ಉಪಭೋಗದ ಕ್ರಮಗಳನ್ನು ಬಯಸುವ ಮತ್ತು ಸೃಷ್ಟಿಸುವ ಒಂದು ದೈತ್ಯ ವ್ಯವಸ್ಥೆ. ಅದು ಅಲ್ಲಿಗೆ ನಿಲ್ಲದೆ, ತನ್ನ ಉದ್ದೇಶಕ್ಕೆ ಪೂರಕವಾಗುವಂಥ ನಿರ್ದಿಷ್ಟ ರೀತಿಯ ರಾಜಕೀಯ ಹಾಗೂ ಸಾಂಸ್ಕೃತಿಕ ಜೀವನಶೈಲಿಗಳನ್ನು ಅಸ್ತಿತ್ವಕ್ಕೆ ತಂದು, ಅವುಗಳದ್ದೆ ಒಂದು 'ಅರ್ಥ' ವ್ಯವಸ್ಥೆಯನ್ನೂ ನಿರ್ಮಿಸುತ್ತದೆ. ಇಂಥ ದೈತ್ಯವ್ಯವಸ್ಥೆಯನ್ನು ವಿರೋಧಿಸುವ, ಆ ಮೂಲಕ ಅದನ್ನು ಒಲಿಸಿಕೊಳ್ಳಲೆಳಸುವ ಆಸೆಯನ್ನಾಧರಿಸಿದ ಮರಿ ವ್ಯವಸ್ಥೆ ಆ ಪ್ರಯತ್ನದಲ್ಲಿ ಕೆಲವು ಮೂಲಭೂತ ಸಮಸ್ಯೆಗಳನ್ನು ಎದುರಿಸಬೇಕಾಗಿ



ಬರುತ್ತದೆ. ಈ ಮರಿವ್ಯವಸ್ಥೆ ತನ್ನ ನಿರ್ದಿಷ್ಟ ಸಾಂಸ್ಕೃತಿಕ-ಸಾಂಕೇತಿಕ ಆವರಣದಲ್ಲಿ ತನ್ನನ್ನು ಕಟ್ಟಿಕೊಳ್ಳಲು ಎಳೆಸಿದರೆ ದೈತ್ಯ ವ್ಯವಸ್ಥೆ ಅಂಥ ಯಾವುದೆ ಸ್ಥಳೀಯ ವೈಶಿಷ್ಟ್ಯತೆಯನ್ನು ವಿರೋಧಿಸುತ್ತದೆ. ಹಾಗಾಗಿ, ತಾತ್ವಿಕವಾಗಿ ಪರಸ್ಪರ ಹೋಲುವ, ಆದರೆ ಗಾತ್ರದ ಮಟ್ಟಿಗಷ್ಟೆ ಅಪಾರ ಅಂತರವಿರುವ, ಆಸೆಯನ್ನಾಧರಿಸಿದ ಈ ದೈತ್ಯ-ಮರಿ ವ್ಯವಸ್ಥೆಗಳ ನಡುವಿನ ವ್ಯವಹಾರದಲ್ಲಿ ಮರಿ ವ್ಯವಸ್ಥೆಯು ತನ್ನತನವನ್ನು ಮಾತ್ರವಲ್ಲ, ಹಲವೊಮ್ಮೆ ತನ್ನ ರಕ್ತವನ್ನೂ ಕಳೆದುಕೊಳ್ಳಬೇಕಾಗುತ್ತದೆ.

ಎರಡನೆಯ ಪ್ರತಿಸ್ಪಂದನೆಯ ಮಾದರಿ ಹುಟ್ಟುವುದು ಜಾಗತೀಕರಣದ ಉತ್ಪಾದನಾ ವಿಧಾನಗಳ ಹಿಂಸೆಯ ವಿರುದ್ಧದ ಹೋರಾಟದಲ್ಲಿ. ತನ್ನ ಭೋಗ ಸುಖವನ್ನು ಹೆಚ್ಚಿಸಿಕೊಳ್ಳುತ್ತ ಅನ್ಯರ ಹಸಿವನ್ನೂ ಆಹಾರದ ಕೊರತೆಯನ್ನೂ ಹೆಚ್ಚಿಸುತ್ತ ಹೋಗುವುದು ಜಾಗತೀಕರಣದ ಮೂಲ ಗುಣಗಳಲ್ಲೊಂದಾದ್ದರಿಂದ ಅಂಥ ಹಿಂಸೆಯ ವಿರುದ್ಧ ಸ್ಥಳೀಯ ಸಮುದಾಯಗಳು ಸಹಜವಾಗಿ ಸಿಡಿದೇಳುತ್ತವೆ.

ಮೂರನೆಯ ಪ್ರತಿಸ್ಪಂದನೆಯು ವಿಶೇಷವಾಗಿ ತಾತ್ವಿಕ ಪ್ರತಿರೋಧದ ಮೂಲಕ ಪರ್ಯಾಯಗಳನ್ನು ಗಟ್ಟಿಗೊಳಿಸಲೆತ್ನಿಸುವಂಥದು. ಜೀವನದ 'ಅರ್ಥ' ದ ಬಗ್ಗೆ ಜಾಗತೀಕರಣಕ್ಕಿಂತ ಬೇರೆಯೆ ರೀತಿಯ 'ಅರ್ಥ' ಗಳನ್ನು ಹುಡುಕುತ್ತ, 'ಅರ್ಥವಂತಿಕೆ' ಯ ಬಾಳನ್ನು ಕಟ್ಟಲೆಳಸುವಂಥದು. ಪ್ರಸ್ತುತದಲ್ಲಿ, ಬೌದ್ಧ ಧರ್ಮ, ಇಸ್ಲಾಮ್ ಧರ್ಮಗಳಲ್ಲಿ ನಡೆಯುತ್ತಿರುವ 'ನಿಜ ಜೀವನ' ಮಾರ್ಗದ ಕೆಲವು ಹುಡುಕಾಟಗಳು ಇದರ ಅತ್ಯುತ್ತಮ ನಿದರ್ಶನಗಳಾಗಿವೆ.

ಕೆಲವೊಮ್ಮ, ತೀರ ಮೂಲಭೂತ ಭಿನ್ನತೆಗಳಿದ್ದೂ ಈ ಮೂರು ಮಾದರಿಗಳು ಕೆಲವು ಅಂಶಗಳ ಮಟ್ಟಿಗೆ ಪರಸ್ಪರ ಬೆಸೆದುಕೊಳ್ಳುವುದುಂಟು. ಅಂಥಲ್ಲಿ ಆಸೆಯನ್ನಾಧರಿಸಿದ ಮಾದರಿ ಹಾಗೂ ಅರ್ಥವಂತಿಕೆಯನ್ನಾಧರಿಸಿದ ಮಾದರಿಗಳೆರಡು ಕೂಡಿಕೊಂಡು ಧಾರ್ಮಿಕ ಮೂಲಭೂತವಾದದಂತಹ ವಿಚಿತ್ರ ಕಲಬೆರಕೆಯನ್ನು ಸೃಷ್ಟಿಸಬಹುದು. ಮೇಲುನೋಟಕ್ಕೆ ತೋರುವಂತೆ, ಧರ್ಮಾಧಾರಿತ ಮಾದರಿ ಜೀವನದ ಅರ್ಥವನ್ನು ಭೋಗವಸ್ತುಗಳ ಆಚೆಗೆ ಹುಡುಕುವಂತಹುದೇನೊ ನಿಜ. ಸ್ವಂತಿಕೆಯ ಶೋಧದಲ್ಲಿ, 'ಗ್ಲೋಕಲ್' ನಾಗರಿಕತೆಯ ನಿತ್ಯಜೀವನದ ವಸ್ತುಗಳು ಪರ್ಯಾಯ ಆತ್ಮತೃಪ್ತಿಗೆ ಯಾವ ರೀತಿಯಲ್ಲೂ ಸಹಾಯಕವಾಗಲಾರವು ದಿಟ. ಆದಾಗ್ಯೂ ವಿಲಕ್ಷಣವಾದೊಂದು ಕ್ರಮದಲ್ಲಿ ಧಾರ್ಮಿಕತೆ ಹಾಗೂ ಉಪಭೋಗ ವಾದಗಳೆರಡೂ ಸೇರಿಕೊಳ್ಳಬಲ್ಲವು. ಆಗ ಮರ್ಸಿಡಿಸ್ ಬೆಂಝ್‌ಕಾರು ಮತ್ತು ಇಸ್ಲಾಮೀಯ ಅನನ್ಯತೆಗಳೆರಡೂ ಕೈಕೈ ಸೇರಿಸಿ ಒಂದೆ ಮಾರ್ಗದಲ್ಲಿ ಸಾಗಬಲ್ಲವು. ಒಂದೆಡೆ ಅಹಿಂಸೆಯೆ ಪರಮಧರ್ಮವೆಂದು ಸಾರುತ್ತ ಕೆಲವರು ಇನ್ನೊಂದೆಡೆ ಹಿಂದೂ

ಆಟಮ್ ಬಾಂಬನ್ನೂ ತಯಾರಿಸಬಲ್ಲರು. ಇನ್ನು, ಸಣ್ಣಪುಟ್ಟ ಭೋಗವಸ್ತುಗಳ ಮಟ್ಟಿಗೆ ಇಂಥ ವಾದಗಳು ಸೂಕ್ಷ್ಮಾತಿಸೂಕ್ಷ್ಮ ವ್ಯತ್ಯಾಸಗಳನ್ನು ಕೂದಲು ಸೀಳುವ ರೀತಿಯಲ್ಲಿ ಗುರುತಿಸಿ ಸ್ಥಾಪಿಸುವುದುಂಟು.

ಪ್ರಸ್ತುತ ಲೇಖನ ಮುಖ್ಯವಾಗಿ ಮೊದಲ ಎರಡು ರೀತಿಯ ಸ್ವಂತಿಕೆಯ ಕಥನಗಳನ್ನು, ಅಂದರೆ ಹಸಿವೆಯನ್ನಾಧರಿಸಿದ ಹಾಗೂ ಆಸೆಯನ್ನಾಧರಿಸಿದ ಪ್ರತಿಸ್ಪಂದನೆಗಳನ್ನು ತನ್ನ ಲಕ್ಷ್ಯದಲ್ಲಿಟ್ಟುಕೊಂಡಿದೆ. ಮೊದಲೆ ಪ್ರಸ್ತಾಪಿಸಿದಂತೆ ಇವೆರಡೂ ಮಾದರಿಗಳೂ ತಮ್ಮ ಹುಟ್ಟನ್ನು ಪಡೆದುಕೊಂಡಿದ್ದು ಗಾಂಧಿ ಆಧುನಿಕತೆಗೆ ತೋರಿದ ಪ್ರತಿಸ್ಪಂದನದಲ್ಲಿ. ವರ್ತಮಾನದ ಪ್ರತಿಸ್ಪಂದನೆಗಳು ಆ ಮೂಲ ಮಹಾಕಥನದ ಪುನರ್‌ಲೇಖನಗಳೂ ಕಲಬೆರಕೆಗಳೂ ಅಲ್ಲದೆ ಬೇರೇನೂ ಅಲ್ಲ. ಇವೆರಡರಲ್ಲಿ, ಸಂಘ-ಸ್ವದೇಶಿ ಮಾದರಿ ಆಸೆಯನ್ನು ಆಧರಿಸಿದ್ದಾದರೆ ರೈತರ ಮಾದರಿ ಹಸಿವೆಯನ್ನಾಧರಿಸಿದ್ದು. ಈ ನನ್ನ ಪ್ರಮೇಯದ ಅರ್ಥ ಹಾಗೂ ಆಯಾಮಗಳು ಲೇಖನ ಮುಂದುವರಿದಂತೆ ಹೆಚ್ಚು ಸ್ಪಷ್ಟವಾಗುತ್ತ ಹೋಗುತ್ತವೆ.

ಜಾಗತೀಕರಣದ ಆಧುನಿಕ ರೂಪಗಳ ಬಗ್ಗೆ ಗಾಂಧಿ ಅತ್ಯಂತ ಸ್ಫುಟವಾದ ಸಿದ್ಧಾಂತವೊಂದನ್ನು ರೂಪಿಸಿಕೊಂಡಿದ್ದರು ಹಾಗೂ ತನ್ನನ್ನೂ ತನ್ನ ಭಾರತೀಯ ಸಮಾಜವನ್ನೂ ಒಳಗೊಂಡ ಅನೇಕ ಪ್ರಯೋಗಗಳ ನಂತರ ಅವುಗಳನ್ನು ನಿಗ್ರಹಿಸುವ ಹಲವಾರು ಮಾರ್ಗಗಳನ್ನೂ ಅವರು ಸಿದ್ಧಿಸಿಕೊಂಡಿದ್ದರು. ಇಂದು ಭಾರತವೇನಾದರೂ ಜಾಗತೀಕರಣವನ್ನು ಬಂಡವಾಳಶಾಹಿಯ ತಾರ್ಕಿಕ ಮುಂದುವರಿಕೆಯೆಂದು ವ್ಯಾಖ್ಯಾನಿಸಿದ್ದಲ್ಲಿ ಅಂಥ ಅರಿವಿನ ಏಕೈಕ ಮೂಲ ಗಾಂಧಿಯಾಗಿದ್ದಾರೆ. ಅವರು ಬಂಡವಾಳಶಾಹಿಯನ್ನು ಅರ್ಥೈಸಿಕೊಂಡ ಕ್ರಮದ ಬಹುಮುಖ್ಯ ಶಕ್ತಿಯೆಂದರೆ ಅವರು ಕಾಲಜ್ಞಾನಿಯಂತೆ ಆ ವ್ಯವಸ್ಥೆ ಭವಿಷ್ಯದಲ್ಲಿ ತಳೆಯಲಿದ್ದ ರೂಪಗಳನ್ನು ತಮ್ಮ ಕಾಲದಲ್ಲಿಯೆ ಕಂಡುಕೊಂಡವರಾಗಿದ್ದರು. ಆಧುನಿಕತೆ ತಾನು ಹುಟ್ಟುವಾಗಲೆ ತನ್ನ ಅದೃಶ್ಯ ಅವಳಿ ಸೋದರನಂತೆ ಜಾಗತೀಕರಣವನ್ನೂ ಈ ಜಗತ್ತಿಗೆ ಎಳೆದುಕೊಂಡು ಬಂದಿತು. ಆಧುನಿಕತೆಯ ಮಹಾನ್ ಮಾರ್ಮಿಕ ವಿಮರ್ಶೆಯಾದ ತಮ್ಮ 'ಹಿಂದ್ ಸ್ವರಾಜ್' ಕೃತಿಯಲ್ಲಿ ಗಾಂಧಿ ಬಂಡವಾಳಶಾಹಿ ಇತಿಹಾಸದ ಮುಂದಿನ ಘಟ್ಟಗಳಲ್ಲಿ ಬೆಳೆಯುವ ಬಗೆಯ ಬಗ್ಗೆ ಮುನ್ಸೂಚನೆಗಳನ್ನು ನೀಡಿದ್ದರು. ಅವರು ಅಂದು ಭವಿಷ್ಯಜ್ಞಾನಿಯ ರೀತಿಯಲ್ಲಿ ಹೇಳಿದ್ದ ನುಡಿಗಳು ಇಂದು ಅಕ್ಷರಶಃ ನಿಜವಾಗಿವೆ.

ಗಾಂಧಿ ಬಂಡವಾಳಶಾಹಿ-ಆಧುನಿಕತೆಗಳ ಬಗ್ಗೆ ನಡೆಸಿದ ವಿಮರ್ಶೆಯನ್ನು ವಿವಿಧ ರೀತಿಯ ವ್ಯಕ್ತಿಗಳು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸುವಂತಹ ರಾಜಕೀಯಾತ್ಮಕ ಕ್ರಿಯೆಯನ್ನೂ ನಾವಿಂದು ಕಾಣಬಹುದು. ಗಾಂಧಿಯ ಆ ಟೀಕೆಯ ನಿಜವಾದ



ಅರ್ಥವೇನು ಎಂಬುದರ ವಿಷಯವಾಗಿಯೆ ಇಂದು ಚಿಂತಕರಲ್ಲಿ ಹಲವು ರೀತಿಯ ಭಿನ್ನಾಭಿಪ್ರಾಯಗಳುಂಟು. ಹೆಚ್ಚು ಪಾಲು ಚಿಂತಕರು ಅದನ್ನು ಉಪಭೋಗವಾದ ಹಾಗೂ ಭೋಗವಸ್ತುಗಳ ವ್ಯರ್ಥ ಉತ್ಪಾದನೆಯ ಆಧ್ಯಾತ್ಮಿಕ ಖಂಡನೆಯೆಂದೆ ವ್ಯಾಖ್ಯಾನಿಸುತ್ತಾರೆ. ಗಾಂಧಿ ಬಂಡವಾಳಶಾಹಿಯನ್ನು ಅಂತ್ಯವಿಲ್ಲದ ಆಸೆಗಳನ್ನು ಹುಟ್ಟಿಸುವ-ತಣಿಸುವ-ಮತ್ತೆ ಹುಟ್ಟಿಸುವ ರಾಕ್ಷಸ ಯಂತ್ರವ್ಯವಸ್ಥೆಯೆಂದು ಕಂಡಿದ್ದರು. 'ಆಸೆಗಳ ಹಾಗೂ ಯಂತ್ರಗಳ ಅಗಣಿತ ವರ್ಧನ'ವೆಂದು ಗಾಂಧಿ ಬಂಡವಾಳ ಶಾಹಿಯನ್ನು ವರ್ಣಿಸಿದುದು ಆ ವ್ಯವಸ್ಥೆಯನ್ನು ಅರ್ಥೈಸಿಕೊಳ್ಳುವ ಕ್ರಮಕ್ಕೆ ವಾಸ್ತವೋತ್ತರವಾದೊಂದು ಆಯಾಮವನ್ನು ಸೇರಿಸಿತು. ಜಾಗತೀಕರಣವು ಈಗ ಬಂಡವಾಳಶಾಹಿಯ ಅವಿಭಾಜ್ಯ ಅಂಗವೆಂದಂತಾಯಿತು; ಜಗದ್ವ್ಯಾಪ್ತಿಯಿಲ್ಲದ ಬಂಡವಾಳ ನಿಜವಾದ ಬಂಡವಾಳವೇ ಅಲ್ಲವೆಂದಾಯಿತು. ಗಾಂಧಿಗೆ ಆದಿವಾಸಿ ಜನಾಂಗಗಳ ಪೂಜಾರಿಗಿರುವಂತಹ ಆದಿಮ ವಿಸ್ಮಯ ಪ್ರಜ್ಞೆಯೂ ಅದರೊಡನೆ ಲಭ್ಯವಾಗುವಂತಹ ಅಸಾಮಾನ್ಯ ವಿವೇಕವೂ ಇದ್ದುದರಿಂದಲೆ ಅವರಿಗೆ ಬಂಡವಾಳ ಶಾಹಿಯ ಈ ನಿಜಸ್ವರೂಪವನ್ನು ಕಾಣುವುದು ಸಾಧ್ಯವಾಯಿತು. ಅಂತೆಯೆ, ಅದೆ ಕಾರಣದಿಂದಲೆ ಆ ವ್ಯವಸ್ಥೆಯ ಬರುವ ದಿನಗಳ ಬಗ್ಗೆ ಅವರು ನುಡಿದ ಮಾತುಗಳಿಗೆ ಕಾಲಜ್ಞಾನಿಯ ಸರಳತೆಯೂ ಸತ್ವಶಕ್ತಿಯೂ ದಕ್ಕಿದವು. ಇಂಥ ಸನ್ನಿವೇಶದಲ್ಲಿ, ಅವರ ಚಿಂತನೆಗಳ ಆಧ್ಯಾತ್ಮಿಕ ಆಯಾಮವನ್ನಷ್ಟೆ ಆರಿಸಿಕೊಂಡು ಎತ್ತಿ ಹಿಡಿಯುವುದು ಕೆಲವರಿಗೆ ಸುಲಭವಾಯಿತು.

ಅರ್ಥಾತ್, ಇಂಥವರಿಂದ ಗಾಂಧಿ ಬಂಡವಾಳಶಾಹಿ - ಆಧುನಿಕತೆಗಳ ನಿಕಟ ಸಂಬಂಧದ ಬಗ್ಗೆ ನಡೆಸಿದ ವಿಮರ್ಶೆಯು ಆಸೆಯ ಬಗ್ಗೆಯ ತತ್ವಪರಿಚಿಂತನೆಯ ಮಟ್ಟಕ್ಕಷ್ಟೆ ಸಂಕುಚಿತಗೊಂಡಿತು; ಅದೆ ಕಾರಣದಿಂದ, ಪಶ್ಚಿಮದ ಅತಿಲೌಕಿಕತೆಯನ್ನು ತಿರಸ್ಕರಿಸಿದಂಥ ಭಾರತೀಯ ರಾಷ್ಟ್ರೀಯವಾದದ ಚಿರಪರಿಚಿತ ಚಿಂತನೆಯಲ್ಲಿ ಅದು ತನ್ನದೊಂದು ಭದ್ರಗೂಡನ್ನು ಪಡೆದುಕೊಂಡಿತು. ವ್ಯಂಗ್ಯವೆಂದರೆ, ಬಂಡವಾಳಶಾಹಿಯ ಬಗೆಗಿನ ಗಾಂಧಿಯ ವಾಸ್ತವೋತ್ತರ ವಿಮರ್ಶೆ ಪಶ್ಚಿಮಕ್ಕಷ್ಟೆ ಸೀಮಿತವಾಗದೆ ಅದು ಮುಂದೆ ಭಾರತವನ್ನು ಹೊಕ್ಕು ನಡೆಸಬಹುದಾದಂತಹ ಹಾವಳಿಗೂ ವ್ಯಾಪಿಸಿತ್ತು. ಈ ಅರ್ಥದಲ್ಲಿ, ಮುಂದಿನ ದಶಕಗಳಲ್ಲಿ ಬಂದ ರಾಮಮನೋಹರ ಲೋಹಿಯಾ, ಇವಾನ್ ಇಲಿಚ್, ಜಾರ್ಜ್ ಬೆಟೆಲಿಯವರಂತಹ ಆಧುನಿಕ ನಾಗರಿಕತೆಯ ತೀಕ್ಷ್ಣ ವಿಮರ್ಶಕರು ಗಾಂಧಿಯ ಗರ್ಭದಿಂದಲೆ ಹುಟ್ಟಿಬಂದವರು. ತನ್ನನ್ನು ವಿಸ್ತರಿಸಿಕೊಳ್ಳುವಲ್ಲಿ ಉಪಭೋಗಸಂಸ್ಕೃತಿಯು ಎಲ್ಲ ಮಿತಿಗಳನ್ನು ಮೀರುತ್ತ ಹೋಗುತ್ತದೆ, ಅಂಥ ಉಲ್ಲಂಘನೆಯೆ ಅದರ ಚಾಲಕಶಕ್ತಿಯೆಂದು ಗಾಂಧಿ ಬಹುಹಿಂದೆಯೆ ತನ್ನ

ಅನನುಕರಣೀಯ ರೀತಿಯಲ್ಲಿ ನುಡಿದಿದ್ದರು. ಹಾಗೆಯೆ, ತನ್ನದೆ ಹಳೆಯ ರೂಪಗಳನ್ನು ಭಕ್ಷಿಸಿಯಲ್ಲದೆ ಭೋಗ ಸಂಸ್ಕೃತಿಯು ಬೆಳೆಯಲಾರದು. ಅಂತಿಮವಾಗಿ, ಹೀಗೆ ಆಸೆಗಳು ಹೆಚ್ಚುತ್ತಹೋಗುವುದು, ಅವುಗಳನ್ನು ತಣಿಸಲೆಂದು ಹೆಚ್ಚುಹೆಚ್ಚು ಯಂತ್ರಗಳು ಮೈದಾಳುವುದು, ಅಂಥ ಯಂತ್ರಗಳಿಂದ ಮತ್ತೆ ಹೊಸ ರೀತಿಯ ಆಸೆಗಳು ಹುಟ್ಟುವುದು – ಇಂಥ ನಿರಂತರ ವಿಷವರ್ತುಲಾಕಾರದ ಪ್ರಕ್ರಿಯೆಯು ಭಯಾನಕವಾಗಿ ಬೆಳೆಯುತ್ತ ನಡೆದು ಜೀವನದ ಮೂರ್ತ ಮತ್ತು ಅಮೂರ್ತ ಕ್ಷೇತ್ರಗಳೆರಡನ್ನೂ ಆವರಿಸಿಕೊಳ್ಳುತ್ತದೆ. ಕೊನೆಗೆ ಆಸೆಯೆ ಮಾನವಮನದ ಸಹಜಸ್ಥಿತಿಯೆಂದಾಗಿ ಆ ಆಸೆಬುರುಕ ವ್ಯಕ್ತಿತ್ವ ತನ್ನ ತೀಟೆಯನ್ನು ತೃಪ್ತಿಪಡಿಸುವಂಥ ಯಂತ್ರೋಪಕರಣಗಳ ಕನಸು ಕಾಣುತ್ತ ಅವನ್ನು ನನಸು ಮಾಡುವ ಕ್ರಿಯೆಯಲ್ಲಿಯೆ ನಿತ್ಯ ಮುಳುಗಿರುತ್ತದೆ. ಇಂಥ ಉಲ್ಲಂಘನೆಗಳ ಸ್ಥಿತಿಯು ಸೈತಾನನ ಸ್ಥಿತಿಯಲ್ಲದೆ ಬೇರೆನೂ ಅಲ್ಲ.

ಗಾಂಧಿ ಬಂಡವಾಳಶಾಹಿ-ಆಧುನಿಕತೆ-ಜಾಗತೀಕರಣಗಳ ಅಂತಃಸಂಬಂಧವನ್ನು ಅರ್ಥೈಸಿಕೊಂಡ ಕ್ರಮಕ್ಕೆ ಇನ್ನೂ ಸಂಕೀರ್ಣವಾದ ಆಯಾಮವೊಂದಿತ್ತು; ಇದು ಮೇಲೆ ಪ್ರಸ್ತಾಪಿಸಿದ ಬೇರೆ ಆಯಾಮಗಳಂತೆ, ಎಲ್ಲವನ್ನೂ ತನ್ನ ಸ್ವಾರ್ಥಸಾಧನೆಗಾಗಿ ಬಳಸಿಕೊಳ್ಳುವಂತಹ ರಾಜಕೀಯ ಶಕ್ತಿಗಳ ತೆಕ್ಕೆಗೆ ಅಷ್ಟು ಸುಲಭವಾಗಿ ದಕ್ಕದಂಥದಾಗಿತ್ತು. ಉದಾಹರಣೆಗೆ, ಅವರು ಆಸೆಯ ಬಗ್ಗೆ ಮಾಡಿದ ಟೀಕೆಯನ್ನು 'ಧಾರ್ಮಿಕ' ಅಥವಾ 'ಆಧ್ಯಾತ್ಮಿಕ' ರಾಷ್ಟ್ರೀಯವಾದಿಗಳು ಬಹುಬೇಗನೆ ಅದು ತಮ್ಮದೆ ಅಸ್ತ್ರವೆಂಬಂತೆ ಬಳಸತೊಡಗಿದರು. ಆದರೆ ಗಾಂಧಿ 'ಹಸಿವೆ'ಯ ಆಧಾರದ ಮೇಲೆ ಆಧುನಿಕತೆ-ಬಂಡವಾಳಶಾಹಿಯ ವಿರುದ್ಧ ಹೂಡಿದ ಆಂದೋಲನ ಮಾತ್ರ ಇಂಥ ಸಂಕುಚಿತ ಸ್ವಾರ್ಥಸಾಧಕರ ನಿಯಂತ್ರಣಕ್ಕೆ ನಿಲುಕುವಂಥದಾಗಿರಲಿಲ್ಲ. ವಾಸ್ತವತಃ ಇಡಿ 'ಹಿಂದ್ ಸ್ವರಾಜ್' ನ ತಳಮುಖವೆ ಈ ವಾದವಾಗಿತ್ತು. ಅಲ್ಲಿ ಗಾಂಧಿ ವಾದಿಸಿದಂತೆ, ಹೆಚ್ಚುಹೆಚ್ಚು ಆಧುನಿಕ ಯಂತ್ರಗಳೆಂದರೆ ಪಾರಂಪರಿಕ ಗ್ರಾಮೀಣ ಭಾರತೀಯ ಆರ್ಥಿಕ ವ್ಯವಸ್ಥೆಯ ಹೆಚ್ಚುಹೆಚ್ಚು ನಾಶವೆಂದಾಗಿತ್ತು. ಆಧುನಿಕ ತಂತ್ರಜ್ಞಾನದ ಈ ಶೂರ ನವ ವಿಶ್ವ ತನ್ನನ್ನು ಉಳಿಸಿ ಬೆಳೆಸಿಕೊಳ್ಳಬೇಕಾದಲ್ಲಿ ಇತರೆಲ್ಲ ಭಿನ್ನ ತಂತ್ರಜ್ಞಾನೀಯ ಮಾದರಿಗಳನ್ನು ಕ್ರೂರವಾಗಿ ಕೊಲ್ಲುವುದು ಅನಿವಾರ್ಯವಾಗಿತ್ತು. ಅಂದರೆ ಮೂರ್ತ ಅರ್ಥದಲ್ಲಿ, ನೇಕಾರರು, ಕುಂಬಾರರು, ಕಮ್ಮಾರರು, ಮೇದಾರರಂತಹ ಪಾರಂಪರಿಕ ತಂತ್ರಜ್ಞಾನಿಗಳನ್ನು ಆಧುನಿಕ-ಪೂರ್ವ ವಿಜ್ಞಾನವನ್ನವಲಂಬಿಸಿಕೊಂಡ ರೈತರನ್ನೂ, ಒಟ್ಟಾರೆಯಾಗಿ, ಹಲವು ಜೀವನಶೈಲಿಗಳ ಸಮೃದ್ಧ ಸಮಗ್ರ ರಾಶಿಯನ್ನೂ ಆಧುನಿಕತೆ ಈಗ ವಧಿಸತೊಡಗಿತ್ತು. ಗಾಂಧಿ, ಇದಕ್ಕೆ ತದ್ವಿರುದ್ಧವಾಗಿ, ಮಾನವನ ಕೈಗಳೆ ಆತನ ಪ್ರಾಕೃತಿಕ ಹಾಗೂ ಸಾಂಸ್ಕೃತಿಕ



ಸಾಧನಗಳೆಂದು ಪರಿಗಣಿಸಿದರು. ಕಾಯಕದಲ್ಲಿ ತೊಡಗಿದ ಕೈಗಳು ಉಪಯುಕ್ತ ವಸ್ತುಗಳನ್ನು ಮಾತ್ರವಲ್ಲ ವ್ಯಕ್ತಿಯ ಸಮಗ್ರತೆಯನ್ನೂ ಸೃಷ್ಟಿಸುತ್ತವೆ ಎಂದು ಅವರು ತಿಳಿದಿದ್ದರು. ಹಾಗಿದ್ದಾಗ, ಹೆಚ್ಚು ಆಸೆ-ಹೆಚ್ಚು ಯಂತ್ರಗಳ ಜೀವನಕ್ರಮ ಇನ್ನೊಂದೆಡೆ ಹೆಚ್ಚು ಹಸಿವೆ-ಹೆಚ್ಚು ವಿನಾಶಗಳನ್ನು ಹುಟ್ಟುಹಾಕುತ್ತದೆ ಎನ್ನುವುದು ಅವರಿಗೆ ಅತ್ಯಂತ ಸ್ಪಷ್ಟವಾಗಿ ಗೋಚರಿಸಿತ್ತು. ಈ ಕಾರಣ, ಬಂಡವಾಳಶಾಹಿ ಹಾಗೂ ಆಧುನಿಕತೆಗಳು ವಿಶ್ವವ್ಯಾಪಿಯಾಗಿ ಹರಡುತ್ತಿದ್ದಂತೆ ಅವು ಜಗತ್ತಿನ ಅನ್ಯ ಜನಸಮುದಾಯಗಳನ್ನೆಲ್ಲ ವಿನಾಶದ ಪ್ರಪಾತಕ್ಕೆ ತಳ್ಳುತ್ತ ನಡೆಯುತ್ತವೆ ಎಂಬುದನ್ನು ಅವರು ಅಷ್ಟು ಮೊದಲೆ ಕಂಡಿದ್ದರು.

ಇಲ್ಲಿಯೆ ಈ ಕಥೆಯ ಮುಖ್ಯ ಅಂಶ ಅಡಗಿರುವುದು: ಅಂದಿನ ಇಡಿ ಗಾಂಧಿ ಇಂದು ಇಬ್ಭಾಗವಾಗಿ ಸೀಳಿ ಹೋಗಿದ್ದಾರೆ; ಅವರ ಒಂದು ಭಾಗವನ್ನು – ಆಸೆಯ ಟೀಕೆಯನ್ನು – ಸಮಕಾಲೀನ ಹಿಂದೂ ಮತೀಯವಾದಿಗಳು ತಮ್ಮ ಕೈವಶಪಡಿಸಿಕೊಂಡು ಅದನ್ನು ಹಿಂದೂ ಅನನ್ಯತೆಯ ಒಂದು ಅಂಶವನ್ನಾಗಿ ಪರಿವರ್ತಿಸಲು ಪ್ರಯತ್ನಿಸುತ್ತಿದ್ದಾರೆ. ಇನ್ನೊಂದೆಡೆ, ಹಸಿವೆಯ ಆಧಾರದ ಮೇಲೆ ಗಾಂಧಿ ಆಧುನಿಕತೆಯನ್ನು ಟೀಕಿಸಿದ ಕ್ರಮವನ್ನು ಇಂದಿನ ರೈತರು ತಮ್ಮ ಮುಖ್ಯ ಅಸ್ತ್ರವನ್ನಾಗಿಸಿಕೊಂಡು ಅದರ ಮೂಲಕ ಜಾಗತೀಕರಣವನ್ನು ವಿರೋಧಿಸಲು ಯತ್ನಿಸುತ್ತಿದ್ದಾರೆ. ಇವೆರಡೂ ಪ್ರತಿಸ್ಪಂದನೆಗಳ ಹಿಂದೆ, ಸ್ವಂತಿಕೆಯ ಪರಿಕಲ್ಪನೆಯನ್ನು ಕಟ್ಟಿಕೊಳ್ಳುವ ಹಾಗೂ ಸಾಕಾರಗೊಳಿಸಿಕೊಳ್ಳುವ ಪ್ರಕ್ರಿಯೆಗಳ ಅನಿವಾರ್ಯ ಅಂಗವೆಂಬಂತೆ, ಹಿಂಸೆಯ ಸಾಧ್ಯತೆ ಅಡಗಿಕೂತಿದೆ, ಮಾತ್ರವಲ್ಲ, ಅದು ಈ ಪ್ರಕ್ರಿಯೆಗಳ ಇತರೆಲ್ಲ ಮುಖ್ಯ ಅಂಶಗಳನ್ನು ಮುಳುಗಿಸುವ ಭಯಹುಟ್ಟಿಸಿದೆ.

ಹಿಂದೂ ಮತೀಯವಾದಿ ಮಾದರಿ ರೂಪುಗೊಂಡದ್ದು ಗಾಂಧಿ ತನ್ನ ಮಾದರಿಯನ್ನು ಕಟ್ಟಿಕೊಳ್ಳುತ್ತಿದ್ದ ಕಾಲಾವಧಿಯಲ್ಲಿಯೆ. ಆದರೆ ಇವೆರಡರ ನಡುವೆ ಅತಿಮುಖ್ಯವಾದ ಕೆಲವು ವ್ಯತ್ಯಾಸಗಳಿವೆ. ನಿಜ ಹೇಳುವುದಾದರೆ, ಈ ಭಿನ್ನತೆಗಳೆ ಮುಂದೆ ಹಿಂದೂ ಮತಾಂಧನೊಬ್ಬನ ಕೈಯಲ್ಲಿ ಗಾಂಧಿಯ ಹತ್ಯೆಯಾಗುವುದಕ್ಕೆ ಕಾರಣವಾದವು. ಈ ಇಡಿ ವಿದ್ಯಮಾನವನ್ನು ಆಶೀಷ್ ನಂದಿ ತಮ್ಮ ಮಾರ್ಮಿಕ ಲೇಖನವೊಂದರಲ್ಲಿ ಚರ್ಚಿಸಿದ್ದಾರೆ. ಹಿಂದೂ ವ್ಯಕ್ತಿತ್ವದ ಬಗ್ಗೆ ಅಂದು ಉದ್ಭವಗೊಂಡ ಭಿನ್ನಾಭಿಪ್ರಾಯ ಎಷ್ಟು ಮೂಲಭೂತವಾದುದಾಗಿತ್ತೆಂದರೆ ಅದು ಇಂದಿಗೂ ಉಳಿದುಕೊಂಡಿದೆ; ಜಾಗತೀಕರಣದ ವಿರುದ್ಧದ ಪ್ರತಿಸ್ಪಂದನೆಗಳನ್ನು ರೂಪಿಸುತ್ತಲೂ ಹೋಳು ಮಾಡುತ್ತಲೂ ಮುನ್ನಡೆದಿದೆ.

ಹಿಂದೂ ಮತೀಯವಾದಿಗಳು ಹಾಗೂ ಬಡರೈತರ ಈ ಎರಡು ವಿಭಿನ್ನ

ಪ್ರತಿಸ್ಪಂದನೆಗಳ ಹಿಂದೆ ಸಾಂಸ್ಕೃತಿಕ ಸಂರಚನೆಯನ್ನು ಪರಿಗ್ರಹಿಸುವ ವಿಧಾನಗಳ ಭಿನ್ನತೆಯ ಗಾಢ ಪ್ರಭಾವವಿದೆ. ಮತೀಯವಾದಿಗಳು ಭಾರತೀಯ ಸಂಸ್ಕೃತಿ-ಸಮಾಜಗಳನ್ನು ಏಕಾಕೃತಿಗಳೆಂದು ಸ್ಥಾಪಿಸಲು ಹೊರಟರೆ, ರೈತವರ್ಗ ಅವುಗಳನ್ನು ಬಹುಮುಖಿಗಳೆಂದು ನೋಡುತ್ತಾರೆ. ಇಷ್ಟೆಲ್ಲ ಇದ್ದರೂ ಕೆಲವು ಆಯಾಮಗಳ ಮಟ್ಟಿಗೆ ಅವರಿಬ್ಬರೂ ಸಮಾನ ಅಂಶಗಳನ್ನು ಹೊಂದಿರುವಂತೆ ತೋರುತ್ತದೆ. ಆದರೆ ಈ ಸಾಮಾನ್ಯತೆ ಕೇವಲ ಮೇಲ್ಪದರದ್ದು, ಹುಸಿಯಾದುದು. ಇಂಥ ಸಮಸ್ಯೆ ಗಾಂಧಿಯನ್ನೂ ಬಾಧಿಸದೆ ಬಿಡಲಿಲ್ಲ. ತೀರ ಇತ್ತೀಚಿನವರೆಗೂ ಧರ್ಮನಿರಪೇಕ್ಷತಾವಾದಿಗಳು ಮತ್ತು ಆಧುನಿಕತಾವಾದಿಗಳು ಗಾಂಧಿ ಹಾಗೂ ಹಿಂದೂ ಧರ್ಮಾಂಧರನ್ನು ಒಂದೆ ಪಂಗಡಕ್ಕೆ ಸೇರಿಸಿದ್ದುಂಟು. ಗಾಂಧಿ ತನ್ನ ಚಿಂತನೆಯಲ್ಲಿ ಬಹುಮಟ್ಟಿಗೆ ಹಿಂದೂಧರ್ಮಮೂಲದ ಪ್ರತೀಕ ಮತ್ತು ರೂಪಕಗಳನ್ನು ಉದ್ಧರಿಸುತ್ತಿದ್ದುದು ಅವರ ಅಸಮಾಧಾನಕ್ಕೆ ಕಾರಣವಾಗಿತ್ತು. ಆದರೆ ಗಾಂಧಿ ಹತ್ಯೆಯ ಪ್ರಸಂಗ ಸಂಶಯಾತೀತವಾಗಿ ತೋರಿದಂತೆ ಅವರು ಹಿಂದೂ ಧರ್ಮದ ಭಾಷೆಯನ್ನು ಬಳಸುತ್ತಲೆ ಅತ್ಯಂತ ವಿಶ್ವಾತ್ಮಕರಾಗಿದ್ದರು, ಹಾಗೂ ಅವರ ಕೊಲೆಗಡುಕ ವಾಸ್ತವವಾಗಿ, ಭಾರತೀಯ ವೇಷ ಧರಿಸಿದ್ದರೂ ಅಂತರಂಗದಲ್ಲಿ ಪಾಶ್ಚಿಮಾತ್ಯನಾಗಿದ್ದ.

ಹೊರಹೋಲಿಕೆ ಮತ್ತು ಒಳಭಿನ್ನತೆಗಳ ನಡುವಿನ ಈ ಸಂಘರ್ಷ ಭಾರತೀಯ ರಾಜಕಾರಣವನ್ನು ಅಂದಿನಿಂದ ಇಂದಿನವರೆಗೂ ಬಾಧಿಸುತ್ತ ಬಂದಿದೆ. ಇತಿಹಾಸದ ವ್ಯಂಗ್ಯವೆಂದರೆ, ಹಿಂದೂ ಮತಾಂಧರ ಮಾದರಿಗಿಂತ ಗಾಂಧಿ ಮಾದರಿ ಇಂದು ಎಷ್ಟೊ ಪಾಲು ಹೆಚ್ಚು ಮೌಲ್ಯವನ್ನೂ ನ್ಯಾಯಶಕ್ತಿಯನ್ನೂ ಪಡೆದುಕೊಂಡಿದ್ದು, ಈಗ ಆ ಮತಾಂಧರು ತಮ್ಮ ಸ್ವಾರ್ಥಸಾಧನೆಗೆಂದು ತಾವು ಅಂದು ಕೊಲೆಗೈದ ವ್ಯಕ್ತಿಯನ್ನೆ ತಮ್ಮ ಇಂದಿನ ಆದರ್ಶಗಳಲ್ಲೊರ್ವನೆಂದು ನಾಟಕ ಹೂಡುತ್ತಿದ್ದಾರೆ.

### ಭಾಗ ೨:

'ಈ ಸವಾಲನ್ನು (ಅಂದರೆ, ಬಹುರಾಷ್ಟ್ರೀಯ ಕಂಪನಿಗಳ ದಾಳಿಯ ಸವಾಲನ್ನು) ಯಶಸ್ವಿಯಾಗಿ ಎದುರಿಸುವಲ್ಲಿ ಸ್ವದೇಶಿ ವಾದವನ್ನು ಹಾಗೂ ರಾಷ್ಟ್ರೀಯತಾ-ವಾದವನ್ನು ಬಿಟ್ಟು ಅನ್ಯ ಮಾರ್ಗಗಳಾವುವೂ ಇಲ್ಲ ಎನ್ನುವುದು ಸ್ಪಷ್ಟ. ಈ ಪ್ರಾಚೀನ ರಾಷ್ಟ್ರದ ಪರಂಪರೆ ಹಾಗೂ ಮೌಲ್ಯಗಳಲ್ಲಿ ಬೇರೂರಿನಿಂತ ಜೀವನಶೈಲಿ ಮತ್ತು ಆರ್ಥಿಕ ನಿಲುವುಗಳು ಮಾತ್ರ ದೇಶಕ್ಕೆ ಸ್ವಾವಲಂಬನೆ, ಸಮೃದ್ಧಿ ಹಾಗೂ ಸ್ವಾತಂತ್ರ್ಯವನ್ನು ತಂದುಕೊಡಬಲ್ಲವು.' (ರಾಷ್ಟ್ರೀಯ ಸ್ವಯಂಸೇವಕ ಸಂಘದ ಒಂದು ನಿರ್ಣಯ-ಮಾರ್ಚ್ ೧೯೯೫).



ಭಾರತೀಯ ಸಾಹಿತ್ಯ ಮೀಮಾಂಸಕರು ಒಂದು ಶಬ್ದ ಸಾಹಿತ್ಯಕತೆಯನ್ನು ಗಳಿಸುವಲ್ಲಿ ಬಳಸುವ ಮೂರು ಮಾರ್ಗಗಳನ್ನು ಗುರುತಿಸುತ್ತಾರೆ; ಇವು 'ಆಕಾಂಕ್ಷಾ', 'ಯೋಗ್ಯತಾ' ಹಾಗೂ 'ಸನ್ನಿಧಿ'. ಸಂಪ್ರದಾಯಶರಣ ಹಿಂದೂಗಳು ತಮ್ಮ ಸಾಂಸ್ಕೃತಿಕ ಸ್ವಂತಿಕೆಯನ್ನು ಸ್ಥಾಪಿಸಲು ಬಳಸುವ ವಿಧಾನಗಳನ್ನೂ ಕೂಡ ಇದೆ ಮೂರು ಮಾದರಿಗಳ ಮೂಲಕ ಅರ್ಥೈಸಿಕೊಳ್ಳಬಹುದು. ಈ ಹಿಂದೂಗಳು ಜಾಗತೀಕರಣವನ್ನು ವಿರೋಧಿಸುವಲ್ಲಿ ಗಾಂಧಿಯ 'ಸನ್ನಿಧಿ' ಯನ್ನು ಬಳಸಿಕೊಳ್ಳುತ್ತಾರೆ. ಆದರೆ, ಹಾಗೆ ಮಾಡುವಲ್ಲಿ ಅವರ 'ಯೋಗ್ಯತೆ' ಗಾಂಧಿಯ ಯೋಗ್ಯತೆಗಿಂತ ತುಂಬಾ ಭಿನ್ನವಾದುದು. ಜೊತೆಗೆ, ಈ ಹಿಂದೂ ಮಾದರಿಯ 'ಆಕಾಂಕ್ಷೆ' ಗಳು ಗಾಂಧಿ ಮಾದರಿಯದಕ್ಕಿಂತ ತೀರಾ ಮೂಲಭೂತವಾಗಿಯೆ ಬೇರೆಯಾಗಿರುವಂಥವು.

ಸಂಘ-ಸ್ವದೇಶಿ ಪ್ರತಿಸ್ಪಂದನೆಯ ಒಂದು ಮುಖ್ಯ ಲಕ್ಷಣವೆಂದರೆ ಅದು ಜಾಗತೀಕರಣ ಹಾಗೂ ಆರ್ಥಿಕ ಉದಾರೀಕರಣಗಳ ಮೂಲ ಸ್ವರೂಪದ ಜೊತೆಗೆ ಯಾವುದೆ ಆತ್ಯಂತಿಕ ಭಿನ್ನಾಭಿಪ್ರಾಯವನ್ನೂ ಹೊಂದಿಲ್ಲ. ಜಾಗತಿಕ ಮಾರುಕಟ್ಟೆಯ ವ್ಯವಸ್ಥೆಯು ಉತ್ಪಾದಕ ಹಾಗೂ ಅನುತ್ಪಾದಕ ಸ್ತರಗಳೆರಡರಲ್ಲೂ ಉತ್ತೇಜಿಸುವ ಉಪಭೋಗವಾದವನ್ನು ಅದು ಎಲ್ಲೂ ವಿರೋಧಿಸುವುದಿಲ್ಲ. ಅದು ಕೇಳುವುದು ಬದಲಿಗಳನ್ನು ಮಾತ್ರ; ಪಾಶ್ಚಿಮಾತ್ಯ ಉತ್ಪಾದಕರು ಹಾಗೂ ಉತ್ಪಾದನೆಗಳ ಜಾಗದಲ್ಲಿ ಭಾರತೀಯ ಉತ್ಪಾದಕರು ಹಾಗೂ ಉತ್ಪಾದನೆಗಳನ್ನು ಸ್ಥಾಪಿಸುವುದಷ್ಟೆ ಅದರ ಜಾಗತೀಕರಣ-ವಿರೋಧದ ಗುರಿಯಾಗಿದೆ. ಸಂಘ-ಸ್ವದೇಶಿ ಪರಿವಾರ ಪ್ರಚುರಿಸಿರುವ ಬದಲಿ ವಸ್ತುಗಳ ಪಟ್ಟಿಯನ್ನೊಮ್ಮೆ ನೋಡಿದರೆ ಸಾಕು, ಅವರ ಈ ತಂತ್ರ ನಿಚ್ಚಳವಾಗುತ್ತದೆ. ಅದರ ಪ್ರಕಾರ ಬಹುರಾಷ್ಟ್ರೀಯ ಸಂಸ್ಥೆಯೊಂದರ ಉತ್ಪನ್ನವಾದ ಕೋಲ್ಗೇಟ್ ಟೂತ್‌ಪೇಸ್ಟನ್ನು ಬಿಟ್ಟು ಭಾರತೀಯರು ದೇಶೀಯ ವಿಕೋ ವಜ್ರದಂತಿಯನ್ನು ಬಳಸಬೇಕು. ಇದಕ್ಕಿಂತ ಮುಖ್ಯವಾಗಿ, ಬಳಕೆದಾರರ ನಡವಳಿಕೆಯ ವಿಷಯದಲ್ಲಿ ಜಾಗತೀಕರಣ-ಬಂಡವಾಳಶಾಹಿಯ ನಿಲುವನ್ನು ಸಂಘ-ಸ್ವದೇಶಿ ಪರಿವಾರವು ಯಾವುದೇ ಪ್ರಶ್ನೆಯಿಲ್ಲದೆ ಒಪ್ಪಿಕೊಳ್ಳುತ್ತದೆ. ಉಪಭೋಗ ಸಂಸ್ಕೃತಿಯ ಮೇರೆಯಿಲ್ಲದ ಆಸೆ-ದುರಾಸೆಗಳನ್ನು ಯಾವುದೆ ಅನುಮಾನದಿಂದ ನೋಡದೆ, ಅವುಗಳನ್ನು ನಿಯಂತ್ರಿಸಬೇಕಾದ ಅನಿವಾರ್ಯತೆಯ ಬಗ್ಗೆ ಒಂದು ಮಾತನ್ನೂ ಆಡದೆ ಈ ಪರಿವಾರ ಭೋಗವಸ್ತುಗಳ ಒಂದು ರಾಶಿಯ ಬದಲಾಗಿ ಮತ್ತೊಂದು ರಾಶಿಯನ್ನು ಸ್ಥಾಪಿಸುವ ಪ್ರಯತ್ನವನ್ನಷ್ಟೆ ಮಾಡುತ್ತದೆ. ಜಾಗತಿಕ ಮಟ್ಟದ ಉತ್ಪಾದಕನ ಉದ್ದೇಶ ಅಭಿರುಚಿ ಹಾಗೂ ಆಯ್ಕೆಗಳೆರಡರ ಮಟ್ಟಿಗೂ ಪೂರ್ವನಿಯಂತ್ರಿತನಾದ ಜಗತ್ ಸಾಮಾನ್ಯ ಬಳಕೆದಾರನನ್ನು ಸೃಷ್ಟಿಮಾಡುವುದಾದರೆ, ಸಂಘ ಪರಿವಾರವು ಸ್ಥಳೀಯ

ಮಟ್ಟದಲ್ಲಿ ಬಳಕೆದಾರನಿಗೆ ಆಯ್ಕೆಯ ಸ್ವಾತಂತ್ರ್ಯವನ್ನು ದೊರಕಿಸಿಕೊಡುವುದಷ್ಟೆ ಆಗಿದೆ. ಜಾಗತಿಕ ಬಂಡವಾಳಶಾಹಿಗೂ ಸಂಘ-ಸ್ವದೇಶಿ ಪರಿವಾರಕ್ಕೂ ಇರುವ ಈ ಮೂಲಭೂತ ಸಾಮ್ಯತೆ ಕುತೂಹಲಕಾರಿಯಾದುದು, ಹೆಚ್ಚಿನ ಅಧ್ಯಯನವನ್ನು ಬೇಡುವಂಥದು. ಸ್ವದೇಶಿ ಪರಿವಾರ ಒತ್ತಾಯಿಸಿ ಕೇಳುವ ಬಳಕೆದಾರನ ಆಯ್ಕೆಯ ಸ್ವಾತಂತ್ರ್ಯವು ಜಾಗತಿಕ ಬಂಡವಾಳಶಾಹಿಯು ಪೋಷಿಸುವ ಭೋಗ ಸಂಸ್ಕೃತಿಯ ಅಂತರ್ಗತವಾದೊಂದು ಅಂಶವೆ ಆಗಿದೆ. ಈ ರೀತಿಯಲ್ಲಿ, ಸಂಘ ಪರಿವಾರದ ಒಟ್ಟಾರೆ ಯೋಜನೆ ಜಾಗತೀಕರಣದ 'ಸಂವಿಧಾನ'ವನ್ನು ಮರುಮಾತಿಲ್ಲದೆ ಸಂಪೂರ್ಣವಾಗಿ ಒಪ್ಪಿಕೊಂಡು, ನಂತರ ಅದರ ಚೌಕಟ್ಟಿನೊಳಗಡೆಗೆ ತನ್ನ 'ಮೂಲಭೂತ ಹಕ್ಕು' ಗಳನ್ನು ಪ್ರತಿಪಾದಿಸುವುದಷ್ಟೆ ಆಗಿದೆ. ಅದು ಎಂದೂ ಗ್ರಾಹಕ ಸಂಸ್ಕೃತಿಯ, ಆ ಮೂಲಕ ಜಾಗತೀಕರಣದ ಬುಡವನ್ನೆ ಅಲುಗಾಡಿಸುವಂತಹ ಪ್ರಶ್ನೆಗಳನ್ನು ಕೇಳಿಲ್ಲ.

ಕೈಗಾರಿಕೋತ್ತರ ಮಾರುಕಟ್ಟೆಯ ಪ್ರಕಾರ ಆಧುನಿಕ ಗ್ರಾಹಕನಿಗಿರುವ ಆಯ್ಕೆಯ ಸ್ವಾತಂತ್ರ್ಯ ಅನಂತವಾದುದು. ಹೀಗೆ ವಾದಿಸುವುದು ಮಾರುಕಟ್ಟೆಗೆ ಅನಿವಾರ್ಯ; ಯಾಕೆಂದರೆ ಗ್ರಾಹಕನ ವಿಶ್ವಾಸ ಗಳಿಸಿಕೊಳ್ಳಲು ಅದಕ್ಕೆ ಬೇರೆ ದಾರಿಯಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಅಂತರ್ರಾಷ್ಟ್ರೀಯ ಬಂಡವಾಳಶಾಹಿಯ ತಾರ್ಕಿಕಗತಿಯ ಪ್ರಕಾರ ಬಳಕೆದಾರನ ಆಯ್ಕೆಯ ಸ್ವಾತಂತ್ರ್ಯ ವಾಸ್ತವವಾಗಿ ಅಷ್ಟೆಲ್ಲ ಅನಂತವಾಗಿರಲು ಸಾಧ್ಯವಿಲ್ಲ. ಕಲ್ಪನೆಯಲ್ಲಿ ಅದು ಹಾಗೆ ಕಂಡರೂ ಆಯ್ಕೆಯ ಮುಕ್ತತೆಯ ಸೋಗಿನಡಿ ಪಾಶ್ಚಿಮಾತ್ಯ ಪೂರ್ವಾಗ್ರಹಗಳ ನಿಯಂತ್ರಣ ಇದ್ದೆ ಇರುತ್ತದೆ. ಜಾಗತೀಕರಣದ ಮೂಲ ಗುರಿಯೆ ಜಗತ್ತಿನಾದ್ಯಂತ ನಿರ್ದಿಷ್ಟ ಏಕೈಕ ರೀತಿಯ ರುಚಿಯನ್ನೂ ಉಪಭೋಗದ ಮಾದರಿಯನ್ನೂ ಸೃಷ್ಟಿಸುವುದಾಗಿದೆ; ಅರ್ಥಾತ್ ನಿರ್ದಿಷ್ಟ ಪ್ರತಿಷ್ಠಿತ ಸಂಸ್ಕೃತಿಯೊಂದರ ಜೀವನಕ್ರಮವನ್ನು ಉಳಿದೆಲ್ಲ ಸಂಸ್ಕೃತಿಗಳ ಮೇಲೆ ಸಮ್ಮೋಹನ ತಂತ್ರದ ಮೂಲಕ ಹೇರುವುದಾಗಿದೆ. ಕೋಕಾ ಕೋಲಾ, ಕೋಲ್ಗೇಟ್‌ನಂಥ ವಸ್ತುಗಳ ನಿಜಗುಣಗಳ ಗೋಜಿಗೇ ಹೋಗದೆ ಅವುಗಳ ಸುತ್ತ ತರ್ಕಾತೀತ ಪ್ರಭಾವಳಿಯೊಂದನ್ನು ಕಟ್ಟಿ ಅವುಗಳನ್ನು ಅತ್ಯಪೇಕ್ಷಣೀಯವೂ ಅತ್ಯನಿವಾರ್ಯವೂ ಆದ ಸರಕುಗಳಾಗಿ ಮಾರಲಾಗುತ್ತದೆ. ಇಂಥ ಪ್ರಚಾರದ ಹಿಂದೆ ಸಹಜವಾಗಿ ಆ ನಿರ್ದಿಷ್ಟ ಬಲಿಷ್ಠ ಸಂಸ್ಕೃತಿಯ ಆರ್ಥಿಕ-ರಾಜಕೀಯ ಪ್ರಾಬಲ್ಯವೂ ಕೆಲಸ ಮಾಡುತ್ತಿರುತ್ತದೆ. ಜಾಗತಿಕ ಬಂಡವಾಳಶಾಹಿಯ ಇಂಥೆಲ್ಲ ಆಯಾಮಗಳನ್ನು ಪ್ರಶ್ನಿಸುವ ಬದಲು ಸಂಘ-ಸ್ವದೇಶಿ ಪರಿವಾರವು ಭಾರತವನ್ನೂ ಈ ಸ್ಪರ್ಧೆಯಲ್ಲಿ ಇಳಿಸಹೊರಟಿದೆ. ಇದಕ್ಕೆ ವಿರುದ್ಧವಾಗಿ ಗಾಂಧೀಯ ಮಾದರಿಯು ಮೂಲಭೂತವಾಗಿ ಟೂತ್‌ಪೇಸ್ಟ್‌ನ ಬಳಕೆಯಂಥ ಆಧುನಿಕ ಗ್ರಾಹಕ ವರ್ತನೆಯನ್ನೆ ಪ್ರಶ್ನಿಸುತ್ತಿತ್ತು. ಕೋಲ್ಗೇಟ್‌ನ ಸ್ಪರ್ಧಿ ವಜ್ರದಂತಿ ಎಂದು



ವಾದಿಸುವ ಬದಲು ಗಾಂಧಿ ಅವೆರಡಕ್ಕೂ ಬೇವಿನ ಕಡ್ಡಿಯೆ ನಿಜವಾದ ಪರ್ಯಾಯ ವೆನ್ನುತ್ತಿದ್ದರು. ಗಾಂಧಿಯ ಈ ನಿಲುವು 'ಗ್ಲೋಬಲ್' (ಜಾಗತಿಕ) ಶಕ್ತಿಗಳ ವಿರುದ್ಧ 'ಲೋಕಲ್' (ಸ್ಥಳೀಯ) ಶಕ್ತಿಯನ್ನು ಉದ್ದೀಪಿಸುವಂಥದಾಗಿತ್ತು. ಇದಕ್ಕೆ ಹೋಲಿಸಿದಂತೆ ಸಂಘ-ಸ್ವದೇಶಿ ಪ್ರತಿಸ್ಪಂದನೆ 'ಗ್ಲೋಕಲ್' ಆಗುವ ಬಯಕೆ-ಭ್ರಮೆಗಳನ್ನು ಪ್ರತಿಬಿಂಬಿಸುವಂಥದ್ದು, ಗ್ಲೋಬಲ್ ಹಾಗೂ ಲೋಕಲ್‌ಗಳ ನಡುವಿನ ಮೂಲಭೂತ ಅಸಮಾನತೆಯನ್ನೂ ವೈರುದ್ಧ್ಯವನ್ನೂ ಗಮನಿಸದಷ್ಟು ಕುರುಡಾದ ಈ ಪ್ರತಿಸ್ಪಂದನೆಯು 'ಲೋಕಲ್' ಅನ್ನು 'ಗ್ಲೋಬಲ್' ಆಗಿಸುವ ಪ್ರಯತ್ನದಲ್ಲಿ ತೊಡಗಿ ಆ ಮೂಲಕ ಅಂತಿಮವಾಗಿ 'ಗ್ಲೋಬಲ್' ಶಕ್ತಿಗಳ ದಾಸನಾಗುತ್ತದೆ.

ಜಾಗತಿಕ ಶಕ್ತಿಯಾಗುವ ಈ 'ಹಕ್ಕಿನ ಪ್ರತಿಪಾದನೆ' ಸಂಘ-ಸ್ವದೇಶಿ ಪರಿವಾರದ ಸಾಮಾನ್ಯ ಕಾರ್ಯಕರ್ತರ ಮಟ್ಟದಲ್ಲಿಯೂ ಸಹ ತೀರಾ ನಾಟಕೀಯವಾಗಿಯೆ ಪ್ರಕಟವಾಗುತ್ತದೆ. ಅವರು ಕೆಲವು ಆದರ್ಶಗಳನ್ನು ಮತ್ತೆಮತ್ತೆ ಎತ್ತಿಹಿಡಿಯುತ್ತಾರೆ; ಈ ಆದರ್ಶಗಳೆಲ್ಲವೂ ಕೂಡ ಭಾರತವನ್ನು ಒಂದು ಆಕ್ರಮಣಶೀಲವೂ ಅಂತರ್ ರಕ್ಷಿತವೂ ಆದ ಬಂಡವಾಳಶಾಹಿ ರಾಷ್ಟ್ರಪ್ರಭುತ್ವವಾಗಿ ಕಟ್ಟುವ ಒಲವನ್ನು ಹೊಂದಿರುವಂಥವು. ಇಂಥ ಮನಃಸ್ಥಿತಿಗೆ ಜಪಾನ್ ಬಹುದೊಡ್ಡ ಅನುಕರಣೀಯ ಮಾದರಿಯಾಗಿಯೂ ಆಕರ್ಷಣೀಯ ಸ್ವರ್ಗಕಲ್ಪನೆಯಾಗಿಯೂ ಕಾಣುತ್ತದೆ.

ಜಪಾನನ್ನು ಹೋಲುವಂತಹ ಇತರ ಯಶಸ್ವಿ ರಾಷ್ಟ್ರಗಳೂ ಸಂಘ ಪರಿವಾರದ ಆದರ್ಶಗಳಾಗಿವೆ. ಆ ದೇಶಗಳು ತಮ್ಮ ಆಧುನಿಕ ರಾಷ್ಟ್ರವ್ಯವಸ್ಥೆಯ ಹಿತಕ್ಕೆ ಅನುಗುಣವಾಗಿ ತಮ್ಮ ತಮ್ಮ ಮಾರುಕಟ್ಟೆಯ ಶಕ್ತಿಗಳನ್ನು ಬೆಳೆಸುವ ಬಗೆಯನ್ನು ಸಂಘ ಪರಿವಾರವು ಮೆಚ್ಚುಗೆಯಿಂದ ವ್ಯಾಖ್ಯಾನಿಸುವ ಕ್ರಮವು ಹಿಂದೂ ಬಲಪಂಥದ ರಾಜಕೀಯ ಕಾರ್ಯಕ್ರಮಕ್ಕೆ ಹೊಂದಿಕೊಳ್ಳುವಂಥದೆ ಆಗಿದೆ. ಹೀಗೆ ಪರಿವಾರವು ಮೂಲತಃ ಭಾರತದಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳ ಅಧಿಪತ್ಯವನ್ನು ಟೀಕಿಸುತ್ತದೆ ಯಾದರೂ ಅವುಗಳ ಬದಲಾಗಿ ಅವುಗಳನ್ನೆ ಹೋಲುವಂತಹ ಬಲಶಾಲಿ ಭಾರತೀಯ ಸಂಸ್ಥೆಗಳ ಯಜಮಾನಿಕೆಯ ಬಗ್ಗೆ ಉಸಿರೆತ್ತುವುದಿಲ್ಲ. ತನ್ನ ಆರ್ಥಿಕ ನೀತಿಯ ಈ ದ್ವಂದ್ವವನ್ನು ಮರೆಮಾಚಲು ಪರಿವಾರವು ತಕ್ಷಣ ಸಂಸ್ಕೃತಿಯ ಸೋಗನ್ನು ಬಳಸುತ್ತದೆ. ಪಾಶ್ಚಿಮಾತ್ಯ ಉದಾರವಾದಿ ನಿಲುವನ್ನು ಅದು ಮೂಲಭೂತವಾಗಿ ಪಶ್ಚಿಮ ಕೇಂದ್ರಿತವಾದ ದೃಷ್ಟಿಕೋನವೆಂಬ ಕಾರಣಕ್ಕಾಗಿಯಲ್ಲದೆ ಅದು ಭಾರತದಲ್ಲಿ ತನ್ನ ಹಿತಾಸಕ್ತಿಗಳಿಗೆ ಧಕ್ಕೆಯುಂಟುಮಾಡುತ್ತದೆಯೆಂಬ ಕಾರಣಕ್ಕಾಗಿ ವಿರೋಧಿಸುವ ಸಂಘ ಪರಿವಾರವು ಈ ವಾಸ್ತವವನ್ನು ಮುಚ್ಚಿಟ್ಟು ಪಾಶ್ಚಿಮಾತ್ಯ ಆರ್ಥಿಕ ಸಂಸ್ಥೆಗಳ ಪ್ರವೇಶದಿಂದ ಭಾರತೀಯ ಸಂಸ್ಕೃತಿಗೆ ಹಾನಿಯಾಗುವುದು ಎಂಬ ವಾದವನ್ನು

ಹೂಡುತ್ತದೆ.

ಸಂಘ ಪರಿವಾರದ ಇಂಥ 'ಸಾಂಸ್ಕೃತಿಕ' ವಾದವೂ ಸರಳವಲ್ಲ, ಪ್ರಾಮಾಣಿಕವಲ್ಲ. ಸಾಂಸ್ಕೃತಿಕ ಪರಂಪರೆಯೆನ್ನುವುದು ನಾವು ನಮ್ಮ, ಇತರರ ಸಮುದಾಯಗಳ ನೆನಪುಗಳ ಗಡಿಯನ್ನು ಗುರುತಿಸುವ ಕ್ರಮದಲ್ಲಿ ಮೂಡಿಕೊಳ್ಳುವ ಒಂದು ವಿಕಲ್ಪವಾಗಿದೆ. ಅದರ ಗಡಿಗಳು ಸ್ವಂತಿಕೆಯನ್ನು ಕಟ್ಟಿಕೊಳ್ಳುವ ನಮ್ಮ ರಾಜಕೀಯಾತ್ಮಕ ಪರಿಕ್ರಿಯೆಯ ಗಡಿಗಳೂ ಆಗಿರುತ್ತವೆ. ಈ ಎರಡೂ ಪರಿಕ್ರಿಯೆಯ ಅಂತರ್ಗತವಾದೊಂದು ಸಮಸ್ಯೆಯೆಂದರೆ 'ಪರಂಪರೆ'ಯ ಚೌಕಟ್ಟನ್ನು ನಿರ್ಮಿಸುವಲ್ಲಿ ನಾವೆಲ್ಲ ನಮ್ಮನಮ್ಮ ದೃಷ್ಟಿಕೋನಗಳಿಗನುಗುಣವಾಗಿ ಅದರಲ್ಲಿ ಕೆಲವು ಅಂಶಗಳನ್ನು ಸೇರಿಸುತ್ತೇವೆ, ಕೆಲವನ್ನು ಬಿಡುತ್ತೇವೆ. ಹಾಗಾಗಿ 'ಪರಂಪರೆ' ಯೆನ್ನುವುದು ಸಮಸ್ಯಾತ್ಮಕವಲ್ಲದ ಪರಿಕಲ್ಪನೆಯೇನಲ್ಲ, ಸಂಪೂರ್ಣ ವಸ್ತುನಿಷ್ಠವಾದ ವಿಕಲ್ಪವೇನಲ್ಲ. ಜೊತೆಗೆ ಸಂಘ ಪರಿವಾರದ 'ಭಾರತೀಯ ಸಂಸ್ಕೃತಿ-ಪರಂಪರೆ' ಗಳ ಪರಿಕಲ್ಪನೆಯಲ್ಲೇ ಮೂಲಭೂತವಾದೊಂದು ಅಂತರ್‌ವೈರುದ್ಧ್ಯವಿದೆ. ವಸಾಹತುಶಾಹಿ ಕಾಲದಿಂದ ಪ್ರಾರಂಭಿಸಿ ಇಂದಿನವರೆಗೂ ಸಂಪ್ರದಾಯಶರಣ ಹಿಂದೂ ಮನಸ್ಸು ತನ್ನ ಸ್ವಂತಿಕೆಯನ್ನು ಕಟ್ಟಿಕೊಳ್ಳುವಲ್ಲಿ ತನ್ನದೆ ಸ್ವಂತ ಪರಂಪರೆಯನ್ನು ಕಡೆಗಣಿಸಿ ಆಧುನಿಕ ಪಾಶ್ಚಿಮಾತ್ಯ ಪರಂಪರೆಯ ಮಾದರಿಯನ್ನು ಆದರ್ಶವಾಗಿಟ್ಟುಕೊಂಡಿರುವ ವಿಲಕ್ಷಣ ಸಂಗತಿಯನ್ನು ಅನೇಕ ಧೀಮಂತರು ಈಗಾಗಲೆ ಚರ್ಚಿಸಿಯಾಗಿದೆ. ಹಿಂದೂ ರಾಷ್ಟ್ರ-ಸಂಸ್ಕೃತಿ-ಪರಂಪರೆಗಳು ಈ ಮನಸ್ಸಿನ ಘೋಷಿತ ಆದರ್ಶಗಳಾದರೂ ಆಂತರ್ಯದಲ್ಲಿ ಮಾತ್ರ ಈ ಮನಸ್ಸು ಆಧುನಿಕ ಆಕ್ರಾಮಕ ಪಶ್ಚಿಮವನ್ನೆ ಮೋಹಿಸುತ್ತದೆ; ಅಂಥ ಪಶ್ಚಿಮವನ್ನು ಅನೇಕ ರೀತಿಗಳಲ್ಲಿ ಹೋಲುವ ಆಧುನಿಕ-ಪೂರ್ವ ಭಾರತದ ಬ್ರಾಹ್ಮಣ-ಕ್ಷಾತ್ರ ಮೌಲ್ಯಗಳು ಮಾತ್ರ ನಿಜವಾದ ಭಾರತೀಯ ಪರಂಪರೆಯನ್ನು ನಿರ್ಮಿಸುವಂಥವು ಎಂದು ವಾದಿಸುತ್ತದೆ. ಅಂದರೆ, ವಿಶಾಲಾರ್ಥದಲ್ಲಿ ಹೇಳುವು ದಾದರೆ, ಇಂಥ ಪ್ರಜ್ಞೆ ಆಧುನಿಕ ಪಶ್ಚಿಮವೆ ಮಾನವ ನಾಗರಿಕತೆಯ ಪರಮಶ್ರೇಷ್ಠ ಮಾದರಿಯೆಂದು ಸುಪ್ತವಾಗಿ ಒಪ್ಪಿಕೊಂಡುಬಿಟ್ಟು, ತನ್ನ ನಾಗರಿಕತೆಯನ್ನೂ ಪಶ್ಚಿಮದ ಅಚ್ಚಿನಲ್ಲಿ ಎರಕಹೊಯ್ದು ಸುಧಾರಿಸಬೇಕೆಂದು ಬಯಸುತ್ತದೆ. ಹೀಗೆ ಮೇಲ್ನೋಟಕ್ಕೆ ಪಶ್ಚಿಮವಿರೋಧಿಯಾಗಿ ಕಾಣುವ ಸಂಘ-ಸ್ವದೇಶಿ ಪರಿವಾರ ಒಳಗೆ ಮಾತ್ರ ಪಶ್ಚಿಮ ವ್ಯಾಮೋಹಿಯೆ ಆಗಿದೆ. ಸೇನಾಬಲ ನಿರ್ಮಾಣ, ಸಂಸ್ಕೃತಿ-ವಿಶಿಷ್ಟ ಉಪಭೋಗವಾದ, ಬಹುಸಂಖ್ಯಾತ ಹಿಂದೂಗಳನ್ನು ಹೊರತುಪಡಿಸಿ ಬೇರೆ ಸಮುದಾಯಗಳ ಬಗ್ಗೆ ಅಸಹಿಷ್ಣುತೆ ಮತ್ತು ಬಲಿಷ್ಠವೂ ಕೇಂದ್ರೀಕೃತವೂ ಆದ ರಾಷ್ಟ್ರಪ್ರಭುತ್ವ ವ್ಯವಸ್ಥೆಯ ಸಮರ್ಥನೆ ಸಂಘ-ಸ್ವದೇಶಿ ಪರಿವಾರ ಪ್ರತಿಪಾದಿಸುವ ಆಧುನಿಕೀಕೃತ ಭಾರತೀಯತೆಯ



ಪ್ರಮುಖ ಅಂಶಗಳಾಗಿವೆ. ಇಲ್ಲಿ ಪರಂಪರೆಯೆನ್ನುವುದು ಇವೆಲ್ಲ ಅಂಕಣಗಳನ್ನೊಳಗೊಂಡ ಸಂಗ್ರಹವಾಗಿದೆ. ಈ ಹಿನ್ನೆಲೆಯಲ್ಲಿ ನೋಡಿದಾಗ, ಸ್ವಂತಿಕೆ-ಸ್ವಕೀಯತೆಗಳ ಕ್ಷೇತ್ರಗಳು ಪರಂಪರೆಯನ್ನು ಪುನರ್‌ರೂಪಿಸುವಂತಹ ಕಡು ಹೋರಾಟದ ಕಣಗಳಾಗಿವೆ. ಇಂಥಲ್ಲಿ ಐತಿಹಾಸಿಕ ಸ್ಮೃತಿಯ ಪರಿಕಲ್ಪನೆಯು ವಿಕಾಸ ಶಕ್ತಿಯಾಗಿ, ಅಂದರೆ ಕ್ಷೇತ್ರವಿಸ್ತರಣೆಯ ಶಕ್ತಿಯಾಗಿ ಬಳಕೆಯಾಗುತ್ತದೆ. ಹಾಗಾಗಿಯೆ ಸಂಘ ಪರಿವಾರದ ಚಳವಳಿಗಳು ಹಾಗೂ ಅವುಗಳನ್ನು ಹೋಲುವಂತಹ ಚಳವಳಿಗಳು ಸ್ಮೃತಿಗಳನ್ನು ಸೃಷ್ಟಿಸುವ, ಪುನರ್‌ಸೃಷ್ಟಿಸುವ ಹಾಗೂ ಸಂರಕ್ಷಿಸುವ ಉತ್ಕಟ ಪ್ರಯತ್ನಗಳಲ್ಲಿ ತೊಡಗಿಕೊಂಡಿರುತ್ತವೆ. ಇಂಥ ಪ್ರಕ್ರಿಯೆಯಲ್ಲಿ ಕೆಲಕಾಲದ ನಂತರ ವಾಸ್ತವಿಕಸ್ಮೃತಿ ಹಾಗೂ ಕಲ್ಪಿತಸ್ಮೃತಿಗಳ ನಡುವಿನ ವ್ಯತ್ಯಾಸ ಮಸುಳಿಸಲಾರಂಭಿಸುತ್ತದೆ; ಆಗ ಸ್ಮೃತಿಯನ್ನು ಹಿಂಸೆಯ ಉಪ್ಪಿನಲ್ಲಿ ರಕ್ಷಿಸಿಡಲಾಗುತ್ತದೆ. ಸ್ವಕೀಯತೆಯನ್ನು ಕೇಂದ್ರವಾಗಿಟ್ಟುಕೊಂಡ ಯಾವುದೆ ರಾಜಕಾರಣಕ್ಕೂ ಕಥನಗಳು ತಮ್ಮ ಸಮುದಾಯಗಳ ಸಾಂಕೇತಿಕ ಹುಟ್ಟನ್ನು ಆವಾಹಿಸುವ ಮೂಲಗಳಾಗುತ್ತವೆ.

ಈ ಮೊದಲೆ ಚರ್ಚಿಸಿದಂತೆ, ಹಿಂದೂ ಸ್ವಂತಿಕೆಯ ಕಥನ ರೂಪುತಾಳಿದ್ದು ಆಧುನಿಕ ಬಂಡವಾಳಶಾಹಿ ಜಗತ್ತಿನಲ್ಲಿ 'ಗ್ಲೋಕಲ್' ಆಗಿ ಬೆಳೆಯುವ ಹಿಂದೂವಾದಿಗಳ ಪ್ರಯತ್ನದಲ್ಲಿ. ಇಂಥ ರೀತಿಯ ಸ್ವಂತಿಕೆಯ ಕಥನಗಳ ಹಣೆಬರಹವೆಂದರೆ ಅವೆಲ್ಲವೂ ಅಂತಿಮವಾಗಿ ಏಕರೂಪಿ ಸಂರಚನೆಗಳಾಗಿ ಬೆಳೆಯತೊಡಗುತ್ತವೆ. ತಮಗಿಂತ ಭಿನ್ನವಾದ ಹಾಗೂ ತಮ್ಮ ಅಹಮಿಕೆಯನ್ನು ಭಂಗಗೊಳಿಸುವಂತಹ ಎಲ್ಲ ಅನ್ಯ ಸಂಕೇತರೂಪಗಳನ್ನೂ ಮತ್ತು ವಾಸ್ತವರೂಪಗಳನ್ನೂ ಈ ಏಕಾಕಾರಿ ಕಥನಗಳು ಒಂದೊ ತಾತ್ವಿಕವಾಗಿ ನಿರಾಕರಿಸಪ್ರಯತ್ನಿಸುತ್ತವೆ ಇಲ್ಲ ಅವುಗಳ ದನಿಯನ್ನು ಅಡಗಿಸಲೆತ್ನಿಸುತ್ತವೆ. ಹಿಂದೂ ಸ್ವಂತಿಕೆಯ ಇಂಥ ಅತಿರೇಕವಾದವು ತನಗೂ ಹಾಗೂ ಹೊರ ಜಗತ್ತಿಗೂ ತಾನು ಎಂದೆಂದಿಗೂ ಆಂತರಿಕ ಘರ್ಷಣೆಗಳೆ ಇಲ್ಲದ ಅಖಂಡ ಸಮುದಾಯವಾಗಿದ್ದೆನೆಂದು ನಂಬಿಸಲೆಳಸುತ್ತದೆ. ಈ ಪ್ರಯತ್ನದಲ್ಲಿ ಏಕರೂಪಿ ಸಂಸ್ಕೃತಿ-ಕಥನಗಳು ವಾಸ್ತವದಲ್ಲಿ ಇರುವ ಎಲ್ಲ ಅನ್ಯತೆ ಭಿನ್ನತೆಗಳನ್ನು ನೆಲಸಮ ಮಾಡುವುದು ಅನಿವಾರ್ಯವಾಗುತ್ತದೆ. ಆದರೆ ಹೀಗೆ ಆತ್ಮ-ಪ್ರತಿನಿಧೀಕರಣದ ಹೊಸ ಮಾರ್ಗಗಳ ಮೂಲಕ ನಿರ್ಮಾಣಗೊಳ್ಳುತ್ತಿರುವ ಯೋಜಿತ ಸಮುದಾಯದಲ್ಲಿ ಈಗಾಗಲೆ ಹರಳುಗಟ್ಟಿರುವ ಬಹುರೂಪಿ ಸ್ಮೃತಿಗಳೂ ಬಹುಮುಖಿ ಜೀವನಾನುಭವಗಳೂ ಇದ್ದುಬಿಟ್ಟಿದ್ದಲ್ಲಿ ಅಂಥ ಸನ್ನಿವೇಶವು ಪರಂಪರೆಯನ್ನು ಪುನರ್‌ಸೃಷ್ಟಿಸುವ ಪ್ರಕ್ರಿಯೆಯನ್ನು ಇನ್ನೂ ಹೆಚ್ಚು ಸಂಕೀರ್ಣಗೊಳಿಸುತ್ತದೆ. ಇಂಥ ಬಹುತ್ವ-ಬಹುಳತೆಯಿಂದ ಸಮುದಾಯದ ಏಕಾಕಾರವೊಂದನ್ನು ಕಟ್ಟುವ ಕ್ರಿಯೆಯು ಅಣ್ವಸ್ತ್ರ

ಸೃಷ್ಟಿಕ್ರಿಯೆಗಿಂತ ತೀರ ಭಿನ್ನವಲ್ಲದ ವಿದಳನ ಹಾಗೂ ಏಕೀಭವನದ ಮಾರ್ಗಗಳನ್ನು ಬಳಸಿಕೊಳ್ಳುತ್ತದೆ.

ಅಂತರಂಗೀಯ ಸ್ಮೃತಿನಾಶದ ಪ್ರಕ್ರಿಯೆಯು ಎರಡು ಸುಸ್ಪಷ್ಟ ಮಗ್ಗಲುಗಳನ್ನು ಹೊಂದಿರುತ್ತದೆ. ಅವುಗಳು (೧) 'ಸ್ವ' ದ ಪವಿತ್ರ ಹಾಗೂ ಧಾರ್ಮಿಕ ಸ್ಮೃತಿ ಕ್ಷೇತ್ರಗಳಲ್ಲಿ ವಿರೋಧಿ ರೂಪಗಳ ಅಸ್ತಿತ್ವದ ನಿರಾಕರಣೆ (೨) ಏಕಮುಖಿ ಧಾರ್ಮಿಕ ವ್ಯಕ್ತಿತ್ವದ ವಿಕಲ್ಪವನ್ನು ಪ್ರತಿರೋಧಿಸುವಂತಹ ಕೆಲವು ಸಾಮುದಾಯಿಕ ಜೀವನಕ್ರಮಗಳು ಅಧಿಕೃತವೂ ಸತ್ವಯುತವೂ ಆಗಿರಬಹುದೆಂಬ ಸಂಗತಿಯನ್ನು ನಿತ್ಯಜೀವನದ ಸ್ತರದಲ್ಲಿಯೆ ತಿರಸ್ಕರಿಸುವ ಹವಣಿಕೆ.

ಇವುಗಳಲ್ಲಿ ಮೊದಲ ಆಯಾಮವು ದೈವತತ್ವದ ಮೂರ್ತೀಕೃತ ರೂಪಗಳು ಹಾಗೂ ಆ ರೂಪಗಳು ಕಲ್ಪಿತ ಸಮುದಾಯದೊಡನೆ ಹೊಂದಿರುವಂತಹ ಸಾವಯವ ಸಂಬಂಧಗಳನ್ನು ಕುರಿತಾದ ಬಹುಸೂಕ್ಷ್ಮ ಪ್ರಶ್ನೆಗಳನ್ನು ನಿರ್ವಹಿಸುತ್ತದೆ. ಸಮಾಜಶಾಸ್ತ್ರಜ್ಞ ಡರ್ಕೀಮ್‌ನ ಹೇಳಿಕೆಯೊಂದನ್ನು ತುಸು ಮಾರ್ಪಡಿಸುವುದಾದರೆ, ಸಮುದಾಯಗಳು ನಿರ್ದಿಷ್ಟ ದೈವ ಪರಿಕಲ್ಪನೆಗಳ ಸುತ್ತ ತಮ್ಮನ್ನು ಸಂಘಟಿಸಿಕೊಳ್ಳುತ್ತವೆ. ಈ ದೃಷ್ಟಿಯಿಂದ, ಬಾಬರಿ ಮಸೀದಿಯ ಧ್ವಂಸವು ನಿರ್ದಿಷ್ಟ ಹಿಂದೂವಾದಿ ಗುಂಪೊಂದು ಪ್ರತಿಷ್ಠಾಪಿಸಲು ಪ್ರಯತ್ನಿಸುತ್ತಿದ್ದ ದೇವತಾರೂಪ ರಾಮನ ಕ್ಷಾತ್ರಸ್ವರೂಪವನ್ನು ಗಟ್ಟಿಗೊಳಿಸುವ ಕಾರ್ಯಕ್ರಮದ ಬಹುಮುಖ್ಯವಾದೊಂದು ಘಟ್ಟವಾಗಿತ್ತು. ಅಂಥ ದೇವರೂಪವೊಂದನ್ನು ಸ್ಥಾಪಿಸಿ ಆ ಮೂಲಕ ಭಕ್ತರನ್ನು ಅದೇ ಅಚ್ಚಿನಲ್ಲಿ ತಯಾರಿಸುವ ತಂತ್ರದ ಮುಖ್ಯ ಭಾಗವಾಗಿತ್ತದು. ಅರ್ಥಾತ್, ನಾವು ಕಲ್ಪಿಸುವ ದೈವರೂಪವು ನಮ್ಮ ಸ್ವ-ರೂಪಕ್ಕಿಂತ ತೀರ ಭಿನ್ನವಾಗೇನಿರುವುದಿಲ್ಲ. ಮೇಲೆ ಉದಾಹರಿಸಿದ ಹಿಂದೂವಾದಿಗಳ ರಾಮಕಲ್ಪನೆಯನ್ನೆ ನೋಡಿ. ಅವರು ರಾಮ-ರಾಮಾಯಣಗಳಿಗಿಂತ ತುಂಬ ಭಿನ್ನರಾ(ವಾ)ದ ಹತ್ತುಹಲವು ಬಗೆಯ ರಾಮ-ರಾಮಾಯಣ(ರ)ಗಳನ್ನು ಭಾರತದ ಬಹುರೂಪಿ ಸಮಾಜವು ಎಷ್ಟೋ ವರ್ಷಗಳಿಂದ ಸೃಷ್ಟಿಸಿಕೊಂಡೂ ಆರಾಧಿಸಿಕೊಂಡೂ ಬಂದಿದೆಯೆನ್ನುವ ಸರಳಸಾಮಾನ್ಯ ಸತ್ಯವನ್ನು ಅವರು ಒಪ್ಪಲೆ ತಯಾರಿಲ್ಲ. ಇಂಥ ಜಾನಪದ ರಾಮ-ರಾಮಾಯಣ ರೂಪಗಳು ಸ್ವ-ಪ್ರತಿಫಲನದ, ಆ ಮೂಲಕ ಸ್ವ-ವಿಮರ್ಶೆಯ ಶಕ್ತಿಯನ್ನೂ ಹೊಂದಿದ್ದು ರಾಮನಿಗೆ ಯಾವುದೆ ರೀತಿಯ ಕ್ಷಾತ್ರಾತಿರೇಕದ ಹಾಗೂ ರಾಜಕೀಯಾತ್ಮಕವಾದ ಗುಣವನ್ನು ಪ್ರದಾನ ಮಾಡುವುದಿಲ್ಲವಾದ್ದರಿಂದ ರಾಮನನ್ನು ಸಮಕಾಲೀನ ಮತೀಯವಾದಿ ಸಂಘಟನೆಗೆ ಒಂದು ದಾಳವಾಗಿ ಬಳಸಿಕೊಳ್ಳುವ ಹಿಂದೂವಾದಿ ಪ್ರಯತ್ನಗಳಿಗೆ ಈ ಜಾನಪದ ಪ್ರಕಾರಗಳು ಎಳ್ಳಷ್ಟೂ ಸಹಾಯಕವಾಗುವುದಿಲ್ಲ. ಸಂಪ್ರದಾಯ



ಸಂದೇಹಿಯೂ ಬಹುಮುಖಿಯೂ ಆದ ಈ ಜಾನಪದ ಸಂಸ್ಕೃತಿಯು ಹಿಂದೂ ಮತೀಯವಾದಿಗಳಿಗೆ ಪುಷ್ಟಿಯ ಬದಲು ಮುಜುಗರದ ಸಂಗತಿಯೆ ಆಗಿದೆ.

ಮೇಲೆ ಪ್ರಸ್ತಾಪಿಸಿದ ಎರಡನೆ ಆಯಾಮ ಇನ್ನೂ ಸಂಕೀರ್ಣವಾದುದು. ಅದು ನಿತ್ಯಜೀವನದ ಸಹಜ ಸರಳ ವಾಸ್ತವಗಳನ್ನೆ ತಿರುಚಲು ಯತ್ನಿಸುತ್ತದೆ. ಆಧುನಿಕ-ಪೂರ್ವ ಕಾಲದ ಘರ್ಷಣೆ ಹಾಗೂ ಹಿಂಸೆಯನ್ನು ಅದು ತನ್ನ ಸ್ವಾರ್ಥಸಾಧನೆಗನುಗುಣವಾಗಿ ವ್ಯಾಖ್ಯಾನಿಸಿ ಅವುಗಳನ್ನು ತನ್ನ ವರ್ತಮಾನದ ರಾಜಕೀಯ ಉದ್ದೇಶಗಳಿಗೆ ಬಳಸಿಕೊಳ್ಳಲೆತ್ನಿಸುತ್ತದೆ. ಆಶೀಶ್ ನಂದಿ ತೋರಿಸಿರುವಂತೆ, ಅಂತರಂಗೀಯ ಸ್ಮೃತಿನಾಶದ ಪ್ರಕ್ರಿಯೆಗಳು ತಮ್ಮ ಸ್ವಂತಿಕೆಯ ಗಡಿ ಕಟ್ಟುವ ಯೋಜನೆಯಲ್ಲಿ ಎಲ್ಲ ಅಸ್ಪಷ್ಟ ಪ್ರದೇಶಗಳನ್ನು ಅಳಿಸಿಹಾಕಲು ಹವಣಿಸುತ್ತವೆ. ಸ್ವಂತಿಕೆಯ ಕಥನಗಳಿಗೆ ಇಂಥ ಅನಿರ್ದಿಷ್ಟತೆಗಳೆಂದರೆ ಅಸಹನೆ; ಯಾಕೆಂದರೆ ಆ ಕಥನಗಳು ಧರ್ಮ-ನ್ಯಾಯಗಳ ಸೋಗಿನಲ್ಲಿ ಹಿಂಸೆಯನ್ನು ಛೂಬಿಡುವಾಗಲೆಲ್ಲ ಅಂಥ ಅನಿರ್ದಿಷ್ಟತೆಗಳು ಅಡೆತಡೆಗಳಾಗಿ ಕೆಲಸ ಮಾಡುತ್ತವೆ. ಅಸ್ಪಷ್ಟ ಅಂಕಣಗಳು ಗಡಿ ಗುರುತಿಸುವ ಕಾರ್ಯವನ್ನು ಸಂಪೂರ್ಣ ತಡೆಯದ್ದರೂ ಅದರ ಯಶಸ್ಸಿನ ಸಾಧ್ಯತೆಯನ್ನಂತೂ ಖಂಡಿತವಾಗಿ ಮೊಟಕುಗೊಳಿಸುತ್ತವೆ. ಒಂದು ಸರಳ ಉದಾಹರಣೆಯನ್ನು ನೀಡುವುದಾದರೆ, ಪ್ರಸ್ತುತ ಭಾರತದಲ್ಲಿ ಹಿಂದೂ ಅಥವಾ ಮುಸ್ಲಿಮ್ ಎಂದು ಗುರುತಿಸಲಾಗುವ ಒಟ್ಟೂ ೨,೮೦೦ ಸಮುದಾಯಗಳಲ್ಲಿ ಸುಮಾರು ಮುನ್ನೂರಾಐವತ್ತರಷ್ಟು ಸಂಪೂರ್ಣವಾಗಿ ಹಿಂದೂವಲ್ಲದ ಅಥವಾ ಸಂಪೂರ್ಣವಾಗಿ ಮುಸ್ಲಿಮ್ ಅಲ್ಲದ ಸಮುದಾಯಗಳಿವೆ.

ಮೇಲ್ನೋಟಕ್ಕೆ ಜಾಗತೀಕರಣವನ್ನು ವಿರೋಧಿಸುವಂತೆ ತೋರುವ ಸಂಘ-ಸ್ವದೇಶಿ ಪರಿವಾರಕ್ಕೂ ಜಾಗತೀಕರಣದ ಪ್ರಭುಶಕ್ತಿಗಳಿಗೂ ಇರುವ ಆಳದ ಹೋಲಿಕೆ ಇದುವೆ. ಒಂದು ಸಾರ್ವತ್ರಿಕ ಮಟ್ಟದಲ್ಲಿ ತನ್ನ ಏಕಾಧಿಪತ್ಯವನ್ನು ಸ್ಥಾಪಿಸಲು ಅನ್ಯವಾದ್ದನ್ನೆಲ್ಲ ನಾಶಗೊಳಿಸಲು ಹವಣಿಸುತ್ತಿದ್ದರೆ ಇನ್ನೊಂದು ಸ್ಥಳೀಯ ಸ್ತರದಲ್ಲಿ ಅದನ್ನೆ ಪುನರಾವರ್ತಿಸುತ್ತಿರುತ್ತದೆ; ಜಾಗತಿಕ ಯಜಮಾನರಿಂದ ತನ್ನ ಸ್ಥಳೀಯ ಯಜಮಾನಿಕೆಯ ಪಾಲನ್ನು ಬೇಡುತ್ತಿರುತ್ತದೆ.

**ಭಾಗ ೩:**

ಜಾಗತೀಕರಣವು, ವಿಶೇಷವಾಗಿ ಅದರ ಅಂತರ್ರಾಷ್ಟ್ರೀಯ ಮಾರುಕಟ್ಟೆ ಶಕ್ತಿಗಳ ರೂಪದ ಅವತಾರದಲ್ಲಿ, ವಾಮಾಚಾರವೆ ಆಗಿದೆ. ಅದರ ಪ್ರತಿನಿಧಿ ಹಾಗೂ ಅದರ ಬಲಿಪಶುಗಳ ನಡುವಿನ ಎಲ್ಲ ಪ್ರತ್ಯಕ್ಷ ಸಂಬಂಧಗಳನ್ನು ತೊಡೆದುಹಾಕುವುದೆ ಆ ಯೋಜನೆಯ ಮುಖ್ಯ

ಲಕ್ಷಣವಾಗಿದೆ. ಜಾಗತೀಕರಣದ ಪ್ರಕ್ರಿಯೆ ಪ್ರಾರಂಭಗೊಂಡದ್ದೆ ಆರ್ಥಿಕ ಶಕ್ತಿಗಳು ತಮ್ಮನ್ನು ಎಲ್ಲ ರಾಜಕೀಯ-ಸಾಮಾಜಿಕ ಶಕ್ತಿಗಳ ಸಂಬಂಧದಿಂದ ವಿಚ್ಛೇದಗೊಳಿಸಿ ಕೊಳ್ಳುವುದರ ಮೂಲಕ. ಈಗ ಅದೆ ಜಾಗತೀಕರಣದ ಶಕ್ತಿಗಳು ಜನಸಾಮಾನ್ಯರನ್ನು ಪರಸ್ಪರ ವಿಚ್ಛೇದಗೊಳಿಸಲು ಪ್ರಯತ್ನಿಸುತ್ತಿವೆ. ಈ ಪ್ರಯತ್ನ ಸಂಪೂರ್ಣವಾಗಿ ಅಥವಾ ಎಲ್ಲ ಬಾರಿಯೂ ಸಫಲವಾಗುತ್ತಲೇನಿಲ್ಲ. ಆದರೆ ಭಯದ ಸಂಗತಿಯೆಂದರೆ, ಜಾಗತೀಕರಣದ ಈ ಸಾಮೂಹಿಕ ವಿಖಂಡನೆಯ ಯೋಜನೆಯನ್ನು ನಾವು ಇನ್ನೂ ಸಹ ನಮ್ಮ ರಾಜಕೀಯ ಚರ್ಚೆಯ ವಿಷಯವಾಗಿ ಪರಿಗಣಿಸಿಲ್ಲ ಅಥವಾ ಚುನಾವಣೆಗಳ ಒಂದು ಮುಖ್ಯ ವಿಷಯವಾಗಿಸಿಕೊಂಡಿಲ್ಲ. ಇಂಥ ಸರ್ವಸಾಮಾನ್ಯ ಹಿನ್ನೆಲೆಯಲ್ಲಿ, ಆ ಪ್ರಕ್ರಿಯೆಯಿಂದ ಮೂಲೆಗುಂಪಾದವರ ರಾಜಕೀಯ ಚಟುವಟಿಕೆಗಳು ಮೇಲ್ನೋಟಕ್ಕೆ ಎಷ್ಟೆ ಒರಟಾಗಿಯೂ ಬುದ್ಧಿಹೀನವಾಗಿಯೂ ಕಂಡುಬಂದರೂ ಸಹ ಅವುಗಳ ಕೇಂದ್ರದಲ್ಲಿರುವ ವಾಮಾಚಾರ-ವಿರೋಧಿ ಗುಣಗಳನ್ನು ಅಲ್ಲಗಳೆಯಲಾಗದು. ಈ ಕಾರಣಕ್ಕಾಗಿಯೆ ನಮ್ಮ ಇಂದಿನ ಚುನಾವಣೆಗಳು ಬಹುಮಟ್ಟಿಗೆ ರಂಗಭೂಮಿಯಂತೆ ತೋರುತ್ತಿವೆ.

ಲೇಖನದ ಪ್ರಾರಂಭದಲ್ಲಿ ಪ್ರಸ್ತಾಪಿಸಿದ ಜಾಗತೀಕರಣದ ವಿರುದ್ಧವಾದ ಎರಡನೆಯ ಪ್ರತಿಸ್ಪಂದನೆ - ರೈತನದು - ಯನ್ನು ಚರ್ಚಿಸುವುದರ ಮೂಲಕ ಮೇಲಿನ ಅಂಶವನ್ನು ವಿಶದೀಕರಿಸಬಹುದು. ರೈತರ ಪ್ರತಿಸ್ಪಂದನೆಯನ್ನು ಹಸಿವಿನ ಪ್ರಶ್ನೆಯನ್ನು ಮೂಲವಾಗಿಟ್ಟುಕೊಂಡ ಸ್ವಂತಿಕೆಯ ಕಥನದ ಒಂದು ಅತಿಶಯರೂಪಿ ನಿದರ್ಶನ ವೆಂದು ಪರಿಗಣಿಸಬೇಕು ಎನ್ನುವುದು ನಾನು ಅಲ್ಲಿ ಮಂಡಿಸಿದ ಪ್ರಮೇಯವಾಗಿತ್ತು. ಇಲ್ಲಿ ಇನ್ನೊಮ್ಮೆ ಆಧುನಿಕ ಜಾಗತೀಕರಣದ ವಿರುದ್ಧ ಗಾಂಧಿ ಮಾಡಿದ ಟೀಕೆಯನ್ನು ಒಂದು ಆಧಾರವಾಗಿಟ್ಟುಕೊಂಡು, ರೈತ ಚಳುವಳಿಯ ನಿರ್ದಿಷ್ಟವಾದೊಂದು ಆಂದೋಲನವನ್ನು ಪ್ರಾರಂಭಬಿಂದುವನ್ನಾಗಿಸಿಕೊಂಡು, ಆ ಒಟ್ಟೂ ಕಥನವನ್ನು ಅರ್ಥೈಸಿಕೊಳ್ಳುವ ಪ್ರಯತ್ನವೊಂದನ್ನು ನಾನು ಮಾಡಲಿದ್ದೇನೆ. ನಾನು ಇಲ್ಲಿ ಉಲ್ಲೇಖಿಸಲಿರುವ ಪ್ರಸಂಗವು 'ಕಲಬೆರಕೆ' (ಪಾಸ್ಟೀಷ್) ನ ಎಲ್ಲ ಗುಣಗಳನ್ನು ಹೊಂದಿದೆ; ಮೂಲತಃ ಗಾಂಧಿ ಸ್ವಾತಂತ್ರ್ಯ ಸಂಗ್ರಾಮದ ದಿನಗಳಲ್ಲಿ 'ವಿದೇಶಿ ವಸ್ತು' ಗಳ ವಿರುದ್ಧ ಸಾರಿದ ವರ್ಣಮಯ ಪ್ರತಿಭಟನೆಯನ್ನು ಈ ಹೋರಾಟದ ಪ್ರಸಂಗವು ಪುನರ್‌ಲೇಖಿಸಿದಂತೆ ಕಂಡು ಆ ಪುನರ್‌ಲೇಖನವು ಕಲ್ಪನಾಶೀಲವೂ ಸಮಸ್ಯಾತ್ಮಕವೂ ಆಗಿದೆ. ಈ ಪ್ರಸಂಗದಲ್ಲಿಯೂ ವಿದೇಶಿ ವಸ್ತುಗಳ ದಹನ ಕೇಂದ್ರಸಾಂಕೇತಿಕ ಕ್ರಿಯೆಯಾಗಿತ್ತು. ಆಲ್ಲಿ ಗಾಂಧಿ ವಿನಾಶದಂಚಿಗೆ ತಳ್ಳಲ್ಪಟ್ಟ ದೇಶಿಯ ನೇಕಾರರ ಸಮಸ್ಯೆಯನ್ನು ಎತ್ತಿ ತೋರಲು ವಿದೇಶಿ ವಸ್ತ್ರಗಳನ್ನು ಸುಟ್ಟರೆ ಇಲ್ಲಿ ಅದನ್ನು



ಪುನರಭಿನಯಿಸುವಂತೆ ವಿದೇಶಿ ಆಹಾರ ವಸ್ತುಗಳನ್ನು ಸುಡಲಾಯಿತು. ಮೂಲ ಮಾದರಿಯು ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಪರಿಕಲ್ಪಿತವಾಗಿದ್ದು ಅದರ ಅನುಕೃತಿಯು ಅಂಥ ಯಾವುದೆ ನಿರ್ದಿಷ್ಟ ಸಾರ್ವತ್ರಿಕ ಹಿನ್ನಲೆಯ ಆಯಾಮವನ್ನು ಹೊಂದಿರಲಿಲ್ಲ. ಇದೆ ಕಾರಣ ಅನುಕೃತಿಗೆ ವಿಷಾದದ ಪ್ರಭಾವಳಿಯೊಂದು ಲಭ್ಯವಾಯಿತು.

ಗಾಂಧಿ ಹುತಾತ್ಮರಾದ ದಿನದ ನಲವತ್ತೆಂಟನೆ ವಾರ್ಷಿಕ ಆಚರಣೆಯ ಅಂಗವಾಗಿ ೧೯೯೬ರ ಮಾರ್ಚ್ ೩೧ರಂದು ಕರ್ನಾಟಕ ರಾಜ್ಯ ರೈತಸಂಘವು ಬೆಂಗಳೂರು ನಗರದಲ್ಲಿ ಪ್ರತಿಷ್ಠಿತ ಬಹುರಾಷ್ಟ್ರೀಯ ಸಂಸ್ಥೆ ಕೆಂಟುಕಿ ಫ್ರೈಡ್ ಚಿಕನ್‌ನ ಮಳಿಗೆಯ ಮೇಲೆ ಹಠಾತ್ ದಾಳಿಯನ್ನು ನಡೆಸಿತು. ಆ ಸಂದರ್ಭದಲ್ಲಿ ರೈತಸಂಘ ಗಾಂಧಿಯನ್ನು ನೆನಪಿಸಿಕೊಂಡಿತು. ಸಂಘದ ನೇತಾರ ಪ್ರೊ. ಎಂ.ಡಿ. ನಂಜುಂಡ ಸ್ವಾಮಿಯವರು ನಮ್ಮ ಕಾಲದ ಬಹುಮುಖ್ಯ ಗಾಂಧಿವಾದಿ- ಎಡಪಂಥೀಯ ರಲ್ಲೊಬ್ಬರಾಗಿದ್ದ ಡಾ. ರಾಮಮನೋಹರ ಲೋಹಿಯಾರ ನಿಷ್ಠ ಅನುಯಾಯಿಯೂ ಹೌದು. ಹೀಗಾಗಿ ರೈತಸಂಘದ ಘೋಷಣೆಗೆ ಎಲ್ಲ ರೀತಿಯ ಅಧಿಕೃತತೆಯೂ ಪ್ರಾಪ್ತವಾಯಿತು. ರೈತರು ಆ ದಾಳಿಯನ್ನು ಯೋಜಿಸಿದ್ದ ಕ್ರಮವು ವಾಮಾಚಾರ-ವಿರೋಧಿ ಕ್ರಿಯಾವಿಧಿಯಂತೆಯೆ ತೋರುತ್ತಿತ್ತು: ಊಟದ ಅಂಗಡಿಯೊಂದಕ್ಕೆ ದಾಳಿ ಮಾಡಿ ಆ ಮೂಲಕ ಅದರ ಹಿಂದಿನ ಶಕ್ತಿಗಳಾದ ಜಾಗತಿಕ ಮಾರುಕಟ್ಟೆ ಹಾಗೂ ರಾಜಕೀಯ ವ್ಯವಸ್ಥೆಗಳೆರಡರ ಹೊಟ್ಟೆಗೂ ಏಟು ಹಾಕುವಂತಹ ಸಾಂಕೇತಿಕತೆ ಅದರಲ್ಲಡಗಿತ್ತು. ಅಮೆರಿಕನ್ ತೀವ್ರಗಾಮಿಗಳೆ ಒಮ್ಮೆ ಹೇಳಿದಂತೆ ಸಮಸ್ಯೆಯೆ ನಿಜವಾದ ಸಮಸ್ಯೆಯಲ್ಲ; ಅದನ್ನು ಸೃಷ್ಟಿಸುವ ಶಕ್ತಿಗಳೆ ನಿಜವಾದ ಸಮಸ್ಯೆ. ಅಂತೆಯೆ ಇಲ್ಲಿ ರೈತರ ಅಂತಿಮ ವೈರಿ-ಗುರಿ ಭಾರತದ ಅರ್ಥವ್ಯವಸ್ಥೆಯನ್ನು ಹಾಳುಗೆಡವುತ್ತಿದ್ದ ಬಹುರಾಷ್ಟ್ರೀಯ ಸಂಸ್ಥೆಗಳಾಗಿದ್ದವೆ ಹೊರತು ಕೇವಲ ಕೆಂಟುಕಿ ಫ್ರೈಡ್ ಚಿಕನ್‌ನ ಅಂಗಡಿಯಲ್ಲ. ಮಂತ್ರಮಾಟ ಕ್ರಿಯೆಯಲ್ಲಿ ಮಂತ್ರವಾದಿ ವೈರಿಯನ್ನು ನಾಶಮಾಡಲು ಆತನ ಬೊಂತೆ ಬೊಂಬೆಯೊಂದನ್ನು ಮಾಡಿ ಅದರ ಮೈಮೇಲೆಲ್ಲ ಸೂಜಿಗಳನ್ನು ಚುಚ್ಚಿ, ಸಂಕೇತಕ್ಕೆ ಘಾತ ಮಾಡುವುದರ ಮುಖಾಂತರ ವಾಸ್ತವವನ್ನೂ ಘಾತಿಸಲೆತ್ನಿಸುತ್ತಾನೆ. ಇದು ಮೂಲತಃ ವೈರಿಯು ತನ್ನ ವಿರುದ್ಧ ಹೂಡಿದ ಮಾಟದ ಪ್ರಭಾವದಿಂದ ತನ್ನನ್ನು ರಕ್ಷಿಸಿಕೊಳ್ಳುವಂಥ ಒಂದು ತಂತ್ರವೂ ಹೌದು; ಮೊದಲಾಗಿ ವೈರಿ ಬಿಟ್ಟ ಅಸ್ತ್ರವನ್ನು ನಿಶ್ಶಕ್ತಗೊಳಿಸುವ ಪ್ರತ್ಯಸ್ತ್ರ-ತಂತ್ರವೂ ಹೌದು. ಅಂದು ರೈತ ಸಂಘದ ಕಾರ್ಯಕರ್ತರು ಮಿಂಚಿನಂತೆ ಎರಗಿದರು; ಅಲ್ಲಿದ್ದ ಗಿರಾಕಿಗಳನ್ನು-- ಅವರಲ್ಲಿ ಹೆಚ್ಚಿನವರು ಬಿಳಿಯರಾಗಿದ್ದರು — ಹೊರಗೆ ಹೋಗುವಂತೆ ವಿನಯಪೂರ್ವಕವಾಗಿ ಕೇಳಿಕೊಂಡರು;

ಗಲ್ಲಾದಲ್ಲಿದ್ದ ಹಣವನ್ನು ತುಸುವೂ ಮುಟ್ಟದೆ ಅದನ್ನು ಭದ್ರವಾಗಿ ಬೀಗಹಾಕಿಡುವಂತೆ ಗುಮಾಸ್ತನಿಗೆ ಹೇಳಿದರು. ನಂತರ ಇಡೀ ಅಂಗಡಿಯನ್ನು ಧ್ವಂಸಗೈದರು. ಆ ಹೊತ್ತಿಗೆ ಅಲ್ಲಿ ಅಂತರ್‍ರಾಷ್ಟ್ರೀಯ ಟೆಲಿವಿಷನ್ ಸಂಸ್ಥೆಗಳವರೂ ಸೇರಿದಂತೆ ಅನೇಕ ಸುದ್ದಿಗಾರರಿದ್ದರು. ಪೋಲಿಸರು ಆ ದಾಳಿಗಾರ (ಸತ್ಯಾಗ್ರಹಿ-?) ರನ್ನು ತಕ್ಷಣ ಬಂಧಿಸಿದರು. ಅದಾದ ಸ್ವಲ್ಪವೆ ವೇಳೆಯಲ್ಲಿ ಅವರ ಗುರುವಿನ ದಸ್ತಗಿರಿಯೂ ಆಯಿತು. ಆಮೇಲೆ ಅವರೆಲ್ಲರನ್ನೂ ಬೆಂಗಳೂರಿನ ರೇಸ್ ಕೋರ್ಸಿಗೆ ಒಂದೆಡೆ ಅಂಟಿಕೊಂಡಂತೆ ಇರುವ, ಕರ್ನಾಟಕದ ಅತಿದೊಡ್ಡ ಸೆರೆಮನೆಯಾದ ಸೆಂಟ್ರಲ್ ಜೈಲಿನಲ್ಲಿ ಇಡಲಾಯಿತು.

ಈ ಪ್ರಸಂಗದ ಅತಿಜಟಿಲ ಭಾಗ ಇರುವುದು ಇಲ್ಲಿ. ಆರ್ಥಿಕ ಉದಾರೀಕರಣ ಈ ವೇಳೆಗಾಗಲೆ ಭಾರತೀಯ ರಾಜಕಾರಣದ ಗುಣವನ್ನು ಬದಲಿಸಿಯಾಗಿತ್ತು. ಇಂಥ ಸನ್ನಿವೇಶದಲ್ಲಿ ಸಾಮಾನ್ಯವಾಗಿ, ಚುನಾವಣಾ ಹೋರಾಟಗಳಲ್ಲಿ ಸಾಂಕೇತಿಕ ರಾಜಕೀಯ ಕ್ರಿಯೆಗಳು ಅಂಥ ಬೆಂಬಲವನ್ನೇನೂ ಗೆದ್ದುಕೊಳ್ಳುವುದಿಲ್ಲ. ರೈತ ಚಳವಳಿಯು ಅಂಥದೊಂದು ಸಾಹಸಕ್ಕೆ ಕೈಹಾಕಿತ್ತು. ಕೆಲವೆ ದಿನಗಳಲ್ಲಿ ನಡೆಯಲಿದ್ದ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಸಾಂಕೇತಿಕ ರಾಜಕೀಯಾತ್ಮಕ ಪ್ರತಿಭಟನೆಯು ವಾಸ್ತವಿಕ ಶಾಸಕ ಸಂಖ್ಯೆ - ಶಕ್ತಿಗಳಾಗಿ ಫಲ ಕೊಡುವುದೆನ್ನುವ ನಿರೀಕ್ಷೆಯಲ್ಲಿ ಅವರಿದ್ದಂತಿತ್ತು.

ಜೈಲಿಗೆ ಹೋದ ತಾವು ಬಿಡುಗಡೆಯಾಗಲು ಯತ್ನಿಸಬಾರದೆಂಬ ಪಾಠವನ್ನು ಅವರು ಆ ಮುಂಚಿನ ಅನುಭವದಿಂದ ಕಲಿತಿದ್ದರು. ಎಂಬತ್ತರ ದಶಕದ ಮಧ್ಯಭಾಗದವರೆಗೂ ಭಾರತೀಯ ರಾಜಕಾರಣದಲ್ಲಿ ಶಾಸಕಾಂಗವನ್ನು ಪ್ರವೇಶಿಸಲು ಜೈಲನ್ನು ಹೊಗುವುದೆ ಅತಿಶೀಘ್ರ ಮಾರ್ಗವಾಗಿತ್ತು. ಈ ರೈತರೂ ಸಹ ಅಂಥದೆ ನಂಬಿಕೆಯನ್ನು ಹೊಂದಿದ್ದರು, ತಮ್ಮ ಕಥನ ಕೊನೆಯ ಪಕ್ಷ ಕರ್ನಾಟಕದಲ್ಲಾದರೂ ದೊಡ್ಡ ಸಂಖ್ಯೆಯಲ್ಲಿ ಜನರನ್ನು ಹೊಡೆದೆಬ್ಬಿಸುವುದೆಂದು ಅವರು ವಿಶ್ವಾಸ ವಿಟ್ಟುಕೊಂಡಿದ್ದರು. ಆದರೆ ಅವರೆಲ್ಲ ಆಸೆಗಳು ಬಹುಬೇಗನೆ ಇಂಗಿಹೋದವು. ಅವರ ಸಾಂಕೇತಿಕ ಕ್ರಿಯೆಗೆ ವಾಸ್ತವಿಕ ಜನಬೆಂಬಲವೇನೂ ಸಿಗಲಿಲ್ಲ; ಬೀದಿಗಳಲ್ಲಿ ಜನ ತಮ್ಮ ನಿತ್ಯ ಉಪದ್ವ್ಯಾಪಗಳನ್ನು ಹೊತ್ತುಕೊಂಡು ತಿರುಗಾಡಿದರೆ ಹೊರತು ರೈತರ ಪ್ರತಿಭಟನೆಗೆ ದನಿಗೂಡಿಸಿಯಲ್ಲ. ಕೊನೆಗೆ ರೈತ ಕಾರ್ಯಕರ್ತರು – ಅವರು ಯಾರೂ ಅಳ್ಳೆದೆಯವರಾಗಿರಲಿಲ್ಲ – ಜಾಮೀನು ಅರ್ಜಿ ಹಾಕಿ, ಬಿಡುಗಡೆಯಾಗಿ, ತಾವಾಗಿ ಸೆರೆಯಿಂದ ಹೊರಬಂದರು. ನಂತರ ನಡೆದ ಚುನಾವಣೆಯಲ್ಲಿ ಅವರು ತಮ್ಮ ಹಳೆಯ ಸ್ಥಾನಗಳಲ್ಲಿ ಒಂದನ್ನು ಬಿಟ್ಟು ಬೇರೆ ಎಲ್ಲೆಡೆಯಲ್ಲೂ ತೀವ್ರ ಸೋಲನ್ನು ಕಂಡರು. ಈ



ರೀತಿಯಲ್ಲಿ ಚುನಾವಣಾ ರಾಜಕಾರಣದಲ್ಲಿ ಹಸಿವೆಯ ಪ್ರಶ್ನೆಯನ್ನು ಆಧರಿಸಿದ ಸ್ವಂತಿಕೆಯ ಕಥನ ಮೂಲೆಗುಂಪಾದ ವಿದ್ಯಮಾನವನ್ನು ಅರ್ಥೈಸಿಕೊಳ್ಳುವಲ್ಲಿ ಪ್ರಥಮತಃವಾಗಿ ಭಾರತೀಯ ರಾಜಕೀಯದಲ್ಲಿ ಆರ್ಥಿಕ ಉದಾರೀಕರಣವು ತಂದ ಬದಲಾವಣೆಗಳನ್ನು ವಿಶ್ಲೇಷಿಸಿಕೊಳ್ಳಲೇಬೇಕು. ಈ ಕಾರ್ಯದಲ್ಲಿ ರಾಮಮನೋಹರ ಲೋಹಿಯಾರವರ ಪ್ರಜಾಪ್ರಭುತ್ವ ಸಿದ್ಧಾಂತವು ತುಂಬ ಸಹಾಯಕವಾದುದು.

ಲೋಹಿಯಾರವರ ಪ್ರಕಾರ ಸಂಕೇತಗಳು ವಾಸ್ತವವನ್ನು ವಾಸ್ತವಕ್ಕಿಂತ ಹೆಚ್ಚು ಸ್ಪಷ್ಟವಾಗಿ ತಿಳಿಸಿಕೊಡುತ್ತವೆ. ಪ್ರಸ್ತುತ ಚರ್ಚೆಯ ವಿಷಯದ ಮಟ್ಟಿಗೆ ಹೇಳುವುದಾದರೆ ಭಾರತೀಯ ಪ್ರಜಾಪ್ರಭುತ್ವದ ಆರೋಗ್ಯವು ಮೂರು ಅಂತರ್‍ಸಂಬಂಧಿ ಸಂಕೇತ – ಸೆರೆಮನೆ, ಗುದ್ದಲಿ ಹಾಗೂ ಮತಪೆಟ್ಟಿಗೆ – ಗಳ ಚುರುಕಾದ ಹಾಗೂ ಪರಿಣಾಮ ಕಾರಿಯಾದ ಇರುವಿಕೆಯನ್ನು ಅವಲಂಬಿಸಿಕೊಂಡಿದೆ. ಸೆರೆಮನೆಯು ಹಕ್ಕು, ನ್ಯಾಯ, ಘನತೆ ಹಾಗೂ ಸ್ವಂತಿಕೆಗಳಂತಹ ಮಹತ್ ವಿಷಯಗಳಿಗೆ ಸಂಬಂಧಿಸಿದ ಎಲ್ಲ ಭಿನ್ನಮತಗಳ ಅಭಿವ್ಯಕ್ತಿಯ ಒಂದು ಸಂಕೇತ ರೂಪವಾಗಿದೆ. ಗುದ್ದಲಿಯು ರಚನಾತ್ಮಕ ರಾಜಕಾರಣ ಹಾಗೂ ಸಾಮುದಾಯಿಕ ಕ್ರಿಯಾಶೀಲತೆಗಳ ಸಂಕಲ್ಪವನ್ನು ಪ್ರತಿನಿಧಿಸುತ್ತದೆ. ಅದು ಸಮಾಜದ ರಾಜಕೀಯ ಸ್ತರ ಹಾಗೂ ನಾಗರಿಕ ಸ್ತರಗಳ ನಡುವಿನ ಬಹುದೊಡ್ಡ ಸಾವಯವ ಸಂಪರ್ಕಸೇತುವೂ ಆಗಿದೆ. ೧೯೮೦ರ ದಶಕದ ಕೊನೆಯ ಭಾಗದವರೆಗೆ ರಾಜಕೀಯ ಪ್ರತಿಭಟನಕಾರರಿಂದ ತುಂಬಿ ಮೊಳಗುತ್ತಿದ್ದ ಬೀದಿಗಳು, ಅಂಥವರಿಂದಲೆ ತುಂಬಿ ತುಳುಕುತ್ತಿದ್ದ ಸೆರೆಮನೆಗಳು, ಮತ್ತು ಮತಪೆಟ್ಟಿಗೆ (ಮೂರನೆಯ ಸಂಕೇತ)ಯ ಮುಖಾಂತರ ಕೊನೆಯ ಪಕ್ಷ ಸರಳ ಬಹುಮತ ವನ್ನಾದರೂ ಗೆದ್ದುಕೊಂಡ ಪಕ್ಷಗಳನ್ನು ಸ್ವಾಗತಿಸುತ್ತದ್ದ ಶಾಸನಸಭೆಗಳ ನಡುವೆ, ರಾಜಕೀಯ-ಸ್ಥಳ ಹಾಗೂ-ಕಾಲಗಳೆರಡರ ಮಟ್ಟಿಗೂ, ಅಂಥ ದೊಡ್ಡ ಬಿರುಕುಗಳೇನಿರುತ್ತಿರಲಿಲ್ಲ. ಆದರೆ ಇಂದು ಆರ್ಥಿಕ ಉದಾರೀಕರಣದ ನೀತಿಯು ಭಾರತೀಯ ರಾಜ್ಯವ್ಯವಸ್ಥೆಯನ್ನು ತುಂಡುತುಂಡಾಗಿ ಸೀಳಿದೆ ಹಾಗೂ ಮೇಲೆ ಪ್ರಸ್ತಾಪಿಸಿದ ಮೂರೂ ಸಂಕೇತಗಳ ನಡುವಿನ ಜೀವದಾಯಕ ಸಂಬಂಧವನ್ನು ಕಡಿದುಚೆಲ್ಲಿದೆ. ಅವುಗಳ ನಡುವೆ ಇಂದು ಉಳಿದುಕೊಂಡಿರುವ ಅಲ್ಪ ಸಂವಹನವೂ ಮೂಕರೂಪದ್ದಾಗಿದೆ. ಪ್ರಸ್ತುತ ಸನ್ನಿವೇಶದಲ್ಲಿ ಮತಪೆಟ್ಟಿಗೆಯೆ ಸರ್ವಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದು ಉಳಿದೆರಡೂ ಸಂಕೇತಗಳನ್ನು ಅದು ನಗಣ್ಯವಾಗಿಸಿದೆ. ಹಕ್ಕು, ನೀತಿ ಮತ್ತು ಆರ್ಥಿಕತೆಗಳ ನಡುವಿದ್ದ ಕೆಲವು ನಿರ್ದಿಷ್ಟ ರೂಪದ ಕೊಂಡಿಗಳು ಇಂದು ಕಾಣಲೂ ಸಿಗುತ್ತಿಲ್ಲ. ರಾಜಕೀಯ ಪಕ್ಷಗಳು ಚುನಾವಣಾಯಂತ್ರಗಳ ಮಟ್ಟಕ್ಕಿಳಿದು ಸಮಾಜದ ಎಲ್ಲ ಸಂರಚನೆಗಳು, ಕ್ಷೇತ್ರಗಳು ಹಾಗೂ ಕ್ರಿಯೆಗಳು ಮತಪೆಟ್ಟಿಗೆಯ ಅಡಿಯಾಳು

ಗಳಾಗಿವೆ; ಚುನಾವಣೆಯಲ್ಲಿ ಜಯ ಗಳಿಸುವುದೊಂದೆ ಪರಮಗುರಿಯಾಗಿ ಭಾರತೀಯ ರಾಜ್ಯವ್ಯವಸ್ಥೆ ಛಿದ್ರವಾಗಿಹೋಗಿದೆ. ಇಂಥಲ್ಲಿ ನವ-ಉದಾರವಾದ ಹಾಗೂ ಜನಪ್ರಿಯವಾದಗಳೆರಡೂ ಪರಸ್ಪರ ಬೆರೆತು ಪೊಳ್ಳು ರಾಜಕೀಯ ಸಂಭ್ರಮದೊಂದು ಸನ್ನಿವೇಶವನ್ನು ಸೃಷ್ಟಿಸಿವೆ. ಇಡಿ ದೇಶದ ರಾಜಕಾರಣ 'ಒಳ ವರ್ತುಲ' 'ಒಳ ಗುಂಪು' ಗಳ ಸ್ವತ್ತಾಗಿಹೋಗಿದೆ. ಇಂಥ ಅವನತಿಯನ್ನು ಯಾವ ರಾಜಕೀಯ ಪಕ್ಷವೂ ಪ್ರಶ್ನಿಸುತ್ತಿಲ್ಲ, ಪ್ರತಿರೋಧಿಸುತ್ತಿಲ್ಲ; ಬದಲಾಗಿ, ಅದರ ಲಾಭವನ್ನು ಪಡೆದುಕೊಳ್ಳುವ ಕೆಟ್ಟ ಆತುರ ಎಲ್ಲ ಪಕ್ಷಗಳಿಗೂ ಸರ್ವಸಾಮಾನ್ಯವಾಗಿದೆ; ಅದೊಂದು ಅಂಶದ ಬಗ್ಗೆ ಪಕ್ಷಗಳಲ್ಲಿ ಸಂಪೂರ್ಣ ಸಹಮತವಿರುವಂತೆ ತೋರುತ್ತದೆ. ಜಾಗತೀಕರಣದ ದೈತ್ಯ ಏಕಾಕಾರಿ ಸಂಕೇತ ಉಳಿದೆಲ್ಲ ಸಂಕೇತಗಳನ್ನು ಸಾವಿನತ್ತ ತಳ್ಳುತ್ತಿದೆ.

ಈ ಎಲ್ಲ ಹಿನ್ನೆಲೆಯ ಅಂಶಗಳು ತಿಳಿಯಪಡಿಸುವಂತೆ, ಪ್ರಸ್ತುತದ ಹಸಿವೆಯ ಪ್ರಶ್ನೆಯನ್ನಾಧರಿಸಿದ ಸ್ವಂತಿಕೆಯ ಕಥನವು ಬಯಕೆಯನ್ನಾಧರಿಸಿದ ಕಥನದ ಆಸೆ-ಆಕಾಂಕ್ಷೆಗಳಿಗಿಂತ ಮೂಲಭೂತವಾಗಿ ಭಿನ್ನವಾದ ಸಾಮುದಾಯಿಕ ತಲ್ಲಣವೊಂದನ್ನು ಅಭಿವ್ಯಕ್ತಿಗೊಳಿಸುತ್ತಿದೆ. ಈ ತಲ್ಲಣ ತೀವ್ರವಾದ ಸಾಮಾಜಿಕ ಅನಾಥತೆಯ ಪ್ರಜ್ಞೆಯಿಂದ ಹುಟ್ಟಿರುವಂಥದ್ದು. ತನ್ನ ಪಯಣದ ನಡುವೆ ಎಲ್ಲೊ ಒಂದೆಡೆ, ತಾನು ಕೊನೆಗೂ ಒಂದು ಪುಟ್ಟ ಕಥನ ಮಾತ್ರ ಎಂಬುದನ್ನು ಈ ಕಥನ ಕಂಡುಕೊಂಡಿದೆ. ಅದರ ಮೂಲಮಾದರಿಗೆ ವ್ಯವಸ್ಥೆಯ ಅಂಚಿನಲ್ಲಿ ಕೈಗೊಂಡ ಸಣ್ಣ ಸಾಂಕೇತಿಕ ಕ್ರಿಯೆಯೊಂದರ ಮೂಲಕ ಕೇಂದ್ರವನ್ನೆ ನಡುಗಿಸುವ ಬದಲಾಯಿಸುವ ಶಕ್ತಿ-ವೈಭವಗಳಿದ್ದವು. ಅಂಥ ಶಕ್ತಿ ತನಗಿಲ್ಲ, ಅಂಥ ಯುಗಧರ್ಮವೂ ತನ್ನ ಯುಗಕ್ಕಿಲ್ಲ ಎನ್ನುವ ವಿಷಾದಭರಿತ ಅರಿವು ರೈತಸಂಘದಂಥವರ ಚಟುವಟಿಕೆಗಳಿಗೆ ಬೇರೆಯೆ ಒಂದು ಲಕ್ಷಣವನ್ನು ನೀಡುತ್ತದೆ. ಅಂದು ಗಾಂಧಿ ನಿತ್ಯಬಳಕೆಯ ಸಾಮಾನ್ಯ ವಸ್ತುವೊಂದಾದ ಉಪ್ಪನ್ನು ಹಿಡಿಮುಷ್ಟಿಯಲ್ಲಿ ಎತ್ತಿ ಬ್ರಿಟಿಷ್ ಸಾಮ್ರಾಜ್ಯದ ಬುಡವನ್ನೆ ಅಲುಗಾಡಿಸಿದ್ದರು. ಅದೆ ರೀತಿಯಲ್ಲಿ ರೈತಸಂಘವು ನಿತ್ಯಬಳಕೆಯ 'ಕೋಳಿ'ಯನ್ನು ಸಂಕೇತ-ಶಕ್ತಿಯಾಗಿ ಬಳಸಿಕೊಳ್ಳಲು ಪ್ರಯತ್ನಿಸಿತು. ಇಡಿ ಸನ್ನಿವೇಶದ ವರ್ಣನಾತೀತ ವಿಪರ್ಯಾಸವೆಂದರೆ, ಕೋಳಿಯು ಅಂತರ್‍ರಾಷ್ಟ್ರೀಯ ವಾಣಿಜ್ಯ ಕ್ಷೇತ್ರದಲ್ಲಿ ಏನು ಭಯವನ್ನೂ ಸೃಷ್ಟಿಸದೆ ಹೋಯಿತು; ಆದರೆ ಇಂಥ ಸಾಧ್ಯತೆಯ ಅರಿವು ಮುಂಚಿತವಾಗಿಯೆ ಇದ್ದರೂ ಕೂಡ ಅದು ರೈತರ ಧೈರ್ಯವನ್ನು ಕುಂದಿಸಲಿಲ್ಲ, ಅವರ ಕ್ರಿಯೆಯ ಘನತೆ ಹಾಗೂ ಮಹತ್ವವನ್ನು ಕುಗ್ಗಿಸಲಿಲ್ಲ. ಇಂಥ ವಿಲಕ್ಷಣ ಬಿರುಕೆ ಈ ಪ್ರತಿರೋಧ-ಮಾದರಿಗೆ 'ಕಲಬೆರಕೆ' ಯ ರೂಪವನ್ನು ಕೊಟ್ಟಿತು. ರಾಕ್ಷಸ ವೈರಿಯ ಎದುರು ತನ್ನ ಸೀಮಿತಶಕ್ತಿಯ ಅರಿವು, ತನ್ನ ಹೋರಾಟ ಆತ್ಯಂತಿಕವಾಗಿ ನಿಷ್ಫಲವಾಗಬಹುದೆಂಬ ತಿಳಿವು, ಹಾಗಿದ್ದೂ



ತನ್ನ ಅಲ್ಪಶಕ್ತಿಗೆ ಸಾಧ್ಯವಿರುವಷ್ಟು ತನ್ನ ಕರ್ತವ್ಯವನ್ನು ನಿರ್ವಹಿಸಬೇಕೆಂಬ ಛಲ — ಇವೆಲ್ಲವೂ ಸೇರಿ ಈ 'ಕಲಬೆರಕೆ' ಗೊಂದು ಹೃದಯದ್ರಾವಕ ಗುಣವನ್ನೂ ತಂದಿತ್ತವು. ಹಾಗೆಯೆ, ರಾಜಕೀಯ, ಅಧಿಕಾರ ಮತ್ತು ಪ್ರಾತಿನಿಧ್ಯಗಳ ನಡುವೆ ಹೊಸದಾಗಿ ಮೂಡಿಕೊಂಡಿದ್ದ ಸಂಬಂಧವನ್ನು ಎದುರಿಸುವಲ್ಲಿ ಅತಿಭಿನ್ನವಾದ ಮಾರ್ಗವನ್ನು ಕಾಣಿಸಿದ್ದು ಈ 'ಕಲಬೆರಕೆ' ಚಳವಳಿಯ ರಾಜಕೀಯಾತ್ಮಕ ಕಾಣಿಕೆಯಾಯಿತು.

ಈ ಇಡಿ ಪ್ರಸಂಗ ರಾಜಕೀಯ ಏಕಾಕಿತನವನ್ನು ಸೂಚಿಸುವಂಥದಾಗಿದೆ. ಮೂಲ ಮಾದರಿಯಲ್ಲಿ ಗಾಂಧಿ ಸಾಮ್ರಾಜ್ಯಶಾಹಿ ಪಶ್ಚಿಮದ ವಿರುದ್ಧದ ವ್ಯಾಪಕ ನಾಗರಿಕತಾತ್ಮಕ ಹೋರಾಟದಲ್ಲಿ ಉಪ್ಪು ಮತ್ತು ಚರಕಾಗಳನ್ನು ದೊಡ್ಡ ಸಂಕೇತಗಳಾಗಿ ಬಳಸಿದ್ದಂತೆ, ಇಲ್ಲಿ ಹಸಿವೆಯ ಪ್ರಶ್ನೆಯನ್ನಾಧರಿಸಿದ ಕಥನವು ಎಲ್ಲ ಧರ್ಮ ಎಲ್ಲ ಸಮುದಾಯಗಳ ಜನರ ನಿತ್ಯಜೀವನದಲ್ಲಿ ಬಳಕೆಯಾಗುವಂತಹ ಸರ್ವಸಾಮಾನ್ಯ ವಸ್ತುವನ್ನು ತನ್ನ ಸಂಕೇತವಾಗಿ ನಿಯೋಜಿಸಲು ಯತ್ನಿಸಿತೇನೊ ಹೌದು. ಆದರೆ ಇಂಥ ನಿತ್ಯವಸ್ತುಗಳು ಕೆಲವೊಮ್ಮೆ ನಿಗೂಢವಾಗಿ ಧರ್ಮನಿರಪೇಕ್ಷ ವಸ್ತುಗಳೂ ಆಗಿಬಿಡುತ್ತವೆಯೆಂಬ ಅಂಶವನ್ನು ಅದು ಮುಂಗಾಣಲಿಲ್ಲ. ಇಂಥ ವಸ್ತುಗಳು ಹಲವೊಮ್ಮೆ ಭರವಸೆಯನ್ನೂ ಹತಾಶೆಯನ್ನೂ ಒಟ್ಟೊಟ್ಟಿಗೆ ಸೃಷ್ಟಿಸುತ್ತಿರುತ್ತವೆ. ಸ್ವಂತಿಕೆ ಕಥನಗಳಿಗೆ ನಿತ್ಯಸಾಮಾನ್ಯ ವಸ್ತುಗಳು ಅನಿವಾರ್ಯವಾದುವು ಸರಿ, ಆದರೆ ಅವು ನಿಜಕ್ಕೂ ಸಂಕೇತ-ಶಕ್ತಿಯನ್ನು ಪಡೆದುಕೊಳ್ಳಬೇಕಾದಲ್ಲಿ ಅವು ಮೊದಲು ಸಾಂಸ್ಕೃತಿಕ ಹಾಗೂ ಧಾರ್ಮಿಕ ಸ್ಮೃತಿಯೆಂಬ ಉಪ್ಪಿನಲ್ಲಿ ಅನೇಕ ವರ್ಷಗಳ ಕಾಲ ಸಂರಕ್ಷಿತಗೊಂಡಿರಬೇಕು. ಇದಕ್ಕೆ ತದ್ವಿರುದ್ಧವಾಗಿ, ಬಯಕೆಗಳನ್ನು ಆಧರಿಸಿದ ಕಥನವು ವಿರೋಧಾಭಾಸವೊಂದರ ರೂಪ ಧರಿಸಿ ರಾಜಕಾರಣದಲ್ಲಿ ತನ್ನ ಅಸ್ತಿತ್ವವನ್ನು ಕಾದುಕೊಳ್ಳುತ್ತ ಬರುತ್ತದೆ. ಈ ವಿರೋಧಾಭಾಸದಲ್ಲಿ ಜಾಗತಿಕ ಶಕ್ತಿಗಳು ಉತ್ಪಾದಿಸಿದ ನಿತ್ಯಜೀವನದ ವಸ್ತುಗಳಿಗೆ ಜಾಗತಿಕ-ಪೂರ್ವ ಧಾರ್ಮಿಕ ಸ್ಮೃತಿಗಳ ಆವರಣವೊಂದನ್ನು ಸೃಷ್ಟಿಸಿ ಅವುಗಳ ನಡುವೆ ಅತಿಸುಲಭದ ಸಮೀಕರಣವನ್ನು ಮಾಡಲಾಗುತ್ತದೆ. ಜಾಗತೀಕರಣವೆನ್ನುವುದು ಇಂದು ನಿತ್ಯಜೀವನದ ವಿವಿಧ ಭೋಗವಸ್ತುಗಳಿಂದ ನಾವು ಪಡೆದುಕೊಳ್ಳುವ (ಭ್ರಾಮಕ) ಆಧ್ಯಾತ್ಮಿಕ ಅನುಭವವೂ ಆಗಿಬಿಟ್ಟಿದೆ. ಕ್ಷಣಸಿದ್ಧ ತಿನಿಸುಗಳು, ಸಾಬೂನುಗಳು, ಬಟ್ಟೆಬರೆಗಳು, ಕ್ರೆಡಿಟ್ ಕಾರ್ಡುಗಳು, ಗರ್ಭನಿರೋಧಕಗಳು, ಸಂಗೀತ-ನೃತ್ಯಗಳೆಲ್ಲವೂ ಕೂಡ ಈವರೆಗೆ ತಿಳಿದಿದ್ದ ಗಡಿಗಳಾಚೆಗೆ ಮಾನವನನ್ನು ಧಾವಂತದಲ್ಲಿ ಕರೆದೊಯ್ಯುವ ವಾಹನಗಳಾಗಿವೆ. ಇಷ್ಟೆಲ್ಲ ಇದ್ದೂ ಈ ಜಾಗತೀಕರಣದ ಉತ್ಪಾದನೆಗಳು ತೀರ ನಮ್ಮವೆ, ಸ್ಥಳೀಯವೆ, ನಮ್ಮ ಪ್ರೀತಿಯ ದೇಶ-ಊರುಗಳವೆ ಎನ್ನುವಂಥ ಹೊರರೂಪವನ್ನು ಪಡೆದುಕೊಂಡಾಗಿದೆ.

ಜಾಗತೀಕರಣದ ಮುಖ್ಯವಾದೊಂದು ಸಾಧನೆಯೆ ಇದು: ಅಪರಿಚಿತವಾದ್ದನ್ನೆಲ್ಲ ಪರಿಚಿತವಾದ್ದಾಗಿ ಪರಿವರ್ತಿಸುತ್ತ, ಅವೆರಡು ವಲಯಗಳ ಭಿನ್ನತೆಗಳನ್ನೆಲ್ಲ ನೆಲಸಮ ಮಾಡುತ್ತ ಅದು ತನ್ನ ಸಾರ್ವಭೌಮ ಶಕ್ತಿಯನ್ನು ದಿನೇದನೇ ಬೆಳೆಸಿಕೊಳ್ಳುತ್ತಿದೆ.

ಇದಕ್ಕೆ ಪ್ರತಿರೋಧವಾಗಿ ಭಾರತದ ಹಸಿವೆಯ ಕಥನವು ದೈನಂದಿನ ವಸ್ತುಗಳ ಭಿನ್ನತೆಗಳನ್ನು ಉಳಿಸಿಕೊಳ್ಳುವುದರ ಮೂಲಕ ತನ್ನ ಪರಿಸರವನ್ನು ಕಾಪಾಡಿಕೊಳ್ಳಲು ಛಲದಿಂದ ಹೋರಾಡುತ್ತಿದೆ. ಇಲ್ಲಿಯೂ ಒಂದು ದುರಂತಾತ್ಮಕ ವ್ಯಂಗ್ಯವುಂಟು. ಈ ಕಥನವು ತನ್ನ ಭವಿಷ್ಯದ ಭರವಸೆಯನ್ನು ತನ್ನ ಪಾರಂಪರಿಕತಂತ್ರಜ್ಞಾನ ರೂಪಗಳ ಮೇಲೆ ಕಟ್ಟನಿಲ್ಲಿಸಲು ಅಪೇಕ್ಷಿಸುತ್ತದೆ. ಇಂಥ ತಂತ್ರಜ್ಞಾನಗಳು ಸ್ಥಳೀಯವಾದುವು, ತತ್‌ಕಾರಣ ಜಾಗತಿಕ ಸ್ತರದಲ್ಲಿ ಪುನರ್‌ಸೃಷ್ಟಿಯ ಅಥವಾ ಪುನರವತರಣಿಕೆಯ ಸಾಧ್ಯತೆಯಿಲ್ಲದಿರುವಂಥವು. ಒಂದು ಪಕ್ಷ ಇವುಗಳನ್ನು ಉಳಿಸಿಕೊಳ್ಳಲೆಬೇಕೆಂಬ ಹಠವಿದ್ದರೆ ಅದಕ್ಕಾಗಿ ಜಾಗತಿಕ ಶಕ್ತಿಗಳ ಮೊರೆಹೋಗುವುದು ಅನಿವಾರ್ಯವಾಗುತ್ತದೆ. ಇದು ಇಂದು ಶೀಘ್ರವಾಗಿ ಕಣ್ಮರೆಯಾಗುತ್ತಿರುವ ಸಸ್ಯ ಹಾಗೂ ಪ್ರಾಣಿಗಳ ಅಸಂಖ್ಯ ಸ್ಥಳೀಯ ತಳಿಗಳ ದುರಂತ ಕಥೆಯೂ ಹೌದು. ಒಂದೆಡೆ ಅವು ಜಗತ್ತಿನಿಂದ ಅದೃಶ್ಯವಾಗುತ್ತಿರುವುದೇ ಜಾಗತಿಕ ಶಕ್ತಿಗಳ ಆಕ್ರಮಣದ ಪರಿಣಾಮವಾಗಿ; ಇನ್ನೊಂದೆಡೆ ಅವನ್ನು ಸಂರಕ್ಷಿಸುವಲ್ಲಿ ಮತ್ತದೆ ಬಂಡವಾಳಶಾಹಿಗಳ ಹಣದ ಬೆಂಬಲ ಅನಿವಾರ್ಯವಾಗುತ್ತದೆ. ಅಂದರೆ, ಆಧುನಿಕ ಜಾಗತಿಕ ಶಕ್ತಿಗಳ ಪ್ರಭಾವದಾಚೆಗೆ ಹಳೆಯ ಜಗತ್ತಿನ ಜೀವನಕ್ಕೂ ಅರ್ಥವಿಲ್ಲ, ಮರಣಕ್ಕೂ ಅರ್ಥವಿಲ್ಲ.

ಹಸಿವೆಯ ಕಥನಗಳು ಉಳಿಸಿಕೊಳ್ಳಬೇಕೆಂದು ಹಾತೊರೆಯುವ ಜೀವ-ಜೀವನ-ಭಿನ್ನತೆಗಳು ದೈನಂದಿನ ಬಾಳಿನ ವ್ಯವಹಾರ-ಅಭ್ಯಾಸಗಳಿಗೆಯೆ ಸಂಬಂಧಪಟ್ಟವು; ಹಾಗಾಗಿ, ಮೇಲುವರ್ಗದಿಂದ ಹೇರಲ್ಪಟ್ಟ ಹೊಸದಾದ ಉತ್ಪಾದನೆ- ಉಪಭೋಗಗಳ ಮಾದರಿಯ ದಾಳಿಗೆ ಅವು ಬಲುಬೇಗ ಬಲಿಯಾಗುತ್ತವೆ. ಕೆಂಟುಕಿ ಫ್ರೈಡ್ ಚಿಕನ್ ಸಂಸ್ಥೆ ಬರಿ ಕೋಳಿಯನ್ನು ಮಾರದೆ ಜಾಹೀರಾತುಗಳ ಮೂಲಕ ಅದನ್ನು ಮಾಂತ್ರಿಕವಾದೊಂದು ಪ್ರತಿಷ್ಠಾ ಸಂಕೇತವನ್ನಾಗಿ ಪರಿವರ್ತಿಸಿ ಮಾರುವುದರಿಂದ ಅದರ ಅಮೂರ್ತ ಶಕ್ತಿಯೆದುರು ಸ್ಥಳೀಯ ಕೋಳಿಗಳು ಕಾಳಗ ಮಾಡುವುದೆ ಸಾಧ್ಯವಿಲ್ಲ. ಮಾಧ್ಯಮಗಳ ಥಳಕುಬಳುಕಿನ ಪ್ರಚಾರಕ್ಕೆ ಬಲಿಬಿದ್ದ ಭಾರತೀಯ ಮಧ್ಯಮ ಹಾಗೂ ಮೇಲುವರ್ಗ ಕೆಂಟುಕಿ ಕೋಳಿಯನ್ನೆ ಇಷ್ಟಪಡುತ್ತಿದ್ದರೆ ಅಲ್ಲಿಗೆ ಸ್ಥಳೀಯ ಕೋಳಿಗಳ ಹಾಗೂ ಬೆಳೆಗಾರರ ಕಥೆ ಮುಗಿದಂತೆಯೆ. ಹೀಗಾಗಿಯೆ ಈ ಕಥನವು ದೈನಂದಿನ ಜೀವನದಲ್ಲಿ ಭಿನ್ನತೆಗಳನ್ನು – ಕೆಲವೊಮ್ಮೆ ಕಾಲವಿಸಂಗತವೆಂದೂ ಕಾಣುವ ಜೀವನಶೈಲಿಗಳನ್ನು – ಉಳಿಸಿಕೊಳ್ಳಲು ಹಠತೊಟ್ಟು ಹೆಣಗುತ್ತದೆ. ಅದೆ ವೇಳೆಗೆ, ತಮ್ಮ



ಒತ್ತಾಯವನ್ನು ದೈನಂದಿನ ಆರ್ಥಿಕ ಮೂರ್ತತೆಯಿಂದ ಪಾರಮಾರ್ಥಿಕ ಅಮೂರ್ತತೆಯತ್ತ ಒಯ್ಯುವುದನ್ನು ಖಡಾಖಂಡಿತವಾಗಿ ತಿರಸ್ಕರಿಸುವ ಅವರ ನಿಲುವು ಅವರ ಸಂಸ್ಕೃತಿ-ವಿಶಿಷ್ಟತೆಯ ದೊಡ್ಡ ಸಾಕ್ಷಿಯಾಗಿದೆ.

ಜಾಗತೀಕರಣದ ಶಕ್ತಿಗೆ ಇಂಥ ಪ್ರತಿರೋಧಗಳೆ ದೊಡ್ಡ ಸವಾಲುಗಳಾಗಿ ಕಾಡುತ್ತವೆ. ಮತೀಯವಾದಿ ಹಿಂದೂಗಳ ಪ್ರತಿರೋಧವನ್ನು ಅದು ಅರ್ಥ ಮಾಡಿಕೊಳ್ಳುತ್ತದೆ, ಅವರಿಗೂ ಒಂದು ತುಂಡು ಪಾಲನ್ನು ಕೊಟ್ಟು ತಲೆ ಸವರಿ ಅವರನ್ನು ಸುಮ್ಮನಿರಿಸುತ್ತದೆ. ಯಾಕೆಂದರೆ ಜಾಗತೀಕರಣ ಹಾಗೂ ಮತೀಯವಾದಿಗಳ ಅಂತಃಸ್ವರೂಪ ಕೊನೆಗೂ ಒಂದೆ ರೀತಿಯದು; ಅವುಗಳ ಪರಿಭಾಷೆಗಳೂ ಒಂದೆ ತೆರನಾದವು. ಆದರೆ ಹಸಿವೆಯ ಕಥನವು ತನ್ನದೆ ಹೊಟ್ಟೆಯ ಭಾಷೆಯಲ್ಲಿ ಮಾತನಾಡುವುದರಿಂದ ಜಾಗತೀಕರಣಕ್ಕೆ ಒಂದೊ ಅದರ ಮಾತು ಅರ್ಥವಾಗುವುದಿಲ್ಲ, ಇಲ್ಲ, ಅರ್ಥವಾದರೂ ಅದನ್ನು ತನ್ನ ಹತೋಟಿಗೆ ತಂದುಕೊಳ್ಳಲಾಗುವುದಿಲ್ಲ. ಹೀಗಾಗಿ ಹಸಿವೆಯ ಕಥನ ಕೊನೆಗೂ ಏಕಾಂಗಿಯಾಗಿಯೆ ಉಳಿದುಕೊಳ್ಳುತ್ತದೆ. ಆದರೆ ಆ ಏಕಾಕಿತನವೆ ಅದಕ್ಕೆ ವೈರಿನಾಶಕ ಶಕ್ತಿಯನ್ನೂ ತಂದುಕೊಡಬಲ್ಲದು.

### ಭಾಗ ೪

ಅಹಿಂಸೆಯ ದೂತ ಗಾಂಧಿಯ ಪ್ರಸ್ತಾಪ ಬಂದಲ್ಲಿ ಹಿಂಸೆಯನ್ನು ಮರೆತು ಮಾತನಾಡಲು ಸಾಧ್ಯವೆ? ಲೇಖನದ ಈ ಹಂತದಲ್ಲಿ ನಾವು ಅತ್ಯನಿವಾರ್ಯವಾಗಿ ಮತ್ತೆ ಹಿಂಸೆಯ ಚರ್ಚೆಗೆ ಮರಳಬೇಕಾಗಿದೆ. ಎಲ್ಲರಿಗೂ ತಿಳಿದಿರುವಂತೆ ಬಯಕೆಯ ಕಥನದ ಹಿಂದೂ ವ್ಯಕ್ತಿತ್ವ ಹಾಗೂ ಗಾಂಧಿಯ ನಡುವಿನ ಅತ್ಯಂತ ಮೂಲಭೂತ ವ್ಯತ್ಯಾಸ ಹಿಂಸೆಯ ಪ್ರಶ್ನೆಗೆ ಸಂಬಂಧಿಸಿದುದೆ ಆಗಿತ್ತು. ಹಿಂಸೆಯ ಪ್ರಶ್ನೆ ವ್ಯಕ್ತಿಗಳನ್ನು ಮಾತ್ರವಲ್ಲ ಸಮುದಾಯಗಳನ್ನೂ ಬೆಂಬಿಡದೆ ಕಾಡುವಂಥದು. ಸಮಾಜಗಳು ತಮ್ಮ ಸಾಮೂಹಿಕ ಸ್ವಂತಿಕೆಯನ್ನು ಕಲ್ಪಿಸಿಕೊಳ್ಳುವ ಕಟ್ಟಿಕೊಳ್ಳುವ ಕ್ರಿಯೆಯಲ್ಲಿಯೆ ತುಂಬ ವಿಶಾಲವಾದ ತಾತ್ವಿಕ ಸ್ತರದಲ್ಲಿ ಹಿಂಸೆಯ ಪ್ರಶ್ನೆಯನ್ನು ಎದುರಿಸಿ ಉತ್ತರಿಸಬೇಕಾಗುತ್ತದೆ. ಕೆಲವು ಸಮಾಜಗಳಿಗೆ, ಸಮಾಜಗಳ ಕೆಲವು ಭಾಗಗಳಿಗೆ ಹಿಂಸೆಯು ತಮ್ಮ ತನವನ್ನು ಗುರುತಿಸುವ ಅತಿಮುಖ್ಯ ಸಾಧನವಾಗಿ ಕಂಡುಬರುತ್ತದೆ. ಹಿಂದೂ ಮತೀಯವಾದ ಇದಕ್ಕೆ ಅತ್ಯಂತ ಪ್ರಾತಿನಿಧಿಕವಾದೊಂದು ನಿದರ್ಶನ. ಅದು ಒಂದೊ ತನ್ನನ್ನು ಅನ್ಯರ ಹಿಂಸೆಯ ಬಲಿಪಶುವಾಗಿ ಕಾಣುತ್ತದೆ, ಇಲ್ಲ, ತನ್ನತನವನ್ನು ಕಟ್ಟಿಕೊಳ್ಳುವಲ್ಲಿ ಅನ್ಯರನ್ನು ಹಿಂಸೆಗೆ ಈಡುಮಾಡುವುದು ಅಪ್ರಿಯವಾದರೂ ಅನಿವಾರ್ಯವೆಂದು ವಾದಿಸುತ್ತದೆ.

ಜಾಗತೀಕರಣವನ್ನು ಪಾರಂಪರಿಕ ಧರ್ಮಗಳ ಸ್ಮೃತಿನಾಶದ ಪ್ರಕ್ರಿಯೆ

ಯಾಗಿಯೂ ಕಾಣುವುದುಂಟು. ಇಂಥ ಸ್ಮೃತಿನಾಶದ ಭಯ ದಕ್ಷಿಣ ಏಷಿಯಾದ ಹಿಂದೂ ಹಾಗೂ ಮುಸ್ಲಿಮರಿಬ್ಬರನ್ನೂ ಸಮಾನವಾಗಿ ಕಾಡುತ್ತಿದೆ. ಹಿಂದೂ ಧಾರ್ಮಿಕ ಪರಂಪರೆಯ ಪ್ರತೀಕಗಳು ಹಾಗೂ ಸಂಕೀರ್ಣ ಸಂಕೇತ ವ್ಯವಸ್ಥೆಗಳು ಜಾಗತಿಕ ಸಾಂಸ್ಕೃತಿಕ ವಲಯಗಳಲ್ಲಿ ಮುಖ್ಯವಾದೊಂದು ಸ್ಥಾನವನ್ನು ಪಡೆದುಕೊಂಡಿರುವಂತೆ ತೋರುತ್ತದಾದರೂ ವಾಸ್ತವಿಕವಾಗಿ ಅವು ಪರರ ಪವಿತ್ರ ಅಂಶಗಳನ್ನು ತನ್ನಲ್ಲಿ ಕರಗಿಸಿಕೊಂಡ ಪಶ್ಚಿಮ ಪ್ರಜ್ಞೆಯ ಚೌಕಟ್ಟಿನೊಳಗೆಯೆ ಬಂದಿಯಾಗಿವೆ ಹೊರತು ತಮ್ಮ ಸ್ವಂತಿಕೆಯನ್ನೇನೂ ಅಲ್ಲಿ ಉಳಿಸಿಕೊಂಡಿಲ್ಲ. ಪಶ್ಚಿಮಪ್ರಜ್ಞೆ ಇಲ್ಲಿಯೂ ಕೂಡ ಸ್ಥಳೀಯವಾದುದನ್ನು ಜಾಗತಿಕವಾದುದನ್ನಾಗಿ ಪರಿವರ್ತಿಸುವ ಮಾರುಕಟ್ಟೆಯ ತಂತ್ರವನ್ನು ಬಿಟ್ಟುಕೊಟ್ಟಿಲ್ಲ. ಸಂಗೀತದಂತಹ ಅತ್ಯಂತ ಸ್ಥಳವಿಶಿಷ್ಟವಾದ ಪ್ರಕಾರದಲ್ಲಿಯೂ ಕೂಡ ಪಾಶ್ಚಿಮಾತ್ಯ ಬಂಡವಾಳಶಾಹಿ ಪವಿತ್ರವಾದುದನ್ನು ಅದರ ಪಾರಂಪರಿಕ ವಿಶ್ವದಿಂದ ಅಪಹರಿಸಿಕೊಂಡು ಹೋಗಿ ನಂತರ ಅದನ್ನು ಬರಿದೊಂದು ಭೋಗವಸ್ತುವನ್ನಾಗಿ ಪರಿವರ್ತಿಸುತ್ತಿದೆ. ಜಿಯಾವುದ್ದೀನ್ ಸರ್ದಾರ್ ಚರ್ಚಿಸಿರುವಂತೆ, ಪಾಕಿಸ್ತಾನಿ ಹಾಡುಗಾರ ನುಸ್ರತ್ ಫತೆ ಅಲಿಖಾನ್‌ನ ಸೂಫಿ ಸಂಗೀತವನ್ನು ಅಂತರ್ರಾಷ್ಟ್ರೀಯ ಮಾರುಕಟ್ಟೆಗೆ ತರುವಾಗ ಜಾಗತಿಕ ಸಾಂಸ್ಕೃತಿಕ ಹಿತಾಸಕ್ತಿಗಳು ಆ ಸಂಗೀತದ ಒಟ್ಟೂ ಅನುಭವದಲ್ಲಿ ಪರವಶತೆಯ ಅಂಶವನ್ನು ಮಾತ್ರ ಆರಿಸಿ ಪ್ರಚುರಗೊಳಿಸುತ್ತವೆ. ಆ ಅನುಭವದ ಮೂಲ ಸಂದರ್ಭವು ಅನೇಕ ಭಿನ್ನ ವಿಶಿಷ್ಟ ಎಳೆಗಳ ಅಖಂಡ ಸಮಗ್ರ ಹೆಣಿಗೆಯಾಗಿದ್ದರೆ, ಆಧುನಿಕ ಭೋಗ ಸಂಸ್ಕೃತಿಯು ತನಗೆ ಮೂಲಭೂತ ಸವಾಲುಗಳನ್ನು ಒಡ್ಡುವ ಅಂಥವೆಲ್ಲ ಎಳೆಗಳನ್ನು ತುಂಡರಿಸಿ ಎಸೆದು ಭಾವಾವೇಶದ ಅಂಶವೊಂದನ್ನಷ್ಟೆ ಭೋಗದ ಸರಕಾಗಿ ಬದಲಿಸಿ ತನ್ನ ಗಿರಾಕಿಗಳಿಗೆ ನೀಡುತ್ತದೆ. ಹಿಂದೂ ಪರಂಪರೆಯ ಅನೇಕ ಅಂಶಗಳಿಗೂ ಇದೆ ರೀತಿ ಪಶ್ಚಿಮದ ಸ್ವತ್ತಾಗುವ ಗತಿ ಬಂದೊದಗಿದೆ. ಈ ರೀತಿ 'ಪರ-ವಶ' ವಾಗುವುದನ್ನು ತಡೆಯಲೆಂದು ಕೆಲವೊಮ್ಮೆ ಧಾರ್ಮಿಕ ವ್ಯವಸ್ಥೆಗಳು ಕೆಲವು ಸಾಂಕೇತಿಕ ಹಾಗೂ ಪವಿತ್ರ ವಲಯಗಳನ್ನು ಶೀತಲೀಕರಿಸಿ, ಆ ಮೂಲಕ ಅವುಗಳನ್ನು ಕಾಲಾತೀತಗೊಳಿಸಿ, ಅಂಥ ಅಂಶಗಳದ್ದೆ ಒಂದು ವಿಶೇಷ ಕ್ಷೇತ್ರವನ್ನು ಸೃಷ್ಟಿಸಲು ಯತ್ನಿಸುತ್ತವೆ. ಸಮಸ್ಯೆಯೆಂದರೆ, ಸಾಂಸ್ಕೃತಿಕ ರಾಜಕಾರಣದ ಭಾಗವಾಗಿ ಕೆಲವು ನಿರ್ದಿಷ್ಟ ಗುಂಪುಗಳು ಇಂಥ ಕೆಲಸ ಕೈಗೆತ್ತಿಕೊಂಡಾಗ ಅವು ಬೇರೆ ಗುಂಪುಗಳ ಸ್ಮೃತಿಗಳನ್ನು ಹಿಂಸೆಗೀಡುಮಾಡುವುದುಂಟು. ಇಂಥ ಸನ್ನಿವೇಶದಲ್ಲಿ ಸ್ವಂತಿಕೆಯೆನ್ನುವುದು ಸ್ಮೃತಿಗಳ -- ಅವುಗಳಲ್ಲಿ ಕೆಲವು ವಾಸ್ತವವಾದುವು, ಕೆಲವು ಕಲ್ಪಿತವಾದುವು – ಒಂದು ಆಟವಾಗಿಬಿಡುತ್ತದೆ.

ಹಿಂದೂ ಮತೀಯವಾದಿಗಳು ಐತಿಹಾಸಿಕ ಸ್ಮೃತಿಯನ್ನು ತಮ್ಮ ಸ್ವಂತಿಕೆಯ



ಕಥನವನ್ನು ಕಟ್ಟುವ ಹಾಗೂ ವಿಸ್ತರಿಸುವ ಶಕ್ತಿಯಾಗಿ ಬಳಸಿಕೊಂಡರು. ಅವರ ನಡುವಿನ ಭಯೋತ್ಪಾದಕರು ಹಿಂಸೆಯನ್ನು ಇತಿಹಾಸದ ಒಂದು ಇತ್ಯಾತ್ಮಕ ಶಕ್ತಿಯೆಂದು ಪರಿಗಣಿಸಿ ಅದನ್ನು ತಮ್ಮ ಪರಮ ಅಸ್ತ್ರವನ್ನಾಗಿಸಿಕೊಂಡರು. ಆದರೆ ಗಾಂಧಿ ಇತಿಹಾಸ ಮತ್ತು ಹಿಂಸೆಗಳೆರಡನ್ನೂ ತಿರಸ್ಕರಿಸಿದರು; ಪುರಾಣ ಮತ್ತು ಅಹಿಂಸೆಯ ಪರಿಕಲ್ಪನೆಗಳನ್ನು ಅಪ್ಪಿಕೊಂಡರು. ಇದೆ ವೇಳೆಯಲ್ಲಿ ಮತೀಯವಾದಿ ಹಿಂದೂಗಳು ಆಧ್ಯಾತ್ಮಿಕ ಹಾಗೂ ಪೌರಾಣಿಕ ಸಂಕೇತಗಳನ್ನು ಐತಿಹಾಸಿಕ ವಾಸ್ತವದ ಮಟ್ಟಕ್ಕಿಳಿಸಿ ತಮ್ಮ ರಾಜಕೀಯ ಕಾರ್ಯಕ್ರಮದಲ್ಲಿ ದೇವದೇವತೆಗಳನ್ನೂ ಎಳೆದುತಂದು ದುಡಿಯಹಚ್ಚಿದರು.

ಬಯಕೆಗಳನ್ನು ಆಧರಿಸಿದ ಕಥನಕ್ಕೂ ಹಿಂಸೆಗೂ ಆಳವಾದ ಸಂಬಂಧವಿರುತ್ತದೆಯೆಂದು ನಾನು ಈ ಲೇಖನದ ಮೊದಲ ಭಾಗದಲ್ಲೆ ಪ್ರಸ್ತಾಪಿಸಿದ್ದೆ. ಅದನ್ನು ಹೆಚ್ಚು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವಲ್ಲಿ ಜೈನ ಪರಿಕಲ್ಪನೆಯೊಂದರ ಸಹಾಯವನ್ನು ಪಡೆಯಬಹುದು. ಅದರ ಪ್ರಕಾರ ಆಸೆ, ಆತಂಕ ಹಾಗೂ ಹಿಂಸೆಗಳು ಗಾಢವಾದ ಅಂತಃಸಂಬಂಧವುಳ್ಳ ಮೂರು ವಿಷಯಗಳು. ಆಸೆ ಮಾನವನನ್ನು ಅನ್ಯನ/ದ ದಾಸನನ್ನಾಗಿಸುತ್ತದೆ; ಹಾಗೆ ಸ್ವಂತಿಕೆಯನ್ನು ಕಳೆದುಕೊಳ್ಳುವ ಭಯ ಆತಂಕವನ್ನು ಹುಟ್ಟಿಸುತ್ತದೆ; ಅಂಥ ಆತಂಕ ಪರಹಿಂಸೆಯಲ್ಲಿ ಪರ್ಯವಸಾನಗೊಳ್ಳುತ್ತದೆ; ಒಬ್ಬ ಅನ್ಯ ತನಗಿಂತ ಬಲಿಷ್ಠನೆಂದು ಕಂಡುಬಂದಾಗ ಆ ಹಿಂಸ್ರಕ ಮನಸ್ಸು ತನಗಿಂತ ದುರ್ಬಲನೊಬ್ಬನನ್ನು ಬಲಿಯಾಗಿ ಹುಡುಕತೊಡಗುತ್ತದೆ.

ಹಿಂಸೆಯ ಇಂಥ ಸಮ್ಮೋಹಕತೆಯನ್ನು ಹಸಿದ ರೈತನೂ ಎದುರಿಸಬೇಕು, ಅದನ್ನು ನಿಭಾಯಿಸಬೇಕು. ಜಾಗತಿಕ ಸ್ತರದ ಉತ್ಪಾದನೆ ತನ್ನ ವೈರಿಯೆಂದೂ, ಪರೋಕ್ಷ ಹಾಗೂ ಅಗೋಚರನಾಗಿದ್ದರೂ ಅವನೆ ತನ್ನ ಜಾಗವನ್ನು ಆಕ್ರಮಿಸಿಕೊಂಡಿರುವನೆಂದೂ ತಿಳಿದ ರೈತ ಈಗ ತನ್ನ ಪ್ರತಿಸ್ಪಂದನೆಯನ್ನು ಮೂರ್ತಾಮೂರ್ತರೂಪಗಳೆರಡರಲ್ಲೂ ಪ್ರಕಟಿಸಬೇಕು. ಇಲ್ಲಿಯೆ ಆತನ ದುರಂತವಿಧಿ ಅಡಗಿರುವುದು. ಪ್ರತಿರೋಧದ ಪ್ರಕ್ರಿಯೆಯಲ್ಲಿ ಆತ ತನ್ನದೆಲ್ಲವನ್ನೂ ತ್ಯಾಗ ಮಾಡುತ್ತ ನಡೆಯಬೇಕು. ಒಂದೆಡೆ ಆತ ತನ್ನನ್ನು ರಕ್ಷಿಸಿಟ್ಟಿದ್ದ ಸಾಂಸ್ಕೃತಿಕ ಸ್ಮೃತಿಕವಚವನ್ನು ಬಿಟ್ಟು ಹೊರಗೆ ಬರಬೇಕು; ಯಾಕೆಂದರೆ ಆತನನ್ನು ಈಗ ಕಿತ್ತು ತಿನ್ನುತ್ತಿರುವ ಸಮಸ್ಯೆ ಮೂಲಭೂತವಾಗಿ ಭೌತಿಕವಾದುದು. ಆದರೆ ಇನ್ನೊಂದೆಡೆ ಆತ ಬೇರೆ ರೈತರೊಡಗೂಡಿ ಸಾಂಸ್ಕೃತಿಕ ಸ್ತರದ ಸಂಘಟನೆಯನ್ನು ಮಾಡಿಕೊಳ್ಳದೆ ಬೇರೆ ದಾರಿಯೆ ಇಲ್ಲ; ಯಾಕೆಂದರೆ ಅವನನ್ನು ಈಗ ಪ್ರಪಾತದಂಚಿಗೆ ತಳ್ಳುತ್ತಿರುವ ಜಾಗತೀಕರಣದ ಶಕ್ತಿಗಳಿಗೆ ಸಾಂಸ್ಕೃತಿಕ ಸ್ಮೃತಿಮೂಲದ ಭಾಷೆ ಮಾತ್ರ ಅರ್ಥವಾಗುವುದು. ಅದನ್ನಾದರೂ ಮಾಡೋಣವೆಂದು

ಹೊರಟರೆ ರೈತನಿಗೆ ಇನ್ನೂ ಘೋರ ಸಮಸ್ಯೆಯೊಂದು ಕಾಡುತ್ತದೆ: ಅವನಿಗೆ ಲಭ್ಯವಿರುವ ಸಂಕೇತಗಳು ನಿತ್ಯಸಾಮಾನ್ಯ ವಸ್ತುಗಳಷ್ಟೆ; ಆತನ ಕಥನ ತೀರಾ ಸಮಕಾಲೀನವಾದ ವಾಸ್ತವಾಂಶವಷ್ಟೆ. ಆತನ ಕಥನ-ಸಂಕೇತಗಳಿಗೆ ಸಾಮುದಾಯಿಕ ಬೆಂಬಲವನ್ನು ಗೆದ್ದುಕೊಳ್ಳುವ ಸಾಮರ್ಥ್ಯವಿಲ್ಲ; ಯಾಕೆಂದರೆ ಅವು ಧಾರ್ಮಿಕ, ಸಾಂಸ್ಕೃತಿಕ ಸ್ಮೃತಿಗಳ ಉಪ್ಪಿನಲ್ಲಿ ಸಾವಿರ ವರ್ಷ ಸಂರಕ್ಷಿತವಾದವಲ್ಲ. ಅವು ತೀರ ರಾಜಕೀಯಾತ್ಮಕವೂ ಧರ್ಮನಿರಪೇಕ್ಷವೂ ಆಗಿದ್ದು ಸಮುದಾಯದ ಆತ್ಮಸಾಕ್ಷಿಯನ್ನು ಹೊಡೆದೆಬ್ಬಿಸುವಂಥ ಯಾವ ಆಧ್ಯಾತ್ಮಿಕ/ಧಾರ್ಮಿಕ ಆಯಾಮವೂ ಅವುಗಳಿಗಿಲ್ಲ. ಹೀಗೆ ಹುತಾತ್ಮನಾಗಿಯೂ ಸಮಾಜದ ಕಣ್ಣಿಗೆ ಹುತಾತ್ಮನಾಗಿ ತೋರದವನು ಈ ಹಸಿದ ರೈತ.

ಇದರ ಹೋಲಿಕೆಯಲ್ಲಿ ಇನ್ನುಳಿದೆರಡು ಸ್ವಂತಿಕೆಯ ಕಥನಗಳಿಗೂ ದೊಡ್ಡದೊಂದು ಸೌಲಭ್ಯವಿದೆ. ಅವು ತಮ್ಮ ಗುರಿಸಾಧನೆಯಲ್ಲಿ ತಮ್ಮ ಸುತ್ತ ಬಹು ಸುಲಭವಾಗಿ ದುರಂತನಾಯಕನ ಮಾದರಿಯ ಪ್ರಭಾವಳಿಯನ್ನು ಸೃಷ್ಟಿಸಿಕೊಳ್ಳಬಲ್ಲವು. ಸೌಂದರ್ಯಮೀಮಾಂಸೆಯಲ್ಲಿ, ತನ್ನ ಹಾಗೂ ತನ್ನ ಸಮುದಾಯದ ದೊಡ್ಡ ಗುರಿಯೊಂದರ ಸಾಧನೆಯಲ್ಲಿ ಇನ್ನೊಬ್ಬರ ಹಿಂಸೆಗೆ ಒಳಗಾಗುವ ಹಾಗೆಯೆ ಇನ್ನೊಬ್ಬರನ್ನು ತನ್ನ ಹಿಂಸೆಗೆ ಒಳಪಡಿಸುವ ವ್ಯಕ್ತಿತ್ವಕ್ಕೆ ಸಹಜವಾಗಿಯೆ ಗ್ರೀಕ್ ದುರಂತನಾಯಕನ ಧೀರೋದಾತ್ತತೆ ಪ್ರಾಪ್ತವಾಗಿಬಿಡುತ್ತದೆ. ಇಂಥ ವಿಚಿತ್ರ ಸನ್ನಿವೇಶದಲ್ಲಿ, ಆಸೆಯನ್ನು ಹಾಗೂ ಅರ್ಥವನ್ನು ಆಧರಿಸಿದ ಕಥನಗಳೆರಡೂ ಕೂಡ ತಮ್ಮ ಹಿಂಸೆಗೆ ದೈವರೂಪವೊಂದನ್ನು ನೀಡಿ, ಅದನ್ನು ಎಲ್ಲ ದೂರುಗಳಿಂದ ದೂರವಿಡಬಲ್ಲವು. ಹಿಂಸೆಯ ಸಮರ್ಥನೆಯಲ್ಲಿ ತೊಡಗಿದಾಗ ಅದರ ಆವರಣದ ಆಧ್ಯಾತ್ಮೀಕರಣ ಅತ್ಯವಶ್ಯಕವಾದುದು. ಇಲ್ಲಿಯೂ ಕೂಡ ಹಸಿವಿನ ಕಥನಕ್ಕೆ ಸಹಾಯ ನೀಡಬಲ್ಲಂಥ ಅಂಶಗಳಿಲ್ಲ. ಅದು ನಿತ್ಯಜೀವನದ ಹಾಗೂ ಜೀವನೋಪಾಯದ ವಸ್ತುಗಳ ಮೇಲಾಗುವ ಹಿಂಸೆಯ ವಿರೋಧವನ್ನು ತನ್ನ ಅಸ್ತಿವಾರವಾಗಿಟ್ಟುಕೊಂಡಿದ್ದು, ಅಂಥ ಸರ್ವಸಾಮಾನ್ಯ ವಸ್ತುಗಳಿಗೆ ಯಾವುದೆ ರೀತಿಯ ಆಧ್ಯಾತ್ಮಿಕ-ಧಾರ್ಮಿಕ ಪ್ರಭಾವಳಿಯನ್ನು ರಚಿಸುವುದು ಅಸಾಧ್ಯವಾದ ಮಾತು. ಕರ್ನಾಟಕ ರೈತಸಂಘದ ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ, ಅವರು ಎಷ್ಟು ಪ್ರಯತ್ನಿಸಿದ್ದರೂ ನಾಶದಂಚಿನಲ್ಲಿರುವ ತಮ್ಮ ಹಳ್ಳಿಯ ಕೋಳಿಗೆ ಅಂಥದೊಂದು ಪ್ರಭೆಯನ್ನು ನೀಡಲಾಗುತ್ತಿರಲಿಲ್ಲ.

ಹಸಿವೆಯ ಕಥನದ ಈ ಅಸಹಾಯಕತೆ ಹಾಗೂ ಸಾಂಸ್ಕೃತಿಕ ಏಕಾಂಗಿತನಗಳೆ ಅದರ ಹತಾಶೆಯ ಮೂಲಗಳಾಗಿವೆ. ಅದಕ್ಕೆ ಜಾಗತಿಕ ಮಾಧ್ಯಮಗಳಿಂದಲೂ



ಯಾವುದೆ ಬೆಂಬಲವಿಲ್ಲ, ಯಾಕೆಂದರೆ ಅದರ ಸಂಕೇತಗಳಾದ ನಿತ್ಯಸಾಮಾನ್ಯ ವಸ್ತುಗಳಿಗೆ ಆಧುನಿಕ ಜಾಹೀರಾತು ಪ್ರಪಂಚದ ಗಮನ ಸೆಳೆಯುವ ಥಳುಕುಬಳುಕಿನ ಶಕ್ತಿಯಿಲ್ಲ, ಅಥವಾ ಅಲ್ಲಿ ಪ್ರತಿಷ್ಠಿತ ರೂಪಗಳಲ್ಲಿ ಪುನರ್ಜನ್ಮ ಪಡೆಯುವ, ಅವಸ್ಥಾಂತರ ಹೊಂದುವ ಸಾಮರ್ಥ್ಯವಿಲ್ಲ. ಹಾಗಾಗಿ ಈ ಕಥನ ಕಣ್ಮರೆಯಾಗುವ ಸಾಯುವ ದುರ್ಗತಿಗೆ ಗುರಿಯಾಗಿದೆ. ಆದರೆ ಇನ್ನೊಂದೆಡೆ ಅದರ ಹತಾಶೆಯೆ ಅದಕ್ಕೊಂದು ಆಶೆಯನ್ನು ತಂದುಕೊಡಬಹುದು. ಪುಟ್ಟ ಕಥನವೊಂದಾಗುವುದರ ಮೂಲಕ ಈ ಕಥನವು ಒಂದು ರೀತಿಯ ವೈನೋದಿಕತೆಯನ್ನೂ ಪಡೆದುಕೊಂಡಿದೆ. ಹಾಗೆಯೆ ಅದು ಜಗತ್ತೆಲ್ಲ ಒಂದು ಬೃಹತ್ ಮಾರುಕಟ್ಟೆಯೆನ್ನುವ ಜಾಗತೀಕರಣದ ಸಾಂಸ್ಕೃತಿಕ ತರ್ಕವನ್ನೂ ತಿರಸ್ಕರಿಸುತ್ತದೆ. ಸ್ಥಳೀಯ ವಸ್ತುಗಳನ್ನು ಉತ್ಪಾದಿಸುವ ಕೈಗಳು ಪರಸ್ಪರ ಅಸಂಘಟಿತವಾಗಿ ಕೆಲಸ ಮಾಡುತ್ತಿರುವಂತೆ ತೋರುವುದೇನೊ ನಿಜ, ಆದರೆ ಅದೆ ಹೊತ್ತಿಗೆ ಅವು 'ಗ್ಲೋಬಲ್' ಹಾಗೂ 'ಗ್ಲೋಕಲ್' ಗಳೆರಡೂ ಒಟ್ಟಿಗೆ ಕುಸಿದು ಬೀಳುವುದನ್ನೆ ಕಾಯುತ್ತಿರುವುದೂ ಹೌದು.

(ಸಂಗ್ರಹಾನುವಾದ: ಜಶವಂತ ಜಾಧವ)

### ಗಿಡಮೂಲಿಕಾ ವೈದ್ಯ ಶಿಬಿರ – ೪

ಗ್ರಾಮಾಂತರ ಸಮುದಾಯ ವಿಜ್ಞಾನ ಕೇಂದ್ರ, ಶೆಡ್ತಿಕೆರೆ ಮತ್ತು ನೀನಾಸಮ್ ಪ್ರತಿಷ್ಠಾನ ಸಹಯೋಗದೊಂದಿಗೆ ನಡೆಸುತ್ತ ಬಂದಿರುವ ಗಿಡಮೂಲಿಕಾ ವೈದ್ಯ ತರಬೇತಿ ಶಿಬಿರದ ನಾಲ್ಕನೆಯ ಹಂತದ ಶಿಬಿರವು ಇದೇ ಜನವರಿ ದಿನಾಂಕ ೨೪ ರಿಂದ ೨೭ರವರೆಗೆ ಹೆಗ್ಗೋಡಿನಲ್ಲಿ ನಡೆಯಿತು. ಶ್ರೀ ವೆಂಕಟ್ರಾಮ ದೈತೋಟ ಹಾಗೂ ಡಾ। ಪತಂಜಲಿ ಕೆ.ವಿ. ಅವರು ಶಿಬಿರದ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಈ ಬಾರಿ ೪೦ ಮಂದಿ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಶಿಬಿರದ ಅವಧಿಯಲ್ಲಿ ಕೆಲವಾರು ಔಷಧಗಳನ್ನು ತಯಾರಿಸುವ ಪ್ರಾಯೋಗಿಕ ಅಭ್ಯಾಸದ ತರಗತಿಗಳನ್ನೂ ನಡೆಸಲಾಯಿತು. ಹಳ್ಳಿಗಾಡುಗಳಲ್ಲಿ ಪ್ರಾಕೃತಿಕವಾಗಿ ಲಭ್ಯವಿರುವ ಗಿಡಮೂಲಿಕೆಗಳನ್ನು ಪರಿಚಯಿಸಿ ಕೊಳ್ಳಲು ಬಚ್ಚೋಡಿ ಗ್ರಾಮದಲ್ಲಿ ಕ್ಷೇತ್ರ ಪರಿಶೀಲನೆ ಕಾರ್ಯ ಕೈಗೊಳ್ಳಲಾಗಿತ್ತು. ಅಲ್ಲದೆ, ಶ್ರೀ ದೈತೋಟ ಅವರು ಹಲವಾರು ಗಿಡಮೂಲಿಕೆ ಸಸ್ಯ ಪ್ರಭೇದಗಳನ್ನು ಅವುಗಳ ಗುರುತು ಆಕಾರ ಗುಣ ಸ್ವರೂಪ ಉಪಯೋಗ ಮುಂತಾದ ಪರಿಚಯವನ್ನು – ಸ್ಲೈಡ್ ಪ್ರದರ್ಶನಗಳ ಮೂಲಕವೂ ವಿವರಿಸಿದರು.

# ಐತಿಹ್ಯಮಾಲೆಯ ಕಥೆಗಳು

ಮಲಯಾಳಂ ಮೂಲ: ಕೊಟ್ಟಾರತ್ತಿಲ್ ಶಂಕುಣ್ಣಿ
ಅನುವಾದ: ಬಿ. ಆರ್. ವೆಂಕಟರಮಣ ಐತಾಳ

## ೧. ಮಣ್ಣಾರಶಾಲ ಮಹಾತ್ಮೆ

ಕೇರಳ ಭೂಮಿಯ ಉದ್ಭವ ಮತ್ತು ಅದಕ್ಕೆ ಸಂಬಂಧಿಸಿದ ಚರಿತ್ರೆಗಳು ಹೇಗಾದರೂ ಇದ್ದಿರಲಿ, ಆ ಕುರಿತು ತರ್ಕಿಸಿ ತೀರ್ಮಾನಿಸುವ ಉದ್ದೇಶ ನನಗಿಲ್ಲ. ಮಣ್ಣಾರಶಾಲ ಎಂಬ ಕ್ಷೇತ್ರಕ್ಕೆ ಸಂಬಂಧಿಸಿದಂತೆ ತಲೆಮೊರೆಗಳನ್ನು ದಾಟಿಬಂದ ಐತಿಹ್ಯವೊಂದನ್ನು ಹಿರಿಯರು ತಿಳಿಸಿದಂತೆ ಬಿತ್ತರಿಸುವುದು ಮಾತ್ರ ನನ್ನ ಕೆಲಸ.

ಪರಶುರಾಮನು ದೂರದೇಶಗಳಿಂದ ಬ್ರಾಹ್ಮಣರನ್ನು ಕರೆದುಕೊಂಡು ಬಂದು ಕೇರಳದಲ್ಲಿ ನೆಲೆಯಾಗಿಸಿದ ಕಾಲದಲ್ಲಿ ಇಲ್ಲಿ ಸರ್ವತ್ರ ಸರ್ಪಗಳೇ ವಾಸಿಸಿದ್ದು ಅವುಗಳ ಉಪದ್ರವ ಸಹಿಸಲಸಾಧ್ಯವಾಗಿತ್ತು. ಕೇರಳಭೂಮಿಯಲ್ಲಿ ಉಪ್ಪುನೀರು ಮಾತ್ರವಲ್ಲದೆ ಕುಡಿಯಲು ಯೋಗ್ಯವಾದ ಸಿಹಿನೀರು ಎಲ್ಲೂ ಸಿಗುತ್ತಿರಲಿಲ್ಲ. ಆದುದರಿಂದ, ಇಲ್ಲಿ ವಾಸಮಾಡಿಕೊಂಡಿರುವುದು ಕಷ್ಟವೆಂದು ತಿಳಿದು ಬಂದ ಬ್ರಾಹ್ಮಣರೆಲ್ಲ ಹಿಂದಿರುಗಿ ಹೋದರು. ಇದರಿಂದ ವಿಷಣ್ಣನಾದ ಪರಶುರಾಮನು ಕೈಲಾಸಕ್ಕೆ ತೆರಳಿ ತನ್ನ ಗುರುನಾಥನಾದ ಪರಮೇಶ್ವರನನ್ನು ಸ್ತುತಿಸಿ ಬಿನ್ನವಿಸಿಕೊಂಡಾಗ, ಶಿಷ್ಯವತ್ಸಲನಾದ ಶಂಕರನು ಸರ್ಪರಾಜನಾದ ವಾಸುಕಿಯ ಸೇವೆಮಾಡಿ ಅನುಗ್ರಹಪಡೆಯುವಂತೆ ಸೂಚಿಸಿದನು. ಪರಶುರಾಮನು ಪುನಃ ಕೇರಳಕ್ಕೆ ಹಿಂದಿರುಗಿ ವಾಸುಕಿಯನ್ನು ಕುರಿತು ತಪಸ್ಸಾಚರಿಸತೊಡಗಿದನು. ಸಂತುಷ್ಟನಾದ ವಾಸುಕಿಯು ಪ್ರತ್ಯಕ್ಷನಾಗಿ, ''ಭೋ ಮಹಾತ್ಮನ್! ಅತಿಘೋರವಾದ ನಿನ್ನ ತಪಸ್ಸಿನಿಂದ ಪರಿತುಷ್ಟನಾಗಿದ್ದೇನೆ. ನಿನ್ನ ಅಭೀಷ್ಟಗಳೇನೆಂಬುದನ್ನು ಶ್ರುತಪಡಿಸಿದರೆ ಅದನ್ನು ನೆರವೇರಿಸಿಕೊಡಲು ಸಿದ್ಧನಿದ್ದೇನೆ'' ಎಂದು ಪ್ರಸನ್ನವಚನಗಳನ್ನು ನುಡಿದನು. ಪರಶುರಾಮನು, ''ಭೋ ಸರ್ಪ ಕುಲಾಧಿಪತೇ! ಈ ಕೇರಳನಾಡಿನಲ್ಲಿ ಅಷ್ಟಕುಲನಾಗರ ವಂಶಾನುವಂಶಗಳು ಎಲ್ಲೆಂದರಲ್ಲಿ ತುಂಬಿಕೊಂಡಿದ್ದು ಮನುಷ್ಯ ವಾಸವೆ ಅಸಾಧ್ಯವಾಗಿದೆ. ಅಲ್ಲದೆ ಮಿತಿಮೀರಿದ ಸರ್ಪಸಂಚಾರದಿಂದಾಗಿ ಇಲ್ಲಿನ ನೀರೆಲ್ಲ ಕ್ಷಾರಯುಕ್ತವಾಗಿದ್ದು ಜನರು ಕುಡಿಯುವಂತಿಲ್ಲ. ನೀನು ಈ ಎರಡು ಸಮಸ್ಯೆಗಳನ್ನು ಪರಿಹರಿಸಿ ಈ ನೆಲವು



ಮನುಷ್ಯವಾಸಕ್ಕೆ ಯೋಗ್ಯವಾಗುವಂತೆ ಅನುವುಮಾಡಿಕೊಡಬೇಕು'' ಎಂದು ತನ್ನ ಅಪೇಕ್ಷೆಯನ್ನು ಕೇಳಿಕೊಂಡನು.

ಆಗಲಾ ವಾಸುಕಿಯು ಹೀಗೆ ಉತ್ತರಿಸುತ್ತಾನೆ: ''ನಿನ್ನ ಇಷ್ಟದಂತೆಯೆ, ಇಲ್ಲಿನ ನೀರಿನಲ್ಲಿರುವ ಲವಣಾಂಶವನ್ನೆಲ್ಲ ನಾನು ಹೀರಿ ಕಳೆದು ಸಮುದ್ರಕ್ಕೆ ಹಾಗೂ ಅಳಿವೆತೀರದ ಜಲಾಶಯಗಳಿಗೆ ಸೇರಿಸುತ್ತೇನೆ. ಸರ್ಪಕುಲಗಳೆಲ್ಲವೂ ನೀನು ತಪಸ್ಸನ್ನಾಚರಿಸಿದ ಈ ಪುಣ್ಯಸ್ಥಳದಲ್ಲಿ ಬಂದು ಸೇರಿಕೊಳ್ಳುವಂತೆ, ಬೇರೆ ಕಡೆ ವಾಸಿಸಿದರೂ ಅಲ್ಲಲ್ಲೆ ಬಿಲವಾಸಿಗಳಾಗುವಂತೆ ಹಾಗೂ ಮನುಷ್ಯರಿಗೆ ಉಪದ್ರವ ಕೊಡದಂತೆ ಕಟ್ಟು ಮಾಡುತ್ತೇನೆ. ಹಾಗೆಯೇ, ಕೇರಳಾದ್ಯಂತ ವಾಸಮಾಡುವ ಜನರೆಲ್ಲ ತಂತಮ್ಮ ಊರು ಮನೆ ಹೊಲಗಳಲ್ಲಿ ನಾಗರಬನಗಳನ್ನು ನಿರ್ಮಿಸಿ, ಅಲ್ಲಲ್ಲಿನ ಸರ್ಪ ಸಂತಾನಗಳನ್ನು ಆಯಾ ಬನಗಳಲ್ಲಿ ಸ್ಥಾಪಿಸಿ, ಯಾವತ್ಕಾಲವೂ ಪೂಜಿಸಿಕೊಂಡು ಬರುವಂತೆ ನೀನು ಅವರಿಗೆಲ್ಲ ಆಜ್ಞಾಪಿಸಬೇಕು. ಈ ಕಟ್ಟುಪಾಡುಗಳನ್ನು ಮೀರಿದರೆ ಸರ್ಪಗಳು ಉಪದ್ರವಕೊಡುತ್ತವೆ, ಸದ್ಭಕ್ತಿಯಿಂದ ಪೂಜಿಸಿ ಒಲಿಸಿಕೊಂಡರೆ ಸಂತಾನ ಸಮೃದ್ಧಿಗಳನ್ನು ಅನುಗ್ರಹಿಸುತ್ತವೆ. ಈ ಸಂಗತಿಗಳನ್ನು ಅವರಿಗೆ ತಿಳಿಸಿಹೇಳುವ ಜವಾಬ್ದಾರಿ ನಿನ್ನದು. ಅದರಂತೆ ನಡೆದುಕೊಂಡರೆ ಈ ಭೂಭಾಗವು ಮನುಷ್ಯರಿಗೆ ವಾಸಯೋಗ್ಯವಾಗುತ್ತದೆ.''

ವಾಸುಕಿಯ ಮಾತುಗಳಿಗೆ ಸಮ್ಮತಿಸಿದ ಪರಶುರಾಮನು ಪುನಃ ಹೊರಗಿನಿಂದ ಬ್ರಾಹ್ಮಣರನ್ನು ಬರಮಾಡಿ ನೆಲೆಗೊಳಿಸಿದನು. ಅಷ್ಟರಲ್ಲಿ ನೀರೆಲ್ಲ ಶುದ್ಧಜಲವಾಗತ್ತು. ಸರ್ಪಗಳೆಲ್ಲ ಪರಶುರಾಮನು ತಪಗೈದ ವನಪ್ರದೇಶದಲ್ಲಿ ಸೇರಿಕೊಂಡಿದ್ದವು. ಕೆಲವು ಬಿಲವಾಸಿಗಳಾಗಿದ್ದವು. ಹುತ್ತಸೇರಿದ್ದವು. ಆದ್ದರಿಂದ ಈ ಬಾರಿ ಬಂದ ಬ್ರಾಹ್ಮಣರು ಇಲ್ಲೇ ಮನೆಮಾರು ಕಟ್ಟಿಕೊಂಡು ನೆಲೆನಿಂತರು. ಹಾಗೆಯೆ ಕಾವು-ಕೋವಿಲು-ಬನಗಳನ್ನು ನಿರ್ಮಿಸಿ ನಾಗಬಿಂಬಗಳನ್ನು ಪ್ರತಿಷ್ಠಾಪಿಸಿ ಪೂಜೆ ಪುನಸ್ಕಾರಗಳನ್ನು ಆಚರಿಸುತ್ತಬಂದರು.

ಪರಶುರಾಮನು ತಾನು ತಪಸ್ಸನ್ನಾಚರಿಸಿದ ವನಾಂತರದಲ್ಲಿ ವಾಸುಕಿಯನ್ನು ನಾಗಯಕ್ಷಿಯನ್ನು ಅಷ್ಟಕುಲಪರಿವಾರಗಳನ್ನೂ ಪ್ರತಿಷ್ಠಾಪಿಸಿದನು. ಇಡೀ ವನಪ್ರದೇಶವನ್ನು ನಾಗಸನ್ನಿಧಿಯೆಂದು ಕಟ್ಟುಮಾಡಿ, ಸುತ್ತಲಿನ ಸ್ವಲ್ಪಾಂಶ ಕಾಡುಕಡಿದು ಭಕ್ತಾದಿಗಳ ವಾಸಕ್ಕೆ ಬೇಕಾದ ಮನೆಗಳನ್ನು ನಿರ್ಮಿಸಿಕೊಳ್ಳುವಂತೆ ಸೂಚಿಸಿದನು. ಸರ್ಪಗಳಿಗೆ ವಿಧ್ಯುಕ್ತಪೂಜಾದಿಗಳನ್ನು ನಡೆಸಿಕೊಂಡು ಬರಲು ಹಾಗೂ ಬನದ ಕಾಡುಕಡಿದು ನಾಶಮಾಡದಂತೆ ನೋಡಿಕೊಳ್ಳಲು ಸನ್ನಿಧಿಯ ಒಳ ನಡೆಯಲ್ಲೆ ಒಂದು ಬ್ರಾಹ್ಮಣ ಕುಟುಂಬವನ್ನು ನೇಮಿಸಿದನು. ಆ ಸರ್ಪಕಾವಿನ ಅಧಿಕಾರ ಹೊಣೆ

ಗಾರಿಕೆಗಳನ್ನೆಲ್ಲ ಆ ಬ್ರಹ್ಮಕುಟುಂಬಕ್ಕೆ ವಹಿಸಿಕೊಟ್ಟನು. ಆ ವಂಶಜರು ಅಂದಿನಿಂದಲೂ ಸರ್ಪಗಳನ್ನು ತಮ್ಮ ಕುಲದೇವತೆಯೆಂದು ನಂಬಿಕೊಂಡು ಸಕಲಸೇವೆಗಳನ್ನು ನಿರ್ವಹಿಸುತ್ತ ಬಂದಿದ್ದಾರೆ. ಆ ಮನೆಯವರನ್ನು 'ಮಣ್ಣಾರಶಾಲ ನಂಬ್ಯಾತಿರಿಮಾರ್' ಎಂದು ಕರೆಯಲಾಗುತ್ತದೆ.

ಮೇಲೆ ವಿವರಿಸಿದಂತೆ ಕೇರಳನಾಡಿನಲ್ಲಿ ಮನುಷ್ಯವಾಸವನ್ನು ಸ್ಥಿರಪಡಿಸಿದ ನಂತರ ಪರಶುರಾಮನು ತಪಸ್ಸಿಗಾಗಿ ಹೊರಟುಹೋದನು. ಅದಾಗಿ ಹಲವು ಕಾಲಗಳು ಸಂದವು. ಮುಂದೆ ಯುಗ-ಯುಗಾಂತರಗಳಲ್ಲಿ ಸಂಭವಿಸಿದ ಕೆಲವು ಸಂಗತಿಗಳನ್ನು ಇಲ್ಲಿ ಉದ್ಧರಿಸುತ್ತೇನೆ.

ಈಗಿನ ಅಂಬಲಪ್ಪುಳ ಹಾಗೂ ಸುತ್ತಲಿನ ಪ್ರದೇಶವು ಹಿಂದೆ ದಟ್ಟವಾದ ಅರಣ್ಯವಾಗಿತ್ತು. ಅದೇ 'ಖಾಂಡವವನ' ವೆಂದು ಪ್ರಸಿದ್ಧವಾದ ಅರಣ್ಯ. ಖಾಂಡವನವನ್ನು ಮಧ್ಯಮಪಾಂಡವನಾದ ಅರ್ಜುನನು ಸುಟ್ಟು ನಾಶಮಾಡಿದ ನಂತರ ಆ ಪ್ರದೇಶಕ್ಕೆ 'ಚುಟ್ಟನಾಡು' (ಸುಡಲ್ಪಟ್ಟ ನಾಡು) ಎಂದು ಹೆಸರಾಯಿತು. ಅದು ಕಾಲಕ್ರಮೇಣ 'ಕುಟ್ಟನಾಡು' ಎಂದು ಕರೆಯಲ್ಪಟ್ಟಿತು.

ಖಾಂಡವವನಕ್ಕೆ ಹಿಡಿದ ಬೆಂಕಿಯು ಸುತ್ತಲೂ ಪಸರಿಸಿ ಅದರ ಪೂರ್ವ ದಿಕ್ಕಿನಲ್ಲಿರುವ – ಪರಶುರಾಮರಿಂದ ಪ್ರತಿಷ್ಠಾಪಿತವಾದ – ಸರ್ಪವನದವರೆಗೂ ಹಬ್ಬಿಕೊಂಡಿತು. ಅಲ್ಲಿ ಬನದ ಪೂಜೆ ಹಾಗೂ ರಕ್ಷಣೆಗಾಗಿ ನಿಯಮಿಸಲ್ಪಟ್ಟ ಮನೆಯ ಅಮ್ಮಂದಿರು ಸನ್ನಿಧಿಗೆ ಅಗ್ನಿಬಾಧೆಯುಂಟಾಗದಂತೆ ಸನಿಹದ ಕೊಳದಿಂದ ನೀರನ್ನು ಎತ್ತಿ ಹೊಯ್ಯತೊಡಗಿದರು. ಅವರ ಪ್ರಯತ್ನದಿಂದಾಗಿ ಸರ್ಪಕಾವು ನಾಶವಾಗಲಿಲ್ಲ. ಆದರೂ, ಅಗ್ನಿಜ್ವಾಲೆಯ ಹೊಡೆತಕ್ಕೆ ಮಣ್ಣು ಕಾದು ಸುಡುತ್ತಾ ಬಂದು ಕಾವು ಹೆಚ್ಚಾಗಿ ಸರ್ಪಗಳಿಗೆ ಸಹಿಸಲಸಾಧ್ಯವಾಗಿ ತೀರಿತು. ಬೆಂಕಿ ನಂದಿಹೋದರೂ ಮಣ್ಣಿನ ಕಾವು ಆರಿ ತಂಪಾಗುವವರೆಗೆ ಆ ಅಮ್ಮಂದಿರು ನೀರು ಎರಚಿಕೊಂಡಿದ್ದರು. ಕಾವು ಕಡಿಮೆಯಾದೊಡನೆಯೆ, ''ಇದೀಗ ಮಣ್ಣಾರಿದೆ; ಇನ್ನು ಮುಂದೆ ಈ ಸ್ಥಳದ ಹೆಸರು 'ಮಣ್ಣಾರಿಶಾಲ' ಎಂದೇ ಪ್ರಸಿದ್ಧವಾಗಲಿ'' ಎಂದು ಯಾರೋ ಹೇಳಿದಂತೆ ಕೇಳಿಸಿತು. ಹೇಳಿದವರಾರೆಂದು ಯಾರಿಗೂ ತಿಳಿಯಲಿಲ್ಲ. ಅದು ಸಾಕ್ಷಾತ್ ವಾಸುಕಿಯ ನುಡಿಯೆಂದು ಎಲ್ಲರೂ ನಂಬಿಕೊಂಡರು. ಅಂದಿನಿಂದ ಆ ಸ್ಥಳಕ್ಕೆ ಅದೆ ಹೆಸರು ಸ್ಥಿರವಾಯಿತು. ಕಾಲಕ್ರಮೇಣ ಅದು 'ಮಣ್ಣಾರಶಾಲ' ಎಂದಾಯಿತು. ಆ ಸ್ಥಳವು ತಿರುವಿತಾಂಕೂರು ಸಂಸ್ಥಾನದ ಕಾರ್ತಿಕಪಳ್ಳಿತಾಲೂಕಿನ ಅರಿಪ್ಪಾಡು ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಹೊಂದಿಕೊಂಡು ಪಡುವಣ ದಿಕ್ಕಿನಲ್ಲಿದೆ.

ಒಂದು ಕಾಲದಲ್ಲಿ, ಮಣ್ಣಾರಶಾಲ ಮನೆಯ ಗೃಹಿಣಿಯೊಬ್ಬಳಿಗೆ ಪುತ್ರಸಂತಾನ



ವಾಗದಿರಲು, ಆಕೆ ಭಕ್ತಿಪುರಸ್ಸರವಾಗಿ ಹಲವು ವಿಧಗಳಿಂದ ಸರ್ಪಸೇವೆಗಳನ್ನು ನಡೆಸತೊಡಗಿದಳು. ಸ್ವಲ್ಪ ಸಮಯದಲ್ಲೆ ಅವಳಿಗೆ ಗರ್ಭನಿಂತು ಅವಳಿ ಗಂಡು ಮಕ್ಕಳು ಜನಿಸಿದರು. ಆದರೆ, ಅವಳಿಯಲ್ಲಿ ಒಂದು ಮಾತ್ರ ಮನುಷ್ಯಶಿಶುವಾಗಿತ್ತು. ಮತ್ತೊಂದು ಸರ್ಪಶಿಶುವಾಗಿತ್ತು. ಆ ಸರ್ಪಶಿಶುವು ಹುಟ್ಟಿದ ಕೆಲವೇ ಕ್ಷಣಗಳಲ್ಲಿ ಬೆಳೆದುನಿಂತು ಮನುಷ್ಯರಂತೆಯೆ ಮಾತನಾಡತೊಡಗಿತು. ಅದು ತನ್ನ ತಾಯಿಯೊಡನೆ ಹೀಗೆ ನುಡಿಯಿತು –

''ಅಮ್ಮ, ಸರ್ಪಗಳಿಗೆಲ್ಲ ನಿಮ್ಮ ಕುಟುಂಬದ ಬಗೆಗೆ ತುಂಬಾ ಪ್ರೀತಿ ವಿಶ್ವಾಸ ವಾತ್ಸಲ್ಯಗಳಿವೆ. ಅದರಲ್ಲೂ ಕುಟುಂಬದ ಸ್ತ್ರೀಜನರ ಮೇಲೆ ಹೆಚ್ಚಿನ ಗೌರವಾದರಗಳಿವೆ. ಇಲ್ಲಿ ಸರ್ಪಗಳನ್ನೆಲ್ಲ ಅಗ್ನಿಬಾಧೆಯಿಂದ ರಕ್ಷಿಸಿದ್ದು ಈ ಮನೆಯ ಹೆಂಗಸರು ತಾನೆ? ಆದ್ದರಿಂದ, ಇಂದಿನಿಂದ ಇಲ್ಲಿ ನಡೆಯುವ ಸರ್ಪಪೂಜಾದಿ ವಿಧಿಗಳನ್ನು ಕುಟುಂಬದ ಹಿರಿಯ ಹೆಂಗಸರೇ ನಿರ್ವಹಿಸಬೇಕೆಂದು ನಾಗಕುಲದವರೆಲ್ಲರ ಆಗ್ರಹ. ಅದರಿಂದ ನಾವೆಲ್ಲ ಹೆಚ್ಚು ಸಂತುಷ್ಟರಾಗುತ್ತೇವೆ. ಆದರೆ, ಒಂದು ನಿಬಂಧನೆಯಿದೆ. ಅರ್ಹರಾದ ವೃದ್ಧಸ್ತ್ರೀಯರೇ ಪೂಜೆ ಮಾಡಬೇಕು. ಮುಟ್ಟುನಿಂತು ಮುಪ್ಪು ಬಂದು ಪೂಜೆಗೆ ಅರ್ಹರಾದಾಗ, ಪತಿಯಿದ್ದರೂ ಅವರು ಬ್ರಹ್ಮಚರ್ಯ ವ್ರತವನ್ನು ಆಚರಿಸಿ ಕೊಂಡಿರಬೇಕು. ಪೂಜೆಯ ವಿಧಿವಿಧಾನಗಳಲ್ಲೂ ಸ್ವಲ್ಪ ಬದಲಾವಣೆಗಳನ್ನು ಮಾಡಬೇಕಾಗಿದೆ. ಇಲ್ಲಿರುವ ತಾಯಂದಿರಲ್ಲಿ ಹಿರಿಯಳಾಗಿರುವ ನಿನಗೆ ಅದನ್ನೆಲ್ಲ ಉಪದೇಶಿಸುತ್ತೇನೆ. ಪ್ರಸವಚಿಕಿತ್ಸೆಗಳೆಲ್ಲ ಮುಗಿದು ಸೂತಕ ಕಳೆದು ಶುದ್ಧ ಪುಣ್ಯಾಹವಾದ ನಂತರ ನೀನು ಪೂಜೆಮಾಡಲು ತೊಡಗಬೇಕು. ಪ್ರಾಯಾಧಿಕ್ಯದಿಂದ ನಿನಗೆ ಪೂಜಾದಿಗಳನ್ನು ನಡೆಸಲು ಸಾಧ್ಯವಾಗದ ಪಕ್ಷದಲ್ಲಿ, ಉಳಿದವರಲ್ಲಿ ಹಿರಿಯ ಳಾದವಳಿಗೆ ನೀನು ಉಪದೇಶ ಕೊಡಬೇಕು. ಮುಂದಿನ ತಲೆಮೊರೆಯವರೆಲ್ಲ ಹಾಗೆಯೆ ನಡೆದುಕೊಳ್ಳಬೇಕು. ಈ ಕುಟುಂಬದಲ್ಲಿ ಜನಿಸಿದ ನಾನು ಈ ಸ್ಥಳಬಿಟ್ಟು ಬೇರೆಲ್ಲಿಗೂ ಹೋಗುವುದಿಲ್ಲ. ಕುಟುಂಬದ ರಕ್ಷಣೆಗಾಗಿ ನಾನು ನಿನ್ನ ಮನೆಯಲ್ಲೇ ನೆಲೆಸಿರುತ್ತೇನೆ. ಯಾರೂ ನನಗೆ ತೊಂದರೆಕೊಡಬಾರದು. ನಾನಿರುವ ಈ ಜಾಗಕ್ಕೆ ಯಾರಿಗೂ ಪ್ರವೇಶಾವಕಾಶ ಇರಬಾರದು.'' – ಇಷ್ಟು ಹೇಳಿದ ಸರ್ಪಬಾಲಕನು ತನ್ನ ತಾಯಿಗೆ ಪೂಜೆಯ ಮಂತ್ರ ತಂತ್ರ ವಿಧಾನಗಳನ್ನೆಲ್ಲ ಉಪದೇಶಿಸಿ ಮನೆಯ ನೆಲಮಾಳಿಗೆಯಲ್ಲಿ ಹೋಗಿ ಸ್ಥಿತನಾದನು.

ಅಂದಿನಿಂದ ಮೊದಲಾಗಿ ಸರ್ಪಬಾಲಕನ ನಿರ್ದೇಶದಂತೆ ಕುಟುಂಬದ ಹಿರಿಯ 'ಅಮ್ಮಚ್ಚಿ'ಯರು ಅರ್ಚನಾವೃತ್ತಿಗಳನ್ನು ನಡೆಯಿಸಿಕೊಂಡು ಬಂದಿದ್ದಾರೆ. ಸರ್ಪಬಾಲಕನು ಪ್ರವೇಶಿಸಿದ ಆ ನೆಲಮಾಳಿಗೆಯನ್ನು ಅನಂತರ ಯಾರೂ

ಪ್ರವೇಶಮಾಡಲಿಲ್ಲ.  ಕೆಲವು ವಿಶಿಷ್ಟ ಪೂಜಾಕರ್ಮಗಳ ಹೊರತಾಗಿ ಬೇರಾವ ದಿನಗಳಲ್ಲೂ ನೆಲಮಾಳಿಗೆಯ ಬಾಗಿಲನ್ನು ತೆರೆಯಲಾಗುವುದಿಲ್ಲ.  ಈಗ ಬಾಗಿಲು ತೆರೆದು ನೋಡಿದರೆ ಅಲ್ಲಿ ಹುತ್ತವಲ್ಲದೆ ಮತ್ತೇನೂ ಕಾಣದು. ಮನೆಯು ಹಳೆಯದಾಗಿ ಕಟ್ಟಡ ಕುಸಿದು ಬೀಳುವಂತಾದಾಗ ಜೀರ್ಣೋದ್ಧಾರ ನಡೆಸುತ್ತಾರಾದರೂ ಆ ನೆಲಮಾಳಿಗೆಯನ್ನು ಅಳಿದುಕಳೆದು ನಾಶಮಾಡುವುದಿಲ್ಲ. ಇತ್ತೀಚೆಗೆ ಇಡೀ ಮನೆಯನ್ನು ಹೊಸದಾಗಿ ಕಟ್ಟಿಸಿದ್ದರೂ ಆ ಸ್ಥಾನವನ್ನು ಮಾತ್ರ ಸ್ವಲ್ಪವೂ ಜರುಗಿಸದೆ ಹಾಗೆಯೆ ರಕ್ಷಿಸಿಕೊಂಡು ಮೇಲಿನ ಕಟ್ಟಡಗಳನ್ನು ನಿರ್ಮಿಸಲಾಗಿತ್ತು.  ಅಂತೂ ಅದು ಸರ್ಪಕುಮಾರನಿಗೆ ಗರ್ಭಗುಡಿಯೂ ಮೂಲಸ್ಥಾನವೂ ಆಗಿ ಉಳಿದುಕೊಂಡಿದೆ.

ಆ ಸರ್ಪಶಿಶುವಿನ ಜೊತೆಗೆ ಜನಿಸಿದ ಬಾಲಕನು ಪ್ರಾಯಪ್ರಬುದ್ಧನಾಗಿ ಕ್ಷೇತ್ರದ ವಹಿವಾಟುಗಳನ್ನು ನಿರ್ವಹಿಸತೊಡಗಿದಾಗ ನಾಗವನದಲ್ಲಿ ನಾಗರಾಜ-ನಾಗಯಕ್ಷಿ-ಪರಿವಾರದವರಿಗೆಲ್ಲ ಪ್ರತ್-ಪ್ರತ್ಯೇಕ ದೇಗುಲಗಳನ್ನು ನಿರ್ಮಿಸಿ ಬ್ರಹ್ಮಕಲಶಾದಿ ಆಗಮೋಕ್ತ ಕರ್ಮಾಂಗಗಳನ್ನು ನೆರವೇರಿಸಿದನಂತೆ.  ಕಾಲಕಾಲಕ್ಕೆ ಆ ದೇಗುಲಗಳ ಜೀರ್ಣೋದ್ಧಾರ ನಡೆಸಿದರೂ ಕೂಡ ಮೂಲಬಿಂಬಗಳನ್ನು ಮಾತ್ರ ಯಾವತ್ತೂ ಕಿತ್ತು ಪುನಃಪ್ರತಿಷ್ಠೆ ಮಾಡಲಿಲ್ಲವೆಂದು ಕೇಳಿದ್ದೇನೆ.  ಹೋಗಿ ನೋಡಿದಾಗ ಅದು ವಾಸ್ತವವೆಂದೂ ತಿಳಿಯಿತು.

ಒಮ್ಮೆ, ಮಣ್ಣಾರಶಾಲ ಮನೆಯಿಂದ ಒಬ್ಬ ಹೆಣ್ಣುಮಗಳನ್ನು ಕಾಯಂಗುಳದ ಹತ್ತಿರದ ವೆಟ್ಟಿಕ್ಕೋಡು ಮೇಪ್ಪಳ್ಳಿ ನಂಬ್ಯಾತಿರಿಯ ಮನೆಗೆ ಮದುವೆಮಾಡಿ ಕೊಡಲಾಯಿತು.  ಆಗ ವಧುವಿನ ಜೊತೆಗೆ ಸ್ತ್ರೀಧನವಾಗಿ ಕೊಟ್ಟದ್ದು ಒಂದು ಸರ್ಪವನ್ನು! ಆ ಸರ್ಪವನ್ನು ಒಂದು ಓಲಿಕೊಡೆಯ ಬಿದಿರುಕಾಲಿನ ಟೊಳ್ಳಿನಲ್ಲಿ ಸೇರಿಸಿ ಕೊಟ್ಟಿದ್ದರು.  ವಧುವಿಗಾಗಿ ಕೊಟ್ಟದ್ದನ್ನು ವರನು ಸಂತೋಷದಿಂದ ಸ್ವೀಕರಿಸಿ ತೆಗೆದುಕೊಂಡು ಹೋದನು. ಅಲ್ಲಿ ಮನೆಸೇರಿದ ಕೂಡಲೆ ಆ ಸರ್ಪವು ಕೊಡೆಯಿಂದ ಹೊರಬಂದು ನೆಲಮಾಳಿಗೆಯಲ್ಲಿ ಹೋಗಿ ವಾಸವಾಯಿತು.ಅಷ್ಟು ಮಾತ್ರವಲ್ಲ, ಮಣ್ಣಾರಶಾಲ ಮನೆಯಲ್ಲಿರುವಂತೆಯೆ ಅಲ್ಲೂ ಮಂದಿರ ನಿರ್ಮಿಸಿ ಪ್ರತಿಷ್ಠಾಪನೆ ಮುಂತಾದವನ್ನು ನಡೆಸುವಂತೆ ನಿರ್ಬಂಧಪಡಿಸಿತು. ಆ ಮನೆಯವರು ಅಂತೆಯೆ ಎಲ್ಲ ಮಾಡಿ ಮುಗಿಸಿದರು. ಮೇಪ್ಪಳ್ಳಿಯೂ ಮಣ್ಣಾರಶಾಲೆಯ ಒಂದು ಪ್ರತಿಬಿಂಬ ವೆಂಬಂತಾಯಿತು. ಈಗ ಸರ್ಪಬಲಿ, ಸರ್ಪಪಾಟ್ಟು ಮುಂತಾದ ಸೇವೆಗಳನ್ನು ಇವೆರಡೂ ಸ್ಥಳಗಳಲ್ಲಿ ನಡೆಸಬೇಕಾಗುತ್ತದೆ; ಯಾವುದೇ ಒಂದು ಸ್ಥಳದಲ್ಲಿ ಮಾತ್ರ ನಡೆಸುವಂತಿಲ್ಲ. ಎರಡೂ ಕಡೆಗಳಲ್ಲಿ ಒಂದೇ ದಿನ ನಡೆಯಬೇಕು.  ಈ ಎರಡೂ ಸ್ಥಳಗಳಲ್ಲಿ ಹೆಚ್ಚು-ಕಡಿಮೆ ಎಂದು ಭೇದ ಎಣಿಸುವಂತಿಲ್ಲ.



ಇನ್ನು, ಮಣ್ಣಾರಶಾಲೆಯ ಕೆಲವು ಮಹಿಮೆಗಳನ್ನು ಹೇಳಿ ಈ ಬರೆಹವನ್ನು ಮುಗಿಸಬಹುದೆಂದು ತೋರುತ್ತದೆ.

'ನುರುಂ ಪಾಲುಂ' – ಅಂದರೆ, ಹಾಲು-ಹಿಟ್ಟು ಕೊಡುವುದು – ಇಲ್ಲಿ ಸರ್ಪಗಳಿಗೆ ಸಲ್ಲಿಸುವ ಒಂದು ವಿಶೇಷ ಸೇವೆ. ಒಂದು ಪಾತ್ರೆಯಲ್ಲಿ ಅಕ್ಕಿತರಿ ಮತ್ತು ಅರಿಸಿನಪುಡಿಗಳನ್ನು ಸೇರಿಸಿ ಹಾಲಿನಲ್ಲಿ ಬೆರೆಸಿ, ಅದನ್ನು ಪೂಜಿಸಿ ತರ್ಪಣಬಿಟ್ಟು ಕೊನೆಯಲ್ಲಿ ಆ ಪಾತ್ರವನ್ನು ಕವುಚಿಹಾಕುವುದು 'ನುರುಂಪಾಲು' ಸೇವೆಯ ಕ್ರಮ. ಆದರೆ, ಮಣ್ಣಾರಶಾಲೆಯಲ್ಲಿ ಆ ಹಾಲಿಟ್ಟು ಪಾತ್ರೆಯನ್ನು ಬೋರಲಿಡುವ ಪದ್ಧತಿಯಿಲ್ಲ. ಯಾಕೆಂದರೆ, ಅಲ್ಲಿ ಪೂಜೆ ತರ್ಪಣಗಳೆಲ್ಲ ಮುಗಿದ ನಂತರ ಹಾಲಿಟ್ಟು ಪಾತ್ರೆಯನ್ನು ಅಲ್ಲೇಬಿಟ್ಟು ಎಲ್ಲರೂ ಹೊರಹೋಗಿ ಬಾಗಿಲು ಮುಚ್ಚುತ್ತಾರೆ.  ಮರುದಿವಸ ಪಾತ್ರೆಗಳು ಖಾಲಿಯಾಗಿರುತ್ತವೆ.  (ಸರ್ಪಕುಲಗಳು ಬಂದು ಹಾಲು ಕುಡಿಯುತ್ತವೆಂದು, ಹಿಟ್ಟು ಮೈತುಂಬ ಧರಿಸುತ್ತವೆಂದು ನಂಬಿಕೆ.)  ಮೂಲಸ್ಥಾನ ನೆಲಮಾಳಿಗೆಯಲ್ಲಿ ಮೊದಲು ಒಂದು ಸರ್ಪ ಮಾತ್ರ ಇದ್ದುದಾಗಿದ್ದರೂ, ಅನಂತರ ಅಸಂಖ್ಯಾತ ಹುತ್ತಗಳು ಬೆಳೆದು ಹಲವು ಹಾವುಗಳು ಸೇರಿಕೊಂಡು ಅವುಗಳ ಸಂತತಿ ವರ್ಧಿಸುತ್ತ ಬಂದಿದೆ ಎಂದು ಹೇಳುತ್ತಾರೆ.

ಹಾವುಗಳು ಮಣ್ಣಾರಶಾಲ ಮನೆಯವರನ್ನು ವಿನಾಕಾರಣ ಕಡಿಯುವುದಿಲ್ಲ. ಒಂದೊಮ್ಮೆ ಕಡಿದರೂ ಅದರಿಂದ ಅನಾಹುತಗಳು ಸಂಭವಿಸುವುದಿಲ್ಲ.  ಒಮ್ಮೆ, ಒಂದು ಸರ್ಪವು ಬನದಲ್ಲಿನ ಚೆನ್ನೆಮರವನ್ನು ಏರಿತು.  ಮೇಲೇರುವಾಗ ಮರದ ಮುಳ್ಳು ಹಾವಿನ ಹೊಟ್ಟೆಗೆ ಚುಚ್ಚಿಕೊಂಡು -- ಮೇಲೆ ಏರಲೂ ಕೆಳಗೆ ಇಳಿಯಲೂ ಸಾಧ್ಯವಾಗದಂತಹ  ಸ್ಥಿತಿಯಲ್ಲಿ ಸಿಲುಕಿಕೊಂಡಿತು.  ಹಾಗೆಯೆ ಎಷ್ಟು ದಿವಸ ಅಲ್ಲೇ ಕುಳಿತಿತ್ತೋ ತಿಳಿಯದು.  ಒಂದು ದಿವಸ ಆ ಮನೆಯ ನಂಬ್ಯಾತಿರಿಯೊಬ್ಬನು ಸರ್ಪವು ಹೀಗೆ ಕಷ್ಟಕ್ಕೆ ಸಿಲುಕಿರುವುದನ್ನು ಕಂಡು ಮರವನ್ನೇರಿ ಅದನ್ನು ಹಿಡಿದು ಮುಳ್ಳಿನಿಂದ ಬಿಡಿಸಿ ಎಳೆದುಕೊಂಡನು.  ಆಗ ತಡೆಯಲಾರದ ನೋವಿನ ದೆಸೆಯಿಂದಲೊ ಏನೋ, ಯಾವತ್ತೂ ನಂಬ್ಯಾತಿರಿಗಳನ್ನು ಕಚ್ಚಿರದ ಸರ್ಪವು ಅಂದು ಅವನನ್ನು ಕಡಿದು ಕೆಳಗೆ ಹಾರಿ ಓಡಿ ಮರೆಯಾಯಿತು.  ಅವನೂ ಮರದಿಂದಿಳಿದು ಮನೆಸೇರಿದನು. ಸರ್ಪದಂಶನದಿಂದ ಅವನಿಗೆ ಯಾವುದೇ ತೊಂದರೆಯುಂಟಾಗಲಿಲ್ಲ.

ಮಣ್ಣಾರಶಾಲೆಯಲ್ಲಿ ತರಕಾರಿ ಹಸಿರುವಾಣಿ ಹಣ್ಣುಹಂಪಲು ಕ್ರಯಕ್ಕೆ ಕೊಂಡುಕೊಳ್ಳಬೇಕಾಗಿಲ್ಲ.  ಹಲಸು ಮಾವು ಮಾದಳ ತೆಂಗು ಕುಂಬಳ ಬಾಳೆ ಬದನೆ ಸೌತೆ ಅಲಸಂದೆ ಎಲ್ಲ ಬನದಲ್ಲೇ ಬೆಳೆಯುತ್ತವೆ.  ಹಾಗೆಯೆ ಭಕ್ತಜನರಿಂದ ಹರಕೆಹೊರೆಯಾಗಿಯೂ ಬಂದು ಸೇರುತ್ತವೆ.  ಅಲ್ಲಿ ಯಾವುದನ್ನೂ ತೆಗೆದು ಜೋಪಾನ

ಮಾಡಬೇಕಾದ ಅವಶ್ಯಕತೆಯಿಲ್ಲ. ಬನದ ತುಂಬ ಬಿದ್ದಿರುವ ನೂರುಂಪಾಲು ಪಾತ್ರೆಗಳನ್ನಾಗಲಿ ತರಕಾರಿಗಳನ್ನಾಗಲಿ ಇತರ ವಸ್ತುಒಡವೆಗಳನ್ನಾಗಲಿ ಯಾರೂ ಕಳವು ಮಾಡಲಾರರು. ಒಮ್ಮೆ, ಒಬ್ಬಾತ ಅಲ್ಲಿಂದ ಒಂದು ಕುಂಬಳಕಾಯಿಯನ್ನು ಕಳವುಮಾಡಿ ಮನೆಗೆ ಕೊಂಡುಹೋದನು. ಮನೆಯಲ್ಲಿ ಅದನ್ನು ಕತ್ತರಿಸುವಾಗ ಅದರೊಳಗಿಂದ ಒಂದು ಸರ್ಪ ಹಾರಿಬಂದು ಭುಸುಗುಡತೊಡಗಿತು. ಮನೆಯವರೆಲ್ಲ ಹೆದರಿ ಓಡಿದರು. ಕದ್ದು ತಂದವನು, ''ಸತ್ಯದೇವತೆಯೆ, ನನ್ನ ತಪ್ಪನ್ನು ಕ್ಷಮಿಸಬೇಕೆಂದು ಬೇಡಿಕೊಂಡು ಹರಕೆ ಹೊತ್ತನು. ಅದು ಹೊರಟುಹೋಗುತ್ತಲೆ ತಾನೂ ಕ್ಷೇತ್ರಕ್ಕೆ ಹೋಗಿ ಹರಕೆ ಸಲ್ಲಿಸಿ ಹಿಂದಿರುಗಿದನು.

ಒಮ್ಮೆ, ಪಂತಳದ ನಾಯರ್ ಕುಟುಂಬದವರು ಮಣ್ಣಾರಶಾಲೆಗೆ ಯಾತ್ರೆ ಹೋಗಿದ್ದರು. ಸ್ವಯಂಪಾಕ ಮಾಡಿಕೊಂಡು ಕೆಲವು ದಿನ ಅಲ್ಲೆ ಉಳಿದಿದ್ದರು. ಅಡಿಗೆಗೆ ಬೇಕಾದಂತಹ ಅಕ್ಕಿ ತರಕಾರಿ ಪಾತ್ರೆಪಗಡಿ ಮುಂತಾದವನ್ನು ಅವರೇ ತಂದು ಕೊಂಡಿದ್ದರು. ಅಕ್ಕಿ ಅಳೆಯುವ 'ಚಂಗಳಿ' ಪಾತ್ರೆಯನ್ನು ಮಾತ್ರ ಕ್ಷೇತ್ರದ 'ಮನೆ'ಯಿಂದ ತೆಗೆದುಕೊಂಡಿದ್ದರು. ಪೂಜೆ ಮುಗಿಸಿ ಊರಿಗೆ ಹೊರಟಾಗ ಚಂಗಳಿಯನ್ನು ಹಿಂದಿರುಗಿಕೊಡಲು ಮರೆತುಬಿಟ್ಟಿದ್ದರು. ಅದು ಅಕ್ಕಿಚೀಲದಲ್ಲೆ ಉಳಿದುಬಿಟ್ಟಿತ್ತು. ಮನೆಗೆ ಹೋಗಿ ಅಕ್ಕಿಚೀಲವನ್ನು ಬಿಚ್ಚಿದಾಗ ಚಂಗಳಿಯೂ ಅದರೊಳಗೊಂದು ಸರ್ಪವೂ ಇತ್ತು. ತಮ್ಮ ತಪ್ಪು ಅರಿವಾದೊಡನೆಯೆ ಪಾತ್ರೆಯನ್ನು ಹಿಂದಿರುಗಿಸಿ ಪ್ರಾಯಶ್ಚಿತ್ತಾರ್ಥವಾಗಿ ಬೇರೆ ಸೇವೆಗಳನ್ನು ಸಲ್ಲಿಸುವುದಾಗಿ ಪ್ರಾರ್ಥಿಸಿಕೊಂಡರು. ಕೂಡಲೇ ಹಾವು ಮಾಯವಾಯಿತು. ಅವರು ಆಡಿದ ಮಾತಿನಂತೆ ನಡೆದುಕೊಂಡರು.

ಮಣ್ಣಾರಶಾಲೆಯಲ್ಲಿ ಹಿಂದಿನಿಂದಲೂ ನಡೆದುಬಂದ ವರ್ಷದ ಪ್ರಧಾನ ಜಾತ್ರೆಯೆಂದರೆ ಕನ್ಯಾಮಾಸದಲ್ಲಿ ನಡೆಯುವ 'ಆಯಿಲ್ಯ'. (ಆಯಿಲ್ಯವೆಂದರೆ ಆಶ್ಲೇಷಾನಕ್ಷತ್ರ – ಅದು ಸರ್ಪಗಳ ನಕ್ಷತ್ರ ತಾನೆ!) ಅಂದು ವಿಶೇಷ ಪೂಜಾದಿಗಳೂ ಕ್ರಿಯಾಚರಣೆಗಳೂ ಅನ್ನಸಂತರ್ಪಣೆಯೂ ನಡೆಯುತ್ತವೆ. ಭಕ್ತಾದಿಗಳೂ ಬಹುಸಂಖ್ಯೆಯಲ್ಲಿ ನೆರೆಯುತ್ತಾರೆ. ಸರ್ಪಕುಲವನ್ನು ಪೂಜಿಸಿ ಸಂತಾನ ಸಂಪತ್ತುಗಳನ್ನು ಪಡೆಯುತ್ತಾರೆ, ಕುಷ್ಠಾದಿ ಮಹಾರೊಗಗಳನ್ನು ನಿವಾರಿಸಿಕೊಳ್ಳುತ್ತಾರೆ.

ತಿರುವಿತಾಂಕೂರಿನಲ್ಲಿ ಕಾರ್ತಿಕ ತಿರುವಾಳ್ ರಾಮವರ್ಮಮಹಾರಾಜನು ಪ್ರತಿವರ್ಷವೂ ಆಯಿಲ್ಯ ಸಮಯದಲ್ಲಿ ಕಾರ್ತಿಕಪಳ್ಳಿ ಅರಮನೆಯಲ್ಲಿ ಉಳಿದು ಕೊಂಡು, ಆಯಿಲ್ಯ ಪೂಜೆಗೆ ಹೋಗಿ, ನಾಗರಾಜ ದರ್ಶನ ಮಾಡಿಕೊಂಡುಬರುವುದು ಪದ್ಧತಿಯಾಗಿತ್ತು. ಆದರೆ ಅದೊಂದು ವರ್ಷ, ಅದೇ ಸಮಯದಲ್ಲಿ ಕಾರಣವಶಾತ್ ನಾಗರಕೋಯಿಲ್‌ಗೆ ತೆರಳಿದ್ದ ಮಹಾರಾಜನಿಗೆ ಆಯಿಲ್ಯದ ದಿನಕ್ಕೆ ಸರಿಯಾಗಿ



ಹಿಂದಿರುಗಲು ಸಾಧ್ಯವಾಗಲಿಲ್ಲ. ಅದರಿಂದ ಖಿನ್ನಮನಸ್ಕನಾದ ಮಹಾರಾಜನು ಮಣ್ಣಾರಶಾಲೆಯಿಂದ ನಂಬ್ಯಾತಿರಿಗಳನ್ನು ಅರಮನೆಗೆ ಬರಮಾಡಿಕೊಂಡು, ತನಗೆ ದೇವರ ಸೇವೆ ಮಾಡಲು ಅನುಕೂಲವಾಗುವಂತೆ ಬರುವ ತುಲಾಮಾಸದಲ್ಲೂ ಆಯಿಲ್ಯ ಪೂಜೆಯ ಏರ್ಪಾಡು ಮಾಡುವಂತೆಯೂ ಅದಕ್ಕೆ ತಗಲುವ ವೆಚ್ಚವನ್ನೆಲ್ಲ ಮುಂಚಿತವಾಗಿ ಭರಿಸುವುದಾಗಿಯೂ ಕೇಳಿಕೊಂಡನು. ನಂಬ್ಯಾತಿರಿಗಳು ಶುದ್ಧಚಿತ್ತನಾದ ಮಹಾರಾಜನ ಕೋರಿಕೆಯನ್ನು ತಿರಸ್ಕರಿಸಲಾಗದೆ ಎಲ್ಲ ಏರ್ಪಾಟು ಮಾಡಿದರು. ತುಲೆಯಲ್ಲೂ ಆಯಿಲ್ಯಸೇವೆ ಅಷ್ಟೇ ವಿಜೃಂಭಣೆಯಿಂದ ನಡೆಯಿತು. ರಾಜನ ಮನಸ್ಸಿಗೂ ತೃಪ್ತಿಯಾಯಿತು. ಅಂದಿನಿಂದ ರಾಜನ ಸೂಚನೆಯಂತೆ ಪ್ರತಿವರ್ಷವೂ ಕನ್ಯಾ ತುಲಾ ಎರಡೂ ಮಾಸಗಳಲ್ಲಿ ಆಯಿಲ್ಯ ಜಾತ್ರೆಯನ್ನು ನಡೆಸಲಾಗುತ್ತದೆ. ಭಕ್ತಜನಗಳಿಗೆ ಹೆಚ್ಚಿನ ಅನುಕೂಲವಾಗುವುದರಿಂದ ಹೀಗೆ ಎರಡು ಆಯಿಲ್ಯ ನಡೆಸುವುದನ್ನು ಸರ್ಪಕುಲಗಳು ಸಮ್ಮತಿಸಿದವೆಂದು ನಾವು ತಿಳಿದು ಕೊಳ್ಳಬಹುದು.

## ೨. ಅರಯ್ಕಲ್ ಬೀಬಿ

ಅರಯ್ಕಲ್ ಬೀಬಿಯ ಮನೆತನದ ಹೆಸರು ಕಣ್ಣೂರುಂಕುಟುಂಬ ಎಂದು. ಬ್ರಿಟಿಷ್ ಮಲಬಾರಿಗೆ ಸೇರಿದ ಚಿರಯ್ಕಲ್ ಈ ಕುಟುಂಬದ ಮೂಲಸ್ಥಳ. ಕಣ್ಣೂರು ಕುಟುಂಬವು ಚಿರಯ್ಕಲ್‌ನಲ್ಲಿದ್ದ ಕೋಲತ್ತಿರಿ ರಾಜವಂಶದ ಒಂದು ಕವಲು. ಈ ಕವಲು ಆ ರಾಜವಂಶದಿಂದ ಬೇರ್ಪಟ್ಟ ಕಾರಣದ ಕುರಿತು ಹೇಳಲಾಗುವ ಐತಿಹ್ಯ ಕತೆಯೊಂದನ್ನು ಇಲ್ಲಿ ಸಾದರಪಡಿಸುತ್ತೇನೆ.

ಕೊಲ್ಲಂ ಶಕ ನಾಲ್ಕನೆಯ ಶತಮಾನದವರೆಗೆ (ಕ್ರಿ.ಶ. ೧೩ನೇ ಶತಕ) ಕೋಲತ್ತಿರಿ ರಾಜಕುಟುಂಬದವರು ಕೋಲತ್ತನಾಡಿನ ಅಂದಿನ ರಾಜಧಾನಿಯಾಗಿದ್ದ ಚಿರಯ್ಕಲ್‌ನ ಏಳಿಮಲೆಕೋಟೆಯಲ್ಲೇ ನೆಲೆಸಿದ್ದರು. ಅವರು ಏಳಿಗೆ ಹೊಂದುತ್ತಿರುವಾಗ ಈ ರಾಜವಂಶಕ್ಕೂ ಕುರುವಾಳ್ಚಕ್ಕರದ ರಾಜವಂಶಕ್ಕೂ ನಡುವೆ ಸ್ಪರ್ಧೆ ತೊಡಗಿತ್ತು. ಆಗ ಕುಟುಂಬವನ್ನು ಹಲವು ಶಾಖೆಗಳಾಗಿ ವಿಂಗಡಿಸಿ ಸುತ್ತಲಿನ ಪ್ರಮುಖಸ್ಥಳಗಳಲ್ಲಿ ಸ್ಥಾಪಿಸಲಾಯಿತು. ಕತ್ತಿಮಂಗಲ, ಮಾರಿಪ್ಪತ್ತು, ಪಳಯಂಗಾಡಿ, ಚೆರುಕುನ್ನ, ವಳವಟ್ಟಣಂ ಮೊದಲಾದ ಊರುಗಳಲ್ಲಿ ಹೊಸದಾಗಿ ಕೋಟೆ ಕೊತ್ತಲ ಕೊಟ್ಟಾರಗಳನ್ನು ನಿರ್ಮಿಸಿಕೊಂಡು ಆ ಕುಟುಂಬಗಳು ನೆಲೆಗೊಂಡವು. ಆದರೂ ಕೋಲತ್ತಿರಿ ರಾಜರು ಮಾತ್ರ ಕೊಲ್ಲಂಶಕ ಏಳನೆಯ ಶತಮಾನದವರೆಗೆ (ಕ್ರಿ.ಶ. ೧೬ನೆಯ ಶತಕ) ಏಳಿಮಲೆಕೋಟೆಯ ಅರಮನೆಯಲ್ಲೇ ವಾಸಿಸಿದ್ದರು. ಚಿರಯ್ಕಲ್ ಕಣ್ಣೂರಿನಿಂದ

ಸುಮಾರು ಇಪ್ಪತ್ತು ಮೈಲು ಉತ್ತರದಲ್ಲಿದೆ. ಅಲ್ಲಿರುವ ಏಳಿಮಲೆ ಎಂಬ ಬೆಟ್ಟದ ಮೇಲೆ ಕೋಟೆಯ ಅವಶೇಷಗಳನ್ನು ಈಗಲೂ ಕಾಣಬಹುದು. ಏಳಿಮಲೆಯಿಂದ ಪಶ್ಚಿಮದಲ್ಲಿ ಸಮುದ್ರಕ್ಕೆ ಹೆಚ್ಚು ದೂರವಿಲ್ಲ. ಬೆಟ್ಟದ ತಪ್ಪಲಿನಲ್ಲಿ ಹದಿನೆಂಟು ಚೌಕಟ್ಟಿನ ವಿಶಾಲವಾದ ಅರಮನೆಯನ್ನು ಕಟ್ಟಲಾಗಿತ್ತು. ಬೆಟ್ಟದ ಸುತ್ತಲೂ ಹಸಿರು ತೋಟಗಳಿದ್ದವು. ಸನಿಹದಲ್ಲೇ ಒಂದು ನದಿ ಹರಿಯುತ್ತಿತ್ತು. ಅರಮನೆಯ ಒಂದು ಪಾರ್ಶ್ವದಲ್ಲಿ ಬ್ರಾಹ್ಮಣರ ಅಗ್ರಹಾರ ಮತ್ತು ಸೈನ್ಯದ ನಾಯರುಗಳ ಐನೂರು ಬಿಡದಿಗಳಿರುವ ಪಟ್ಟಾಳಪಾಳಯ ಮುಂತಾದ ಕೇರಿಗಳೂ ಇನ್ನೊಂದು ಪಾರ್ಶ್ವದಲ್ಲಿ ಧನಿಕರೂ ಯೋದ್ಧರೂ ಆಗಿರುವಂತಹ ಮುಹಮ್ಮದೀಯರ ಬೀಡುಗಳೂ ಇದ್ದವು.

ಒಮ್ಮೆ, ಏಳಿಮಲೆ ಅರಮನೆಯ ಇಬ್ಬರು ರಾಜಕುಮಾರಿಯರು ನೀರಾಟವಾಡುವ ಆಸೆಯಿಂದ ಹೊಳೆಗೆ ಹೋದರು. ಅರಮನೆಯ ಸ್ತ್ರೀಯರಿಗೆಂದು ಕಲ್ಲುಪಾವಟಿಗೆ ಕಟ್ಟಿ ನಿರ್ಮಿಸಿದ್ದ ಪ್ರತ್ಯೇಕವಾದ ಸ್ನಾನಘಟ್ಟವಿತ್ತು. ಈ ಹುಡುಗಿಯರು ಅಲ್ಲಿ ಸ್ನಾನಮಾಡಿ ವಿವಿಧ ರೀತಿಯ ಈಜಾಟಗಳನ್ನು ಆಡಿ ನಕ್ಕು ನಲಿಯುತ್ತ ಹೊತ್ತು ಕಳೆದರು. ಹೀಗೆ ಆಡುತ್ತಾಡುತ್ತ ಹೊಳೆಯ ಮಧ್ಯಭಾಗವನ್ನು ಸೇರಿದಾಗ ಅವರು ಶಕ್ತಿಗುಂದಿ ಸುಸ್ತಾಗಿಬಿಟ್ಟಿದ್ದರು. ಕಿರಿಯವಳು ಅವಸರದಲ್ಲಿ ಈಜಿ ಬೇಗನೆ ದಡ ಸೇರಿಕೊಂಡಳು. ಹಿರಿಯವಳು ಕೈಕಾಲು ಸೋತು ಬಸವಳಿದು ಜೊತೆಗೆ ಭಯವೂ ಸೇರಿ ಮುಳುಗೇಳತೊಡಗಿದಳು. ದಡ ತಲುಪಿದ ತಂಗಿಯು ಪರಿಸ್ಥಿತಿ ಅರಿತು ಜೋರಾಗಿ ಕೂಗಿಕೊಂಡಳು. ಹೊಳೆಯ ಆಚೆಕಡೆ ಸ್ವಲ್ಪ ದೂರದಲ್ಲಿ ಒಬ್ಬ ಮುಹಮ್ಮದೀಯ ಯುವಕನು ಸ್ನಾನಮಾಡುತ್ತಿದ್ದನು. ಕೂಗು ಕೇಳಿದೊಡನೆಯೆ ಏನೊ ಅವಘಡವೆಂದು ತಿಳಿದು ಓಡಿಬಂದ ಆ ಯುವಕನು ಮುಂಡನ್ನು ತಲೆಗೆ ಸುತ್ತಿಕೊಂಡು ಹೊಳೆಹಾರಿ ರಾಜಕುಮಾರಿಯ ಕೈಹಿಡಿದು ದಡಕ್ಕೆ ಎಳೆತಂದನು. ಆದರೂ ಆಕೆ ನೀರಿನಿಂದ ಮೇಲೆ ಬಾರದೆ ನಿಂತಿರಲು, ಸಂಗತಿ ಅರ್ಥಮಾಡಿಕೊಂಡು, ತಾನು ತಲೆಗೆ ಸುತ್ತಿಕೊಂಡಿದ್ದ ಹೊಸಮುಂಡನ್ನು ಅವಳಿಗೆ ಉಡಲುಕೊಟ್ಟು, ಅಂತೂ ಸಂಕಟದಿಂದ ಪಾರುಮಾಡಿ ಹೊರಟುಹೋದನು. ಸಂಗತಿ ಏನಾಗಿತ್ತೆಂದರೆ, ರಾಜಕುಮಾರಿ ಉಟ್ಟಿದ್ದ ಬಟ್ಟೆಯು ನೀರಿನ ಸೆಳವಿನಲ್ಲಿ ಕೊಚ್ಚಿಕೊಂಡು ಹೋಗಿತ್ತು. ಅದರಿಂದಾಗಿಯೆ ಅವಳು ಸಂಕಟದಿಂದ ಪಾರಾದರೂ ದಡಕ್ಕೆ ಬಾರದೆ ಕಂಠಪ್ರಮಾಣ ನೀರಿನಲ್ಲೇ ನಿಂತಿದ್ದಳು. ಆ ಯುವಕನು ತನ್ನ ಬಟ್ಟೆ ಕೊಟ್ಟುದರಿಂದಲೇ ಆಕೆಗೆ ಮೇಲೆ ಬರಲು ಸಾಧ್ಯವಾದುದು. ಅಷ್ಟರಲ್ಲಿ ಬಟ್ಟೆಬರೆಯ ದಾಸಿಯರು ಅಲ್ಲಿಗೆ ಬರಲಾಗಿ ಅಕ್ಕತಂಗಿಯರು ಅರಮನೆ ಸೇರಿದರು.

ಕ್ಷಣಾಂತರದಲ್ಲಿ ಈ ವರ್ತಮಾನವು ಊರೆಲ್ಲ ತುಂಬಿ ಆ ಕನ್ನಿಕೆಯರ ಸೋದರಮಾವನಾದ ಕೋಲತ್ತಿರಿ ಮಹಾರಾಜನ ಕಿವಿಗೂ ಮುಟ್ಟಿತು. ತನ್ನ



ಸೊಸೆಯನ್ನು ಆಪತ್ತಿನಿಂದ ಪಾರುಮಾಡಿದ ಮುಹಮ್ಮದೀಯ ಯುವಕನನ್ನು ಅರಮನೆಗೆ ಬರಮಾಡಿಕೊಂಡು ಕೃತಜ್ಞತೆ ಹೇಳಿ ಸತ್ಕರಿಸಿದನು. ಅವನು ತನ್ನ ಸೈನ್ಯಕ್ಕೆ ಸೇರಿದ ಭಟನೆಂದು ತಿಳಿದಾಗ ಬಹಳ ಸಂತುಷ್ಟನಾಗಿ ಅನೇಕ ವಸ್ತು ಒಡವೆಗಳನ್ನು ಬಹುಮಾನವಾಗಿತ್ತು ಸೈನ್ಯದಲ್ಲಿ ಭಡ್ತಿ ನೀಡಿ ಹೆಚ್ಚಿನ ಸ್ಥಾನಮಾನಗಳನ್ನು ಕಲ್ಪಿಸಿಕೊಟ್ಟನು.

ಇತ್ತ, ನೀರಾಟ ಮುಗಿಸಿ ಅರಮನೆಗೆ ಹಿಂದಿರುಗಿದ ಹಿರಿಯ ರಾಜಕುಮಾರಿಯು ಒಳಮನೆಗೆ ಪ್ರವೇಶಮಾಡದೆ ಹೊರಭಾಗದ ಕಿರುಮನೆಯಲ್ಲೆ ಉಳಿದುಕೊಂಡಳು. ತನ್ನ ತಾಯಿಯೇ ಮೊದಲಾಗಿ ಯಾರು ಎಷ್ಟು ಹೇಳಿದರೂ ಒಳಗೆ ಕಾಲಿಡಲಿಲ್ಲ. ಗುರುಹಿರಿಯರೆಲ್ಲರೂ ಸೇರಿ ಒತ್ತಾಯಪಡಿಸಿದಾಗ, ''ನೀರಿನಿಂದ ಕೈ ಹಿಡಿದು ಕರೆತಂದಾಗಲೆ ಆ ಮುಹಮ್ಮದೀಯನು ನನ್ನ ಪಾಣಿಗ್ರಹಣಮಾಡಿದಂತಾಯಿತು. ಮತ್ತೆ, ಒದ್ದೆಯಾಗಿದ್ದರೂ ಹೊಸ ಬಟ್ಟೆಯನ್ನು ತೊಡಲು ಕೊಟ್ಟಾಗ ವಿವಾಹಕರ್ಮವೆಲ್ಲ ಮುಗಿದಂತಾಯಿತು. ರಾಜಕನ್ನಿಕೆಯರು ಮುಹಮ್ಮದೀಯರನ್ನು ಲಗ್ನವಾಗುವುದು ವಿಹಿತವಲ್ಲವಾದುದರಿಂದ ನಾನು ಭ್ರಷ್ಟೆಯಾದಂತಾಯಿತು. ಆದ್ದರಿಂದ, ನಾನಿನ್ನು ಒಳಗೆ ಬರುವುದು ಸರಿಯಲ್ಲ'' ಎಂದು ತನ್ನ ಅಭಿಪ್ರಾಯವನ್ನು ಪ್ರಕಟಿಸಿ ಅವರಿಗೆಲ್ಲ ಸಮಾಧಾನ ಹೇಳಿದಳು. ರಾಜಕುಮಾರಿಯ ಮಾತುಲನಾದ ಕೋಲತ್ತಿರಿ ಮಹಾರಾಜನು ವಿದ್ವಾಂಸರಾದ ಬ್ರಾಹ್ಮಣರನ್ನು ಕರೆಯಿಸಿ ಧರ್ಮಜಿಜ್ಞಾಸೆ ನಡೆಸಿ, ಅವರು ಸೂಚಿಸಿದ ಪ್ರಕಾರ ಪ್ರಾಯಶ್ಚಿತ್ತವಿಧಿಗಳಿಂದ ಶುದ್ಧಿಕರ್ಮಗಳನ್ನು ಮಾಡಲು ನಿಶ್ಚಯಿಸಿ, ದಾನ ದಕ್ಷಿಣೆ ಭೂರಿಭೋಜನಗಳಿಗೆ ತಕ್ಕ ಏರ್ಪಾಡು ಮಾಡಿ, ಬ್ರಾಹ್ಮಣರು ಬಯಸಿದ್ದನ್ನೆಲ್ಲ ಕೊಟ್ಟು ಕಳುಹಿಸಿದನು. ಆದರೆ, ರಾಜಕುಮಾರಿಯು ತನ್ನ ನಿರ್ಧಾರವನ್ನು ಲೇಶಮಾತ್ರವೂ ಬದಲಿಸಲು ಸಿದ್ಧಳಾಗಲಿಲ್ಲ. ಶುದ್ಧೀಕರಣದ ಸಂಗತಿಯನ್ನು ಸಖಿಯರಿಂದ ತಿಳಿದು ತನ್ನ ತಾಯಿಗೂ ಮಾತುಲನಿಗೂ ವಿಷಯವನ್ನು ಸ್ಪಷ್ಟಪಡಿಸಿದಳು.

ವಿದುಷಿಯಾದಂತಹ ಆ ರಾಜಕನ್ನಿಕೆಯ ದೃಢಮನಸ್ಸು ತಿಳಿದು ಮಹಾರಾಜನು ರಾಜಕುಟುಂಬದ ಸಕಲರೊಡನೆಯೂ ಸಮಾಲೋಚಿಸಿ ಆಕೆಗೆ ಅರಮನೆಯ ಪಕ್ಕದಲ್ಲೇ ತತ್ತುಲ್ಯವಾದ ಇನ್ನೊಂದು ಅರಮನೆಯನ್ನು ಕಟ್ಟಿಸಿಕೊಟ್ಟನು. ಯಾವ ತೆರನಾದ ಕುಂದುಕೊರತೆಗಳೂ ಉಂಟಾಗದಂತೆ ಸಕಲ ವಸ್ತುವಿಭವಗಳ ಅನುಕೂಲ ಕಲ್ಪಿಸಿಕೊಟ್ಟನು. ಅಲ್ಲದೆ, ಪ್ರಾಣರಕ್ಷಣೆ ಮಾಡಿದ ಆ ಮುಹಮ್ಮದೀಯ ಯುವಕನೊಂದಿಗೆ ಆಕೆಯ ವಿವಾಹ ಮಹೋತ್ಸವವನ್ನೂ ನೆರವೇರಿಸಿದನು. ಅಂದಿನಿಂದ ಆಕೆಯ ಹೆಸರು 'ಅರಯ್ಕಲ್ ಬೀಬಿ' ಎಂದಾಯಿತು. ತಿರುವಾಂಕೂರು ಹಾಗೂ ಕೊಚ್ಚಿ ಸಂಸ್ಥಾನಗಳಲ್ಲಿ ಆಟ ಕೂಟ ಬೇಟೆಗಳಲ್ಲಿ ಮಹಾರಾಜರ ಜೊತೆ ಸಮಾನಸ್ಕಂಧರಂತೆ

ಪಾಲ್ಗೊಳ್ಳುವ ಮಾಂಡಲಿಕರಾದ ಕೋಯಿತ್ತಂಬುರಾನ್‌ಗಳ ಸ್ಥಾನಮಾನಗಳನ್ನು ಆಕೆಯ ಗಂಡನಿಗೆ ನೀಡಿ, ಅವನು ಆಕೆಯ ಜೊತೆ ಅರಮನೆಯಲ್ಲೆ ವಾಸಮಾಡಿ ಕೊಂಡಿರುವಂತೆ ಏರ್ಪಾಡು ಮಾಡಿಸಿದನು. ಪದ್ಧತಿಯಂತೆ – ಅಳಿಯಸಂತಾನ ಕಟ್ಟಿನಂತೆ – ವಸ್ತು ಒಡವೆ ಆಸ್ತಿಪಾಸ್ತಿಗಳ ಅಧಿಕಾರವು ಆ ರಾಜಕನ್ನಿಕೆಯ ವಶದಲ್ಲೆ ಇದ್ದವು. ಅರಮನೆಯ ಆಡಳಿತದ ವಹಿವಾಟುಗಳನ್ನೆಲ್ಲ ಚೆನ್ನಾಗಿ ಅರಿತು ಬಹುದಕ್ಷತೆಯಿಂದ ನಿರ್ವಹಿಸುವ ಕಾರ್ಯಕ್ಷಮತೆಯು ಆಕೆಗೆ ಸಿದ್ಧಿಸಿರಲಾಗಿ, ಅರಿತು ಆಚರಿಸುವವಳು ಎಂಬರ್ಥದಲ್ಲಿ 'ಅರಯ್ಕಲ್ ಬೀಬಿ' ಎಂಬ ಹೆಸರು ಅವಳಿಗೆ ಅನ್ವರ್ಥ ನಾಮವಾಗಿ ಪ್ರಸಿದ್ಧವಾಯಿತು. ಮುಂದೆ ಅರಯ್ಕಲ್ ಬೀಬಿಯ ಸಂತಾನಪರಂಪರೆಯಲ್ಲಿ ಬಂದ ಅರಸುಮಕ್ಕಳೆಲ್ಲ ಅರಯ್ಕಲ್ ರಾಜಾಕ್ಕಳೆಂದೂ ರಾಜಕುಮಾರಿಯರೆಲ್ಲ ಅರಯ್ಕಲ್ ಬೀಬಿಗಳೆಂದೂ ಕರೆಯಲ್ಪಟ್ಟರು.

ಮುಹಮ್ಮದೀಯ ಹೆಂಗಸರನ್ನು ಪರಪುರುಷರು ಕಾಣಬಾರದೆನ್ನುವ ನಿಯಮವಿರುವುದರಿಂದ ಘೋಷಾಪದ್ಧತಿ ಚಾಲ್ತಿಯಲ್ಲಿದ್ದರೂ, ಕೋಲತ್ತಿರಿ ವಂಶದ ಅರಸುಮಕ್ಕಳು ಅರಯ್ಕಲ್ ಬೀಬಿಯರನ್ನು ನೋಡಲು ಯಾವುದೇ ನಿರ್ಬಂಧವಿರಲಿಲ್ಲ. ಕೋಲತ್ತಿರಿ ಅರಮನೆಗೆ ತಿರುವಿತಾಂಕೂರಿನ ರಾಜವಂಶಸ್ಥರು ಭೇಟಿ ಕೊಟ್ಟಾಗಲೂ ಅವರೂ ಬೀಬಿಯರನ್ನು ನೇರ ನೋಡಬಹುದಾಗಿತ್ತು. ಚಿರಯ್ಕಲ್ ಅರಮನೆಯಲ್ಲಿ ಯಾವುದೇ ವಿಶೇಷಗಳಿದ್ದರೂ ಅರಯ್ಕಲ್ ರಾಜಕುಮಾರರು ಅಲ್ಲಿಗೆ ಭೇಟಿಕೊಟ್ಟು ಭಾಗವಹಿಸುವುದು ಪದ್ಧತಿಯಾಗಿ ಮುಂದುವರಿಯಿತು.

ಇನ್ನು, ಈ ಅರಯ್ಕಲ್ ಕುಟುಂಬವು ಕಣ್ಣೂರಿಗೆ ಬಂದ ಕಥೆಯೇನೆಂದು ನೋಡೋಣ. ಕೊಲ್ಲಂಶಕ ಏಳನೆಯ ಶತಮಾನದ (ಕ್ರಿ.ಶ.೧೬ನೇ ಶತಕ) ಆರಂಭದಲ್ಲಿ ಕೋಲತ್ತಿರಿರಾಜನ ಪ್ರಧಾನಮಂತ್ರಿಯಾಗಿದ್ದ 'ಅರಯನ್ ಕುಳಂಗರ ನಾಯರ್' ಎಂಬಾತನು ಇಸ್ಲಾಂಮತ ಸ್ವೀಕರಿಸಿ 'ಮುಹಮ್ಮದಾಲಿ' ಯಾದನು. ಆದರೂ ಮಂತ್ರಿಸ್ಥಾನದಲ್ಲಿ ಮುಂದುವರಿದನು. ಆ ಮುಹಮ್ಮದಾಲಿಯು ತನ್ನ ದೊರೆಯ ಅನುಮತಿ ಪಡೆದು ಅರಯ್ಕಲ್ ರಾಜವಂಶದ ಬೀಬಿಯೊಬ್ಬಳನ್ನು ಮದುವೆಯಾದನು. ಅವನ ಕಾಲಾನಂತರ ಅವನ ಪುತ್ರರಾದ 'ಮಮ್ಮಾಲಿಕ್ಕಿಟಾವು' ಗಳು – ಮುಹಮ್ಮದಾಲಿಯ ಶೂರಕುಮಾರರು – ರಾಜನ ಪ್ರಧಾನ ಸೇವಕರಾಗಿ ಕೆಲಸ ನಿರ್ವಹಿಸಿದರು. ಅವರಲ್ಲಿ ರಾಜನ ಸೇನಾನಾಯಕನಾಗಿ ನಿಯಮಿತನಾದ 'ಆಲಿಮುಸ್ಸು' ಎಂಬ ಯುದ್ಧವಿದಗ್ಧನು ಮಾಲಿದ್ವೀಪಸ್ತೋಮವನ್ನು ವಶಪಡಿಸಿಕೊಂಡು ಕೋಲತ್ತಿರಿ ಮಹಾರಾಜನ ಆಳ್ವಿಕೆಯಲ್ಲಿ ಅಧೀನಗೊಳಿಸಿದನು. ಇದರಿಂದ ಸಂತುಷ್ಟನಾದ ಮಹಾರಾಜನು ಮಾಲಿದ್ವೀಪದಿಂದ ಮೊದಲಾಗಿ ಕೊಲ್ಲಂವರೆಗಿನ ಪ್ರಾಂತಗಳಲ್ಲಿ ಸಿಗುವ



ಭೂಕಂದಾಯದಲ್ಲಿ ವರ್ಷಂಪ್ರತಿ ಹನ್ನೊಂದು ಸಾವಿರ ಹಣವನ್ನೂ ಕಣ್ಣೂರಿನ ಕೋಟೆಯನ್ನೂ ಕಾನತ್ತೂರು ಮತ್ತು ಕಾನೋತ್ತುಪಾಲಗಳೆಂಬ ಎರಡು ಗ್ರಾಮ ಗಳನ್ನೂ – ಆಲಿಮುಸ್ಸುಖಾನ್ ಮತ್ತು ಅವನ ಮಕ್ಕಳು ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬರುವಂತೆ ನಿಖರಪಡಿಸಿ – ಬಹುಮಾನವಾಗಿ ನೀಡಿದನು. ತದನಂತರ ಕೊಲ್ಲವರ್ಷ ೭೪೦ರಲ್ಲಿ (ಕ್ರಿ.ಶ. ೧೫೬೫) ಕೋಲತ್ತಿರಿಮಹಾರಾಜನು ಏಳಿಮಲೆ ಕೋಟೆಯನ್ನು ಬಿಟ್ಟು ವಳಪಟ್ಟಣಂ ಕೋಟೆಯಲ್ಲೂ, ಆಲಿಮುಸ್ಸು ಮತ್ತು ಅರಯ್ಕಲ್ ಕುಟುಂಬವು ಕಣ್ಣೂರುಕೋಟೆಯಲ್ಲೂ ಬಂದು ನೆಲೆಸಿದರು.

ಅನಂತರ, ಕೊಲ್ಲವರ್ಷ ೭೪೫ ರಲ್ಲಿ (ಕ್ರಿ.ಶ. ೧೫೭೦) ಕೋಲತ್ತಿರಿ ಮಹಾರಾಜನು ಆಲಿಮುಸ್ಸುಖಾನ್‌ನ ಸಹಾಯದಿಂದ ಲಕ್ಷದ್ವೀಪವನ್ನು ಆಕ್ರಮಿಸಿ ವಶಪಡಿಸಿಕೊಂಡನು. ಆ ದ್ವೀಪದ ಆಳರಸರು ವರ್ಷಂಪ್ರತಿ ಆರುಸಾವಿರ ಹಣ ಕಪ್ಪಕೊಡಬೇಕೆಂದು ನಿಖರಪಡಿಸಿ ಲಕ್ಷದ್ವೀಪವನ್ನು ಅರಯ್ಕಲ್ ಬೀಬಿಯ ಆಡಳಿತಕ್ಕೆ ಒಳಪಡಿಸಿಕೊಟ್ಟನು. ಆಲಿಮುಸ್ಸುಖಾನ್‌ಗೆ ' ಅಳಿರಾಜ' ನೆಂಬ ಅಧಿರಾಜ ಸ್ಥಾನವನ್ನೂ ಕಲ್ಪಿಸಿದನು. ಆ ಹೆಸರು ಕಾಲಕ್ರಮೇಣ 'ಆಲಿರಾಜ' ಎಂದು ಬದಲಾಯಿತು.

ಮಲಬಾರು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟ ನಂತರ ಆಗಿನ ಬೀಬಿಯು ತನ್ನ ಅಧೀನದಲ್ಲಿದ್ದ ಲಕ್ಷದ್ವೀಪದ ಆಡಳಿತವನ್ನು ಅವರಿಗೆ ವಹಿಸಿಕೊಟ್ಟಳು. ಬ್ರಿಟಿಷರು ಅಲ್ಲಿನ ಆದಾಯದಲ್ಲಿ ಅರ್ಧಾಂಶವನ್ನು ತನಗೆ ಕೊಡಬೇಕೆಂದು ನಿಗದಿಪಡಿಸಿ ಕರಾರು ಪತ್ರಗಳನ್ನು ಮಾಡಿಕೊಟ್ಟಿದ್ದಳು. ಆದರೆ, ಬ್ರಿಟಿಷರು ಒಪ್ಪಂದ ಮುರಿದು ಆಕೆಗೆ ಏನನ್ನೂ ಕೊಡದೆ ಲಕ್ಷದ್ವೀಪವು ತಮ್ಮ ಸ್ವಂತಭೂಮಿ ಎಂಬಂತೆ ನಡೆದುಕೊಂಡರು. ಕೆಲವು ವರ್ಷಗಳ ನಂತರ ಆಲಿರಾಜವಂಶದವರಿಗೂ ಬ್ರಿಟಿಷರಿಗೂ ನಡುವೆ ಇನ್ನೊಂದು ಒಪ್ಪಂದವೇರ್ಪಟ್ಟು, ಹಿಂದಿನ ಕರಾರನ್ನು ಅವರು ಸಮ್ಮತಿಸಿ ಅದರಂತೆ ನಡೆದು ಕೊಂಡರು. ಹಾಗೆಯೆ, ಚಿರಯ್ಕಲ್ ರಾಜಕುಟುಂಬದೊಡನೆ ಮಾಡಿಕೊಂಡ ಒಪ್ಪಂದದಂತೆ ಅವರು ಬ್ರಿಟಿಷ್ ಸರ್ಕಾರದ ಅಧೀನಸ್ಥರಾಗಿ ನಿಶ್ಚಿತಪ್ರಮಾಣದ ರಾಜಧನವನ್ನು ಪಡೆಯುತ್ತಿದ್ದರು.

ಚಿರಯ್ಕಲ್ ಮತ್ತು ಅರಯ್ಕಲ್ ಮನೆತನಗಳು ಮತ ಧರ್ಮ ಆಚರಣೆಗಳಲ್ಲಿ ವಿಭಿನ್ನವಾಗಿದ್ದರೂ ಈಗಲೂ ಹಿಂದಿನಂತೆಯೆ ಪರಸ್ಪರ ಮೈತ್ರಿ ವಿಶ್ವಾಸಗಳಿಂದ ಆಪ್ತವಾಗಿ ಬಾಳಿಕೊಂಡಿವೆ.

## ನೀನಾಸಮ್ ವರದಿಗಳು

## ನೀನಾಸಮ್ ರಂಗಶಿಕ್ಷಣ ಕೇಂದ್ರ

ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು ತಮ್ಮ ಅಭ್ಯಾಸ ಮಾಲಿಕೆಯ ಎರಡನೆಯ ಪ್ರಯೋಗವಾಗಿ ಪು.ತಿ.ನ.ರ ಗೀತನಾಟಕ 'ಅಹಲ್ಯೆ'ಯನ್ನು ಡಿಸೆಂಬರ್ ಎರಡನೆಯ ವಾರ ಪ್ರದರ್ಶಿಸಿದರು (ನಿ: ಅಕ್ಷರ ಕೆ.ವಿ.). ಆಮೇಲೆ ಶ್ರೀ ಸಿ.ಆರ್. ಜಂಬೆಯವರ ನಿರ್ದೇಶನದಲ್ಲಿ ಷೇಕ್ಸ್‌ಪಿಯರನ 'ಕಿಂಗ್ ಲಿಯರ್' (ಅನುವಾದ: ಶ್ರೀ ಹೆಚ್.ಎಸ್. ಶಿವಪ್ರಕಾಶ್) ನಾಟಕ ಪ್ರದರ್ಶನಗೊಂಡಿತು. ವಿದ್ಯಾರ್ಥಿಗಳು ಸ್ಥಳೀಯ ಪ್ರಾಥಮಿಕ ಶಾಲೆಯ ಮಕ್ಕಳಿಗಾಗಿ ಶ್ರೀಮತಿ ವೈದೇಹಿಯವರ 'ಹಕ್ಕೀಕತೆ' ಎಂಬ ಮಕ್ಕಳನಾಟಕ ವನ್ನು ರಂಗಕ್ಕೆ ತಂದರು. ಈ ಅವಧಿಯಲ್ಲಿ ಅತಿಥಿ ಉಪನ್ಯಾಸಕರುಗಳಿಂದ ವಿಶೇಷ ಪ್ರಾಯೋಗಿಕ ತರಗತಿಗಳು ನಡೆದವು – ಮೊಗವಾಡ ತಯಾರಿ (ಶ್ರೀ ಪುರುಷೋತ್ತಮ ತಲವಾಟ), ಬೆಳಕಿನ ವಿನ್ಯಾಸ (ಶ್ರೀ ಎಂ.ಎಂ. ಕೃಷ್ಣಮೂರ್ತಿ), ಸ್ಕ್ರೀನ್ ಪ್ರಿಂಟಿಂಗ್ (ಶ್ರೀ ಗುರುಮೂರ್ತಿ ವರದಾಮೂಲ), ವರ್ಣವಿನ್ಯಾಸ (ಶ್ರೀ ಪುರುಷೋತ್ತಮ ತಲವಾಟ ಮತ್ತು ಜಹಾಂಗೀರ್) – ಮುಂತಾಗಿ.

ನವೆಂಬರ್ ಮೊದಲವಾರ, ವಿದ್ಯಾರ್ಥಿಗಳಿಗಾಗಿ ಒಂದು ತಾಳಮದ್ದಲೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಶ್ರೀಯುತರಾದ ಕೊಳಗಿ ಅನಂತ ಹೆಗಡೆ, ಎಂ.ಆರ್. ವಾಸುದೇವ ಸಾಮಗ, ಮಾಧವ ಹೆಗಡೆ ಮುಂತಾದವರು ಕಾರ್ಯಕ್ರಮ ನಡೆಸಿಕೊಟ್ಟರು. ಹಾಗೆಯೇ, ನವೆಂಬರ್ ೧೫ ಮತ್ತು ೧೯ರಂದು ಗಮಕ ಕಾರ್ಯಕ್ರಮ ವನ್ನು ನಡೆಸಲಾಗಿತ್ತು. ಶ್ರೀ ಹೊಸಬಾಳೆ ಸೀತಾರಾಮರಾವ್ ಅವರ ಕಾವ್ಯವಾಚನಕ್ಕೆ ಶ್ರೀ ಎಂ.ಆರ್. ಲಕ್ಷ್ಮೀನಾರಾಯಣ ರಾವ್ ಅವರು ವ್ಯಾಖ್ಯಾನ ನೀಡಿದರು. ನವೆಂಬರ್ ೨೧ ಮತ್ತು ೨೨ರಂದು ಪಂಡಿತ ಶ್ರೀ ಹಾಸಣಗಿ ಗಣಪತಿ ಭಟ್ಟರು ಮತ್ತು ಅವರ ಶಿಷ್ಯರು 'ಗುರು-ಶಿಷ್ಯ ಪರಂಪರೆ' ಯ ಹಿಂದೂಸ್ತಾನಿ ಗಾಯನ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ನವೆಂಬರ್ ೧೪-೧೫ ರಂದು ಕುವೆಂಪು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ ಎರಡು ದಿನಗಳ ರಂಗ ಪರಿಚಯ ಶಿಬಿರವನ್ನು ನೀನಾಸಮ್ ಆವರಣದಲ್ಲಿ ಏರ್ಪಡಿಸಲಾಗಿತ್ತು. ಜನವರಿ ೧೧ರಂದು ವಿದ್ಯಾರ್ಥಿಗಳು ತೀರ್ಥಹಳ್ಳಿಗೆ ಹೋಗಿ ಶ್ರೀ ಹುಚ್ಚೇಶ್ವರ ನಾಟಕ ಮಂಡಳಿಯವರ 'ತಾಳಿ ಕಟ್ಟಿದರೂ ಗಂಡನಲ್ಲ' ಎಂಬ ನಾಟಕವನ್ನು ನೋಡಿ, ಮಂಡಳಿಯ ಮುಖ್ಯಸ್ಥರಾದ ಶ್ರೀ ಬಿ.ಆರ್. ಅರಿಶಿನಗೋಡಿ ಯವರೊಡನೆ ಮಾತುಕತೆ ನಡೆಸಿ, ಕಂಪೆನಿನಾಟಕದ ಬಗ್ಗೆ ತಿಳಿದುಬಂದರು.



## ನೀನಾಸಮ್ ಪ್ರತಿಷ್ಠಾನ

೧೯೯೮ ನೇ ನವೆಂಬರ್ ೨೧ ಮತ್ತು ೨೨ ರಂದು ಹೊಸನಗರದ ಕೊಡಚಾದ್ರಿ ಕಾಲೇಜಿನ ವಿದ್ಯಾರ್ಥಿ ಸಂಘದ ಸಹಯೋಗದೊಂದಿಗೆ 'ಡಾ. ಡಿ.ಆರ್. ನಾಗರಾಜ್ ಸ್ಮಾರಕ ವಿಮರ್ಶಾ ಶಿಬಿರ' ವನ್ನು ನಡೆಸಲಾಯಿತು. ಈ ಶಿಬಿರದಲ್ಲಿ ಪ್ರೊ. ಟಿ.ಪಿ. ಅಶೋಕ, ಡಾ। ಪ್ರಭುಸ್ವಾಮಿ ಮಠ, ಡಾ। ಗುರುರಾವ್ ಬಾಪಟ್ ಮತ್ತು ಶ್ರೀ ಕೆ.ವಿ. ಸುಬ್ಬಣ್ಣ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಶಿಬಿರ ನಡೆಸಿಕೊಟ್ಟರು. ೧೩ ಡಿಸೆಂಬರ್ ೯೮ರಂದು ಭದ್ರಾವತಿಯ ಶರಣ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ 'ಅನುಭಾವ ಸಾಹಿತ್ಯ' ಕುರಿತು ಒಂದು ದಿನದ ಶಿಬಿರ ನಡೆಸಲಾಗಿತ್ತು. ೧೯ ಮತ್ತು ೨೦ ಡಿಸೆಂಬರ್ ೯೮ರಂದು ಉಜಿರೆಯಲ್ಲಿ 'ಕಾರಂತರ ಕಾದಂಬರಿಗಳು' ಎಂಬ ವಿಷಯದಲ್ಲಿ ಎರಡು ದಿನಗಳ ಶಿಬಿರ ನಡೆಸಲಾಗಿತ್ತು. ದಿನಾಂಕ ೩, ಜನವರಿ ೧೯೯ರಂದು ಸಾಗರದ ಲಾಲ್‌ಬಹಾದೂರ್ ಕಾಲೇಜಿನ ಕನ್ನಡ ಸಂಘದ ಸಹಯೋಗದಲ್ಲಿ 'ಡಿ.ಆರ್. ನಾಗರಾಜ್ ವಿಮರ್ಶಾ ಶಿಬಿರ' ವನ್ನು ನಡೆಸಲಾಯಿತು. ಜನವರಿ ೩೦ ಮತ್ತು ೩೧ ರಂದು ಕುಪ್ಪಳಿಯಲ್ಲಿ ಕುವೆಂಪು ಸ್ಮಾರಕ ಪ್ರತಿಷ್ಠಾನದ ನೆರವಿನೊಂದಿಗೆ 'ಕನ್ನಡ ವಿಮರ್ಶೆ' ಯ ಕುರಿತು ಎರಡು ದಿನಗಳ ಕಮ್ಮಟವನ್ನು ನಡೆಸಲಾಯಿತು. ೧೮೫ ಮಂದಿ ಶಿಬಿರಾರ್ಥಿಗಳು ಭಾಗವಹಿಸಿದ್ದ ಈ ಶಿಬಿರದಲ್ಲಿ ಶ್ರೀಯುತರಾದ ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಕೆ.ವಿ. ಸುಬ್ಬಣ್ಣ, ಡಾ। ರಾಜೇಂದ್ರ ಚೆನ್ನಿ, ಡಾ। ಕೆ.ವಿ. ನಾರಾಯಣ, ಡಾ। ಪ್ರಭುಸ್ವಾಮಿ ಮಠ, ಅಕ್ಷರ ಕೆ.ವಿ. ಶ್ರೀಮತಿ ಎಲ್. ಸಿ. ಸುಮಿತ್ರ ಮುಂತಾದವರು ಸಂಪನ್ಮೂಲ ವ್ಯಕ್ತಿಗಳಾಗಿ ಸಹಕರಿಸಿದರು. ದಿನಾಂಕ ೫,೬,೭ ಫೆಬ್ರವರಿ ೯೯ರಂದು ಧಾರವಾಡದಲ್ಲಿ ಕರ್ನಾಟಕ ಕಾಲೇಜಿನ ಸಹಯೋಗದೊಂದಿಗೆ 'ಆಧುನಿಕ ಕನ್ನಡ ಸಾಹಿತ್ಯ' ದ ಕುರಿತು ಶಿಬಿರ ನಡೆಸಲಾಯಿತು. ೭೨ ಮಂದಿ ಶಿಬಿರಾರ್ಥಿಗಳು ಪಾಲ್ಗೊಂಡ ಈ ಶಿಬಿರದಲ್ಲಿ ಡಾ। ಗಿರಡ್ಡಿ ಗೋವಿಂದರಾಜ, ಪ್ರೊ। ಕಿ.ರಂ.ನಾಗರಾಜ್, ಶ್ರೀ ಎಸ್.ಆರ್. ವಿಜಯಶಂಕರ, ಡಾ। ಪ್ರಭುಸ್ವಾಮಿ ಮಠ, ಅಕ್ಷರ ಕೆ.ವಿ., ಟಿ.ಪಿ. ಅಶೋಕ, ಶ್ರೀಮತಿ ಬಿ.ಎನ್. ಸುಮಿತ್ರಾಬಾಯಿ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಸಹಕರಿಸಿದರು. ಫೆಬ್ರವರಿ ೧೨ ಮತ್ತು ೧೩ ರಂದು ಬ್ರಹ್ಮಾವರದಲ್ಲಿ 'ಡಾ। ಚಂದ್ರಶೇಖರ ಕಂಬಾರ ಸಾಹಿತ್ಯ ಅಧ್ಯಯನ' ಶಿಬಿರ ನಡೆಯಿತು. ಪ್ರೊ। ಟಿ.ಪಿ. ಅಶೋಕ, ಪ್ರೊ. ಕೀ.ರಂ. ನಾಗರಾಜ್, ಡಾ। ಮಲ್ಲೇಪುರಂ ಜಿ. ವೆಂಕಟೇಶ, ಅಕ್ಷರ ಕೆ.ವಿ., ವೆಂಕಟರಮಣ ಐತಾಳ ಇವರು ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಸ್ಥಳೀಯ ಎಸ್. ಎಮ್. ಎಸ್. ಕಾಲೇಜು ಈ ಕಮ್ಮಟವನ್ನು ಆಯೋಜಿಸಿತ್ತು. ಬೇರೆ ಬೇರೆ ಕಾಲೇಜುಗಳಿಂದ ಬಂದ ಸುಮಾರು ೭೦ ಮಂದಿ ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಭಾಗವಹಿಸಿದ್ದರು.

**ಮಾತುಕತೆ ೪೯**

ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭

ದೂರವಾಣಿ: ೦೮೧೮೩-೬೫೬೪೬

ಖಾಸಗಿ ಪ್ರಸಾರದ ತ್ರೈಮಾಸಿಕ ಸಂಪರ್ಕಪತ್ರ

(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಜಶವಂತ ಜಾಧವ್

ಸಹ ಸಂಪಾದಕ: ವೆಂಕಟರಮಣ ಐತಾಳ್ ಬಿ. ಆರ್.

ವಾರ್ಷಿಕ ವರ್ಗಣಿ: ಇಪ್ಪತ್ತೈದು ರೂಪಾಯಿ

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು

ಮುದ್ರಣ: ಅಶ್ವಿನಿ ಗ್ರಾಫಿಕ್ಸ್, ಅರಳೇಪೇಟೆ, ಬೆಂಗಳೂರು

---

**ಫೆಬ್ರವರಿ ೧೯೯೯ ವರ್ಷ ಹದಿಮೂರು ಸಂಚಿಕೆ ಒಂದು**

---

೧. ಆತಂಕಿತ ಹಿಂದೂ ಮತ್ತು ಕುಪಿತ ರೈತ: ಜಾಗತೀಕರಣದ ಪ್ರಕ್ರಿಯೆಗೆ
ಭಾರತದ ಪ್ರತಿಸ್ಪಂದನೆಯ ಎರಡು ರೂಪಗಳು
ಡಿ.ಆರ್. ನಾಗರಾಜ / ಪುಟ ೩

೨. ಐತಿಹ್ಯಮಾಲೆಯ ಕಥೆಗಳು
ಮಲಯಾಳಂ ಮೂಲ: ಕೊಟ್ಟಾರತ್ತಿಲ್ ಶಂಕುಣ್ಣಿ
ಅನುವಾದ: ಬಿ. ಆರ್. ವೆಂಕಟರಮಣ ಐತಾಳ / ಪುಟ ೩೧

೩. ನೀನಾಸಮ್ ವರದಿಗಳು / ಪುಟ ೪೩

---

**MAATHUKATHE** FEBRUARY 1999 (YEAR 13 ISSUE 1)
NINASAM QUARTERLY NEWS LETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.25(TWENTY FIVE ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**

**ಅಕ್ಷರ ಪ್ರಕಾಶನ**

**ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭**

**ಈಚಿನ ಪ್ರಕಟಣೆಗಳು**

೧. **ಸಹ್ಯಾದ್ರಿ ಕಾಂಡ** (ನಾಟಕ - ಅಕ್ಷರ ಕೆ.ವಿ.) ರೂ.೪೦

೨. **ಇಂದಿನ ಹೆಜ್ಜೆ** (ವಚನ ಸಾಹಿತ್ಯ ವಿಮರ್ಶೆ)
ಓ.ಎಲ್.ನಾಗಭೂಷಣಸ್ವಾಮಿ ರೂ.೪೦

೩. **ಮತ್ತೊಂದು ಮೌನ ಕಣಿವೆ** (ಪರಿಸರ ಸಂಬಂಧಿ ಬರಹಗಳು)
ಸತೀಶ ಚಪ್ಪರಿಕೆ ಮತ್ತು ಅ.ನ. ಯಲ್ಲಪ್ಪ ರೆಡ್ಡಿ ರೂ.೪೦

೪. **ಅಭಿನವಗುಪ್ತ** (ಅಕ್ಷರ ಚಿಂತನ ಮಾಲೆ)
ಪಾದೇಕಲ್ಲು ನರಸಿಂಹ ಭಟ್ಟ ರೂ.೬೦

೫. **ಮಾನುಷಿಯ ಮಾತು** (ಅಕ್ಷರ ಚಿಂತನ ಮಾಲೆ)
ಮಧುಕೀಶ್ವರ್ ಅವರ ಬರಹಗಳು – ಅನುವಾದ: ಎಲ್.ಜಿ. ಮೀರಾ ರೂ.೫೫

೬. **ಅಪರೂಪದ ಹಕ್ಕಿ** (ಅಕ್ಷರ ಕವಿಸಂಧಾನ ಮಾಲೆ)
ಅಸ್ಸಾಮಿ ಕವಿತೆಗಳು – ಅನುವಾದ: ಕೃಷ್ಣ ಪಾಟೀಲ ರೂ.೬೦

೭. **ನಡೆದದ್ದೇ ದಾರಿ** (ಕವನ ಸಂಕಲನ - ಶಾ. ಬಾಲುರಾವ್) ರೂ.೫೦

೮. **ಮಾವಿನಮರದಲ್ಲಿ ಬಾಳೆಯ ಹಣ್ಣು**
(ನಾಟಕ-ರಂಗಭೂಮಿ ಕುರಿತ ಬರಹಗಳು - ಅಕ್ಷರ ಕೆ.ವಿ.) ರೂ.೭೫

೯. **ಅಮೃತ ಮತ್ತು ಗರುಡ**
(ಡಾ. ಡಿ.ಆರ್. ನಾಗರಾಜ್ ಬರಹಗಳ ಮರುಮುದ್ರಣ) ರೂ. ೬೫

೧೦. **ಪ್ರತಿಭೆಯ ಒಂದು ಪ್ರವಾಹ**
(ಅಕ್ಷರ ಚಿಂತನ ಮಾಲೆ- ಶಿವ ವಿಶ್ವನಾಥನ್ ಬರಹಗಳು-ಅನು:ಅಕ್ಷರ ಕೆ.ವಿ) ರೂ. ೫೦

೧೧. **ಐತಿಹ್ಯಮಾಲೆಯ ಕಥೆಗಳು**
(ಅಕ್ಷರ ಚಿಂತನ ಮಾಲೆ- ಕೊಟ್ಟಾರತ್ತಿಲ್ ಶಂಕುಣ್ಣಿ- ಅನು:ಬಿ.ಆರ್.ವಿ. ಐತಾಳ) ರೂ. ೫೦

೧೨. **ಶತಮಾನದ ಕುಸುಮ**
(ಡಾ. ಕುಸುಮಾ ಸೊರಬ ಕುರಿತ ಬರಹಗಳು-ಸಂ: ನಾಗೇಶ ಹೆಗಡೆ) ರೂ. ೮೦

೧೩. **ಹಸಿರು ಹಾದಿ**
(ಯಲ್ಲಪ್ಪ ರೆಡ್ಡಿ ಆತ್ಮಕಥನ-ನಿರೂಪಣೆ: ಸತೀಶ್ ಚಪ್ಪರಿಕೆ) ರೂ. ೮೦

**ಮುಂದಿನ ಪ್ರಕಟಣೆಗಳು**

೧. **ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ** (ಡಾ.ಡಿ.ಆರ್. ನಾಗರಾಜ್)

೨. **ಹೋಲೆ... ಹೋಲೆ... ಬೆಳ್ಳಕ್ಕಿಮಾಲೆ** (ಕವನಗಳು-ಶಾ.ಬಾಲುರಾವ್)

೩. **ಸಂಗೀತ ಸಂವಾದ** (ಭಾಸ್ಕರ್ ಚಂದಾವರ್ಕರ್-ಅನು: ವೈದೇಹಿ)

೪. **ಬಹುಮುಖ** (ಅಕ್ಷರ ಚಿಂತನ ಮಾಲೆ- ಮನು ಚಕ್ರವರ್ತಿ)